ಅಧ್ಯಕ್ಷರು :- ವಿರೋಧಪಕ್ಷದ ನಾಯಕರನ್ನು ಸಂಪರ್ಕಿಸಿ, they will move. ಸಭಾಪತಿ ಚುನಾವಣೆ ನಡೆಯುತ್ತಿದೆ, ಅಭಿನಂದನೆ ಮಾಡಲು ಅವರು ಅಲ್ಲಿಗೆ ಹೋಗಿದ್ದಾರೆ, ಇಲ್ಲಿಗೆ ಬರುತ್ತಾರೆ. Meanwhile, ಒಂದು ಬಿಲ್ ತೆಗೆದುಕೊಳ್ಳೋಣ.

ಶ್ರೀ ಎನ್. ಧರ್ಮಸಿಂಗ್ :- ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಪ್ರಾರಂಭವಾಗಲಿ, ಮತ್ತೆ ಅವರು ಬಂದು ಇದಕ್ಕೆ ಉತ್ತರವನ್ನು ಕೊಡಲಿ, ಇದನ್ನು ಬಿಟ್ಟು ಬಿಲ್‌ಗೆ ಅವಕಾಶ ಮಾಡಿಕೊಡುವುದು ಸರಿ ಹೋಗುವುದಿಲ್ಲ. ಇದು ಮಹತ್ವವಾದ ವಿಚಾರ ಇದು ಆಗಲೇ ಬೇಕು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, 32 ಬಿಲ್‌ಗಳಿದ್ದಾವೆ, ನಿಮ್ಮ ವಿಷಯದ ಬಗ್ಗೆಯೂ ಚರ್ಚೆಯಾಗಲಿ, ಮಾನ್ಯ ಉಪ ಮುಖ್ಯಮಂತ್ರಿಗಳು ವಿಧಾನಪರಿಷತ್‌ನಲ್ಲಿ ಸಭಾಪತಿಯವರ ಚುನಾವಣೆ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗಿದ್ದಾರೆ, ಇಲ್ಲಿಗೆ ಬರುತ್ತಾರೆ, ಅಲ್ಲಿಯವರೆಗೆ ಬಿಲ್‌ಗಳನ್ನು ತೆಗೆದುಕೊಂಡು ಚರ್ಚೆ ಮಾಡಬಹುದು, ಅವರು ಬಂದ ಮೇಲೆ ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಅಲ್ಲಿಯವರೆಗೆ ಉಳಿದ ಬಿಸಿನೆಸ್ ಮಾಡೋಣ, ಯಾವ ಒಂದು ಬಿಲ್ ಬಗ್ಗೆಯೂ ಚರ್ಚೆಯಾಗಲಿಲ್ಲ.

ಅಧ್ಯಕ್ಷರು :- ಸರ್, ಒಂದು ಬಿಲ್ ತೆಗೆದುಕೊಂಡು ಚರ್ಚೆ ಮಾಡೋಣ, ಅವರು ಬರಲಿ, ಬಂದು ಉತ್ತರವನ್ನು ಕೊಡುತ್ತಾರೆ.

2. ಶಾಸನ ರಚನೆ

ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಜಗದೀಶ್ ಶೆಟ್ಟರ್ :- ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2007 ಅನ್ನು ಇವತ್ತು ನಾನು ಇಲ್ಲಿ ಮಂಡನೆ ಮಾಡಿದ್ದೇನೆ ಮತ್ತು ಪರ್ಯಾಲೋಚನೆಯ ಸಲುವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ರೆವಿನ್ಯ ಖಾತೆಯಲ್ಲಿ, ರೆವಿನ್ಯು ಆಡಳಿತದಲ್ಲಿ ಹಿಂದೆ ಇದ್ದಂತಹ ವ್ಯವಸ್ಥೆಯಲ್ಲಿ Divisional

Commissioners ಎಂದು ಇಡೀ ಕರ್ನಾಟಕ ರಾಜ್ಯದಲ್ಲಿ 4 ಕಡೆ ಇತ್ತು. ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಹಾರ್ನಹಳ್ಳಿ ರಾಮಸ್ವಾಮಿಯವರ ಆಯೋಗವೇನು ಆಡಳಿತ ಸುಧಾರಣೆಯ ವರದಿಯನ್ನು ಕೊಟ್ಟರು, ಅವರ ವರದಿಯಲ್ಲಿ ಆಡಳಿತ ಸುಧಾರಣೆಯ ಸಲುವಾಗಿ ಕೆಲವು ಕಚೇರಿಗಳ ಅಸ್ತಿತ್ವವನ್ನು ತೆಗೆದುಹಾಕಬೇಕು, ಹೀಗೆ ಕೆಲವೊಂದು ವಿಷಯಗಳ ಬಗ್ಗೆ ಅದರಲ್ಲಿ ಹೇಳಲಾಗಿತ್ತು. ಆ ಒಂದು ಹಿನ್ನೆಲೆಯಲ್ಲಿ Divisional Commissioners ಹುದ್ದೆಗಳನ್ನು ತೆಗೆಯುವ ನಿರ್ಧಾರವನ್ನು 26–3–2003 ರಲ್ಲಿ ಮಾಡಲಾಯಿತು. ಅವತ್ತಿನ ಸರ್ಕಾರ ಅವತ್ತಿನ Government Notification ಪ್ರಕಾರ ಆ Divisional Commissioners ಹುದ್ದೆಗಳನ್ನು ರದ್ದು ಮಾಡಿತು.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಸರ್ಕಾರದಿಂದ ಮಿಸ್‌ಲೀಡಿಂಗ್ ಆಗಬಾರದು. ಆಡಳಿತ ಸುಧಾರಣ ಆಯೋಗವನ್ನು ಏತಕ್ಕೆ ಮಾಡಿದರು? ಆಡಳಿತಕ್ಕೆ ಹೊರೆಯಾಗುತ್ತಿದೆ, ಸಂಬಳಗಳು ಜಾಸ್ತಿಯಾಗುತ್ತದೆ, ಅನಗತ್ಯ ಹುದ್ದೆಗಳಿದ್ದಾವೆ, ಅವುಗಳನ್ನೆಲ್ಲಾ ತೆಗೆಯಬೇಕು, ಸಾಧ್ಯವಾದರೆ ಸುಧಾರಿಸಬೇಕು, ಇದರ ಸೈಜ್ ಕಡಿಮೆ ಮಾಡಬೇಕು, ಅನಗತ್ಯ ಹೊರೆ ಕಡಿಮೆ ಮಾಡಬೇಕೆಂದು, ಪ್ರಿಯಾಂಬಲ್ ಇಟ್ಟುಕೊಂಡು, ಆ ಕಮಿಷನ್‌ಗೆ ದುಡ್ಡು ಖರ್ಚು ಮಾಡಿ, ಅವರಿಗೆ ಬಂಡವಾಳ ಹಾಕಿ, ಅವರಿಗೆ ಕಚೇರಿಯನ್ನು ಕೊಟ್ಟು, ಅವರು ರಾಜ್ಯವನ್ನೆಲ್ಲಾ ಸುತ್ತಿ ವರದಿ ಕೊಟ್ಟರು. ನೀವು ಬೇರೆ ರೀತಿಯಲ್ಲಿ ಹೇಳುವುದಕ್ಕೆ ಹೊರಟಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ :– ನಾನು ಕಂಪ್ಲೀಟ್ ಮಾಡುತ್ತೇನೆ, ನಂತರ ತಾವು ತಮ್ಮ ವಾದವನ್ನು ಹೇಳಬಹುದು. ದಿನಾಂಕ 26–3–2003 ರಂದು ಅವತ್ತಿನ ಸರ್ಕಾರ ಈ Divisional Commissioners ಹುದ್ದೆಗಳನ್ನು ರದ್ದು ಮಾಡಿ, ಅವರಿಗೇನು ಪವರ್ಸ್ ಇತ್ತು, ರಿವಿಷನ್ ಪವರ್ ಇರಬಹುದು, ಅಪೀಲ್ ಪವರ್ ಇರಬಹುದು, ಅಂದರೆ ತಹಸೀಲ್ದಾರ್ ಕಡೆಯಿಂದ RTS ಕೇಸ್ ಏನಾಗುತ್ತವೆ, ಅದರ ಮೇಲೆ ನಿರ್ಣಯವಾದ ಮೇಲೆ ಎಸಿ, ಡಿಸಿ ಕಡೆಯಿಂದ ಏನು ನಿರ್ಣಯವಾಗುತ್ತದೆ ಅದರ ಮೇಲೆ ಕೆಲವೊಂದು ಪ್ರಾವಿಷನ್ ಪ್ರಕಾರ ಕೆಲವೊಂದು ಪ್ರಕರಣಗಳಲ್ಲಿ Divisional Commissioners ಗೆ ಆ ಒಂದು ಅಪೀಲ್‌ಗಳನ್ನು ಹಿಯರ್ ಮಾಡುವುದು, ಅದಕ್ಕೆ ತೀರ್ಪು ಕೊಡುವ ಅಧಿಕಾರವಿತ್ತು. ಮತ್ತೆ ಆ Divisional Commissioners ತಮ್ಮ ವ್ಯಾಪ್ತಿಯೊಳಗೇನು DC ಗಳು ಬರುತ್ತಾರೆ, ಅವರ ವ್ಯಾಪ್ತಿಯೊಳಗೆ ಪ್ರದೇಶಗಳು ಬರುತ್ತಾವೆ, ಅಲ್ಲಿ inspection ಮಾಡುವುದು, ಅದರ ಮೇಲೆ ಪೂರ್ತಿ ಆಡಳಿತ ವ್ಯವಸ್ಥೆಯನ್ನು ತರುವ ಅಧಿಕಾರ Divisional Commissioners ಗೆ ಇತ್ತು. ಅದು ರದ್ದಾದ ಮೇಲೆ ಮುಂದೆ ಹಲವಾರು ಸಮಸ್ಯೆಗಳು ಪ್ರಾರಂಭವಾದವು. ಇವತ್ತು ಡಿಸಿಯವರು ಯಾವುದೋ ಒಂದು ಆಜ್ಞೆಯನ್ನು ಮಾಡಿದ

ಸಂದರ್ಭದಲ್ಲಿ, ನಂತರದ ಅಪೀಲ್ ಅನ್ನು ಸೆಕ್ರಟರಿ ಲೆವಲ್‌ನಲ್ಲಿ, High Court, ಮತ್ತು KAT ಲೆವಲ್‌ನಲ್ಲಿ ಮಾಡುವ ಈ ವ್ಯವಸ್ಥೆ ಪ್ರಾರಂಭವಾದ ಮೇಲೆ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಗಳಾಯಿತು. ಅವತ್ತು ಮಾನ್ಯ ಧರ್ಮಸಿಂಗ್ ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಅಂದರೆ ದಿನಾಂಕ : 8–9–2005 ರಲ್ಲಿ ಅವತ್ತಿನ ಸರ್ಕಾರ ಈ Divisional Commissioner ಹುದ್ದೆ ರದ್ದಾದ ಮೇಲೆ ಮತ್ತೆ ಆಡಳಿತದಲ್ಲಿ ಒಂದು ಸುಧಾರಣೆ ತರಲು ಮತ್ತು ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ಸರಿ ಮಾಡಬೇಕೆನ್ನುವ ಉದ್ದೇಶವಿಟ್ಟುಕೊಂಡು ಸರ್ಕಾರದ ಒಂದು ಆಜ್ಞೆಯನ್ನು ತಂದು Regional Commissioners ಎಂದು ಹುದ್ದೆಗಳನ್ನು ಸೃಷ್ಟಿಮಾಡಲಾಯಿತು. ಆ ಸರ್ಕಾರಿ ಆಜ್ಞೆಯ ಪ್ರಕಾರ, ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ ಈ ರೀತಿ ಹಿಂದೆ ಏನು Divisional Commissioners ಹುದ್ದೆಗಳಿದ್ದವು ಅದೇ ರೀತಿಯಾಗಿ ಮತ್ತೆ Regional Commissioners ಎಂದು ನಾಲ್ಕು ಹುದ್ದೆಗಳನ್ನು ಸೃಷ್ಟಿಸಲಾಯಿತು. ಆದರೆ ಅವನ್ನು ಸೃಷ್ಟಿಸಿದ ಮೇಲೆ ಅಲ್ಲಿಗೆ ಕೆಲವೊಂದು ಹಿರಿಯ ಐಎಎಸ್ ಅಧಿಕಾರಗಳನ್ನು ಪೋಸ್ಟಿಂಗ್ ಮಾಡಲಾಯಿತು. ಆದರೆ ಅವರಿಗೆ ಯಾವುದೇ ರೀತಿಯಾದ ಅಧಿಕಾರ ಇರಲಿಲ್ಲ. ಈ ನೋಟಿಫಿಕೇಷನ್ ಪ್ರಕಾರ ನಿರ್ಣಯ ತೆಗೆದುಕೊಂಡು, ಆ ರೀಜನಲ್ ಕಮಿಷನರ್‌ಗಳ ಹುದ್ದೆಗಳನ್ನು ಸೃಷ್ಟಿ ಮಾಡಲಾಯಿತು, ಅದರ ಪ್ರಕಾರ ಅವರಿಗೆ ಯಾವುದೇ ಪವರ್ ಕೊಡಲಿಲ್ಲ. ಪವರ್ ಇಲ್ಲದೇ ನಾವು ಆ ರೀಜನಲ್ ಕಮಿಷನರ್ ಹುದ್ದೆಗಳನ್ನು ನಿರ್ಮಾಣ ಮಾಡುವುದರಿಂದ ಅದಕ್ಕೆ ಏನು ಮಹತ್ವ ಸಿಗಬೇಕಾಗಿತ್ತು ಆ ಮಹತ್ವ ಸಿಗದೇ ಇದ್ದುದರಿಂದ ಆ ರೀಜನಲ್ ಕಮಿಷನರ್‌ಗಳು ಕೇವಲ ಉತ್ಸವ ಮೂರ್ತಿಗಳಾಗಿ ಕೆಲಸ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಿ ಡಿವಿಷನಲ್ ಕಮಿಷನರ್‌ಗಳಿಗೆ ಮೊದಲು ಏನು ಅಧಿಕಾರಗಳು ಇದ್ದವು, ಆ ಅಧಿಕಾರಗಳನ್ನು ಅವರಿಗೆ ಕೊಡಬೇಕೆನ್ನುವ ಉದ್ದೇಶದಿಂದ ಇವತ್ತು ನಾನು ಈ ಬಿಲ್ಲನ್ನು ಮಂಡಿಸುತ್ತಿದ್ದೇನೆ. Karnataka Land Revenue Act ಪ್ರಕಾರ ಏನು ಒಂದು ಅಪಿಲೇಟ್ ಪವರ್ಸ್ ಇದೆ, ಮತ್ತು ಅವರು ಏನು ಕಾರ್ಯಗಳನ್ನು ಮಾಡಬೇಕು, ಅದೇ ರೀತಿ ಬೇರೆ ಬೇರೆ ಮೈಸೂರು ವೈಯಕ್ತಿಕ ಸಂಕೀರ್ಣಗಳ ಇನಾಮು ರದ್ಧತಿ ಪ್ರಕಾರ, ಮೈಸೂರು ಧಾರ್ಮಿಕ ಮತ್ತು ಧರ್ಮದತ್ತಿ ಇನಾಮುಗಳ ರದ್ದತಿ ಅಧಿನಿಯಮದ ಪ್ರಕಾರ, ಕರ್ನಾಟಕ ಪೌರಸಭೆಗಳ ಅಧಿನಿಯಮ, ಕರ್ನಾಟಕ ಭೂ ಸುಧಾರಣೆ ಅಧಿನಿಯಮ, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, ಕರ್ನಾಟಕ ನೀರಾವರಿ ಅಧಿನಿಯಮ, ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ, ಕರ್ನಾಟಕ ಸಂಡೂರು ಪ್ರದೇಶಗಳ ಇನಾಮು ರದ್ಧತಿ ಅದಿನಿಯಮ, ಈ ರೀತಿ ಹಲವಾರು ಕಾನೂನುಗಳಿವೆ, ಇದರ ಪ್ರಕಾರ D.C. ಆಜ್ಞೆಗಳ ನಂತರ ಅಪಿಲೇಟ್ ಅಥಾರಿಟಿ ಏನಿದೆ, ಆ ಪವರ್‌ಗಳನ್ನು ಕೊಡುವಂಥದ್ದು,

ಮತ್ತು ರೀಜನಲ್ ಕಮಿಷನರ್‌ಗಳನ್ನು ಹೆಚ್ಚು strengthen ಮಾಡುವಂತಹ ಉದ್ದೇಶದಿಂದ ಇವತ್ತು ಈ ಬಿಲ್ಲನ್ನು ತೆಗೆದುಕೊಂಡಿದ್ದೇವೆ. ಮಾನ್ಯ ರಮೇಶ್‌ಕುಮಾರ್‌ರವರು ಕೆಲವೊಂದು ವಿಷಯಗಳನ್ನು ಎತ್ತಿದರು, ಹಾರ್‍ನಹಳ್ಳಿ ರಾಮಸ್ವಾಮಿಯವರ ಆಯೋಗ ಏನು ನೇಮಕವಾಯಿತು, ಆಡಳಿತ ಸುಧಾರಣೆ ಮಾಡಿ, ಆಡಳಿತದಲ್ಲಿ ಬದಲಾವಣೆಗಳನ್ನು ತರಬೇಕೆನ್ನುವ ಮೂಲ ಉದ್ದೇಶದಿಂದ ಈ ಆಯೋಗವನ್ನು ಮಾಡಲಾಯಿತು. ಮಾನ್ಯ ಹಾರ್‍ನಹಳ್ಳಿ ರಾಮಸ್ವಾಮಿಯವರ ಮೂಲ ಉದ್ದೇಶ ಕೆಲವೊಂದು ಹುದ್ದೆಗಳನ್ನು ರದ್ದು ಮಾಡುವುದಾಗಿತ್ತು. ಕೆಲವೊಂದು ಹುದ್ದೆಗಳನ್ನು ನಾವು ರದ್ದು ಮಾಡಿ ಪ್ರಯೋಗ ಮಾಡಿ ನೋಡಿದೆವು. ಮಾನ್ಯ ಹಾರ್‍ನಹಳ್ಳಿ ರಾಮಸ್ವಾಮಿಯವರ ಆಯೋಗ ಏನು ಒಂದು ವರದಿ ಕೊಟ್ಟಿತ್ತು, ಅದರ ಪ್ರಕಾರ ಅವತ್ತಿನ ಸರ್ಕಾರ ಈ ಒಂದು ಹುದ್ದೆಗಳನ್ನು ರದ್ದು ಮಾಡುವುದಕ್ಕೆ ಪ್ರಯೋಗ ಮಾಡಿದ ಮೇಲೆ, public ಗೆ inconvenient ಆಗುತ್ತದೆ ಎಂದು ತಿಳಿದುಕೊಂಡು ಮತ್ತೆ ರೀಜನಲ್ ಕಮಿಷನರ್ ಹುದ್ದೆಗಳನ್ನು ಸೃಷ್ಟಿ ಮಾಡಲಾಯಿತು. ಹೀಗಾಗಿ ಈ ಬಿಲ್ಲಿನ ಮುಖಾಂತರ ನಾವು ಅವರಿಗೆ ಅಧಿಕಾರ ಕೊಡುತ್ತಿದ್ದೇವೆ. ಅದಕ್ಕಾಗಿ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ಮತ್ತ ಈ ಸದನಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ರೀಜನಲ್ ಕಮಿಷನರ್‌ಗೆ ಅಧಿಕಾರ ಕೊಡುವಂತಹ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೇನೆ, ದಯವಿಟ್ಟು ತಾವು ಈ ಬಿಲ್ಲನ್ನು ಪಾಸು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ನಾನು ವಿರೋಧ ಮಾಡುತ್ತೇನೆ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಬರೀ ಡಿವಿಷನಲ್ ಕಮಿಷನರ್ ಹುದ್ದೆಗಳನ್ನು ರದ್ದು ಮಾಡಬೇಕೆಂದು ಶಿಫಾರಸ್ಸು ಆಗಲಿಲ್ಲ. Sub-divisional Officers, Assistant Commissioner ಹುದ್ದೆಗಳನ್ನೂ ರದ್ದು ಮಾಡಬೇಕು. ಅವರಿಗೆ ಇದ್ದ ಅಧಿಕಾರವನ್ನೆಲ್ಲಾ ತಹಶೀಲ್ದಾರ್ grade-I ಮಾಡಿ ಕೊಡಬೇಕು, ತಹಶೀಲ್ದಾರ್‌ನಲ್ಲಿ Grade-I & Grade-II ಎಂದು ಹೇಳಿ ಎರಡು ಗ್ರೇಡ್ ಮಾಡಿದರು. Assistant Commissioner ಗೆ ಇದ್ದ ಎಲ್ಲ ಅಧಿಕಾರವನ್ನು ತಹಶೀಲ್ದಾರ್‌ಗೆ ಕೊಡುತ್ತೇವೆಂದು ಹೇಳಿ, ತಹಶೀಲ್ದಾರ್ ಗ್ರೇಡ್–I ಹುದ್ದೆಯನ್ನು ಸೃಷ್ಟಿ ಮಾಡಿದರು. ಇಲ್ಲಿ Divisional Commissioner ಗೆ ಇದ್ದ ಎಲ್ಲ ಅಧಿಕಾರವನ್ನು D.C.ಗೆ ಕೊಡುತ್ತೇವೆಂದು ಹೇಳಿ, ಈ ಹುದ್ದೆಯನ್ನು ತೆಗೆಯಬೇಕಾಗಿದ್ದ ಕಾಲದಲ್ಲಿ, ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ಯೋಚನೆ ಮಾಡಿ, administrative reforms ಏನಾಗಬೇಕು, expenditure ಹೇಗೆ ಕಟ್ ಮಾಡಬೇಕು, ಈ ರಾಜ್ಯದ ನೆಲೆ, ಮುಂದಿನ ದಿಕ್ಕು ಯಾವುದಿರಬೇಕೆಂದು ಹೇಳಿ ಸನ್ಮಾನ್ಯ ರಾಮಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ಸಮಿತಿ ನೇಮಕ ಮಾಡಿ ಬಹಳ ಶ್ರಮಪಟ್ಟು ಅವರು ಒಂದು ವರದಿ ಕೊಟ್ಟ ನಂತರ, ಅನೇಕ ಹುದ್ದೆಗಳನ್ನು ರದ್ದು

ಮಾಡಿದರು. ನಮ್ಮ ದೌರ್ಭಾಗ್ಯ ಅಧ್ಯಕ್ಷರೆ, ಈ ಶಾಸನಸಭೆಯಲ್ಲಿ ನಾವು ಅವತ್ತಿನಿಂದ ಇವತ್ತಿನವರೆಗೆ ಸದಸ್ಯರಾಗಿದ್ದೇವೆ. ಅವತ್ತಿನ ಭಾಷಣವನ್ನು ಕೇಳಿದ್ದೇವೆ. ಏಕೆ ಹುದ್ದೆಗಳನ್ನು ರದ್ದು ಮಾಡಬೇಕು, ಏಕೆ ಈ ಹುದ್ದೆಗಳನ್ನು ತೆಗೆಯಬೇಕು, ಏಕೆ powers ಬೇರೆಯವರಿಗೆ delegate ಮಾಡಬೇಕು ಎನ್ನುವುದನ್ನು ಕೇಳಿರುವವರು ಅಲ್ಲಿ ಕೂತಿರುವುದು ದೌರ್ಭಾಗ್ಯ ಎಂದು ತಿಳಿದುಕೊಂಡಿದ್ದೇನೆ. ಅದರ ಕೆಳಗೆ Industries Department ನಲ್ಲಿ ಇರುವ ಅಧಿಕಾರಗಳೆಲ್ಲವೂ ಹೋಗಬೇಕೆಂದು ಆಯಿತು. Divisional Commissioner ಹುದ್ದೆ ಬಂದಿದ್ದ ದಿವಸ ಇಡೀ ಶಾಸನ ಸಭೆ ಮಾತನಾಡಿತು. ಇದೊಂದು useless ಹುದ್ದೆ, ಇದೊಂದು rehabilitation ಮಾಡಲಿಕ್ಕೆ ಇರುವ ಹುದ್ದೆ. ಇದೊಂದು ಚೆಕ್ ಪೋಸ್ಟ್, ಇದು ಯಾವುದೇ ಒಂದು ತೀರ್ಮಾನ ಆಗಬೇಕಾಗಿರುವುದನ್ನು ತಡೆ ಹಿಡಿಯುವುದಕ್ಕಾಗಿ ಮಾಡಿರುವ ಹುದ್ದೆ. By creating so many authorities, So many posts, we are delaying justice ಎಂದೇ ನಾವು ಇಲ್ಲಿ ಹೇಳಿದ್ದೆವು. We are delaying justice, we are delaying decisions as in the Assistant Commissioner, DC, Divisional Commissioner, Appellate Tribunal, High Court, ಒಂದು ನ್ಯಾಯಾಧಿಕರಣ ಆಗಬೇಕಾದರೆ, ಇವತ್ತು ಇಷ್ಟು ಹಂತಗಳನ್ನು ದಾಟಿ ಹೋಗಬೇಕಾಗಿದೆ. ಈ ಹುದ್ದೆಯ ಅಗತ್ಯವಿಲ್ಲ. ಜಿಲ್ಲಾಧಿಕಾರಿಗಳಿಗೆ ಈ ಹುದ್ದೆಯನ್ನು ವಾಪಸ್ ಕೊಡಬೇಕೆಂದು ತೀರ್ಮಾನವಾಯಿತು. ಅಧ್ಯಕ್ಷರೆ, ಇದಕ್ಕೆ ಇನ್ನು ಪೂರಕವಾದ decisions ಇವೆ. ಜಿಲ್ಲಾ ಪರಿಷತ್ ಆಗಬೇಕಾದರೆ, DC ಗಳು overload ಆಗಿದ್ದಾರೆ. ಅವರಿಗೆ ಕೆಲಸ ಜಾಸ್ತಿಯಾಗಿದೆ. ಅವರು ಅಭಿವೃದ್ಧಿಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕಾಗುತ್ತಿಲ್ಲ. ಹಾಗಾಗಿ ವಿಭಜನೆ ಆಗಬೇಕು. ಅಭಿವೃದ್ಧಿಯೇ ಒಂದು ಕಡೆ ಆಗಬೇಕು, ಆಡಳಿತವೇ ಒಂದು ಕಡೆ ಆಗಬೇಕೆಂದು ಹೇಳಿ, ಜಿಲ್ಲಾ ಪರಿಷತ್‌ಗೆ DC level ಅಧಿಕಾರಿ ಇಟ್ಟಿರಿ. ಮೊದಲನೇ ಹಂತದಲ್ಲಿ DC ಗಿಂತ senior officer ಇರಬೇಕೆಂದು ಮಾಡಿದಿರಿ. DC ಗಿಂತ senior officer ಮಂತ್ರಿ ಬಂದ ದಿವಸ ನಿಮ್ಮ ಜಿಲ್ಲಾ ಕೇಂದ್ರದಲ್ಲಿ ಎಲ್ಲೋ ಬಾವುಟ ಹಾರಿಸುವುದಕ್ಕಾಗಲಿಲ್ಲ ಎಂದು ಹೇಳಿ ಮತ್ತೆ ಅಧಿಕಾರವನ್ನು ವಾಪಸ್ ತೆಗೆದುಕೊಂಡಿರಿ, DC ಗಿಂತ lower cadre ನವರನ್ನು ಇರಬೇಕೆಂದು ಮಾಡಿದಿರಿ. From among the IAS, junior ನ್ನು ಅಲ್ಲಿಗೆ ಹಾಕಿ ಎಂದು ಹೇಳಿದಿರಿ. ಈಗ non IAS officer ಗಳನ್ನು ಅಲ್ಲಿ ಹಾಕಿರಿ ಎಂದು ತೀರ್ಮಾನ ಮಾಡಿದ್ದೀರಿ. ಯಾವತ್ತು ಈ ರಾಜ್ಯ ಒಂದು ನಿರ್ದಿಷ್ಟ ದಾರಿಯಲ್ಲಿ ನಡಿಗೆಯನ್ನು ಪ್ರಾರಂಭ ಮಾಡುತ್ತದೆ ಎನ್ನುವುದು ನಮಗೆ ಬೇಕಾಗಿದೆ. ಯಾವತ್ತು, ಯಾರು, ಎಂದು, ಯಾವ ಆಧಾರದ ಮೇಲೆ, Divisional Commissioer ಹುದ್ದೆ ರದ್ದು ಮಾಡಬೇಕೆಂದು ಹೇಳಿ, 5–10 ವರ್ಷದೊಳಗೆ ಈ ಹುದ್ದೆ ರದ್ದು ಮಾಡಿರುವುದರಿಂದ

ಅನ್ಯಾಯವಾಗಿದೆ ಎಂದು ಹೇಳಿದರೆ, ನಿಮಗೇನು ಕಾಣಿಕೆ ತಂದುಕೊಟ್ಟರಾ? ಅವತ್ತು Assistant Commissioner ಗಳು ಕೊಟ್ಟ ಹಾಗೆ ಎಲ್ಲ ಗ್ಯಾಂಗ್ ಆಗಿ ಬಂದು ಕಪ್ಪ ತಂದು ಕೊಟ್ಟರಾ? ಅಥವಾ ರಾಜ್ಯದಲ್ಲಿ ಇಷ್ಟೊಂದು ಹುದ್ದೆಗಳು ರದ್ದಾಗುತ್ತವೆ, ನಮ್ಮನ್ನೆಲ್ಲಾ ಆಚೆಗೆ ಹಾಕಬೇಡಿ ಎಂದು ಹೇಳಿ IAS lobby ನಿಮ್ಮನ್ನು ತುಳಿದು ಇಟ್ಟುಕೊಂಡಿದೆಯಾ? ಸತ್ಯ ಹೇಳುವುದು ಕಲಿತುಕೊಳ್ಳಿ. ಯಾರೋ ಟ್ಯಾಕ್ಸ್ ಕೊಡುವ ಹಂತದಲ್ಲಿ ಮೂರು ಕೋಟಿ ರೂಪಾಯಿ ಇವತ್ತು ನಾಲ್ಕು ಕಛೇರಿಗಳಿಗೆ establishment ಜಾಸ್ತಿ ಮಾಡುತ್ತಿದ್ದೀರಿ. ಅಧ್ಯಕ್ಷರೆ, ಇದರ ಜೊತೆಗೆ ದುರಂತ ಏನಾಗಿದೆ ಎಂದರೆ, ಎಲ್ಲ deputation. ಇವತ್ತು ಬೆಂಗಳೂರಿನ Regional Commissioner ಎಂದು ಏನು ಕರೆಯುತ್ತೀರಿ ಅದಕ್ಕೆ ಎಲ್ಲಾ ತಾಲ್ಲೂಕು ಕಛೇರಿಗಳಿಂದ staff ನ್ನು depute ಮಾಡಿಕೊಳ್ಳುತ್ತೀರಿ. ಆ ಕಛೇರಿ ಹೆಸರಿನಲ್ಲಿ ನಿಮ್ಮ ಸರ್ಕಾರ ಸಂಬಳ ಕೊಡುತ್ತಿದೆ ಚೆಲುವರಾಯಸ್ವಾಮಿಯವರೇ? ನಾನು ಅವರ ಗಮನಕ್ಕೆ ತಂದೆ. ನಮ್ಮ ಬಳಿ ನಾಲ್ಕು ನಾಲ್ಕು ಜನ ಶೇಕ್‌ದಾರ್‌ಗಳು ಖಾಲಿ ಇದ್ದಾರೆ, ಶಿರಸ್ತೇದಾರ್ ಖಾಲಿ ಇದ್ದಾರೆ, Regional commissioner office ಹೆಸರಿನಲ್ಲಿ deputation ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳಿದೆ. ಸರ್ ಇದಕ್ಕೆ ಯಾವುದೇ sanctitiy ಇಲ್ಲ. ಯಾರ್ಯಾರ ತೆವಲಿಗೆ ಏನೇನು ಬರುತ್ತದೆ, ಆ ರೀತಿ ಹುದ್ದೆಗಳನ್ನು ಸೃಷ್ಟಿ ಮಾಡುವುದು, ರದ್ದು ಮಾಡುವುದು ಮಾಡಿದರೆ, ಇದನ್ನು ರಾಜ್ಯ ಎಂದು ಯಾರೂ ಕರೆಯುವುದಿಲ್ಲ. ಇದು ಯಾವುದೇ ರೀತಿಯಲ್ಲಿ justified Bill ಅಲ್ಲ. ಜೊತೆಗೆ ದುರ್ದೈವ, ಶಾಸನಸಭೆಯಲ್ಲಿ ಇದು ಇತ್ಯರ್ಥವಾಗುವುದಕ್ಕೆ ಮೊದಲೇ, ordinance pass ಮಾಡಿಕೊಳ್ಳುತ್ತೀರಿ. Office ಗಳನ್ನು ಸೃಷ್ಟಿ ಮಾಡುತ್ತೀರಿ. ಅಲ್ಲಿಗೆ ಒಂದೊಂದು ತಿಂಗಳಿಗೆ ಒಬ್ಬೊಬ್ಬ Regional Commissioner ಗಳನ್ನು ಹಾಕಿದ್ದೀರಿ. Every month, ಇವತ್ತು ಫೋನ್ ಮಾಡಿ, ನಾಳೆ ಮತ್ತೆ ಫೋನ್ ಮಾಡಿದರೆ ಫೋನ್ ತೆಗೆದುಕೊಂಡವರು Regional Commissioner is changed ಎಂದು ಹೇಳುತ್ತಾರೆ. ಇನ್ಯಾರೋ ಈಗಿರುವ Regional Commissioner ರವರು voluntary retirement ಕೇಳಿದ್ದಾರೆಂದು ನನಗೆ ಯಾರೋ ಹೇಳಿದರು. Zonal office ನಿಂದು ಅವರನ್ನು ತಂದು ಕೂರಿಸುತ್ತೀರಿ. ಆರು ತಿಂಗಳಗಳಲ್ಲಿ ಎಷ್ಟು ರೀಜನಲ್ ಕಮಿಷನರ್‌ಗಳನ್ನು ತಾವು ಅಲ್ಲಿ ಕೂರಿಸಿದ್ದೀರಿ ಹೇಳಿ. ಏನು ನ್ಯಾಯಾಧಿಕರಣ ಆಗಬೇಕು? ಅಧ್ಯಕ್ಷರೆ ತಮಗೆ ಒಂದು ಮನವಿ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಯಾವುದೇ ಸ್ಥಿತಿ ಬದಲಾಗಿಲ್ಲ. ಬದಲಾಗಿ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಎಲ್ಲ ದೊಡ್ಡ ಹಂತದ ಅಧಿಕಾರಿಗಳನ್ನು ಕರ್ನಾಟಕದಲ್ಲಿ station ಮಾಡಿಕೊಳ್ಳಲಿಕ್ಕೆ ಅವರನ್ನು ಮಹಾರಾಜನ್ನು ಸಾಕಿದ ಹಾಗೆ ಸಾಕುವುದಕ್ಕೆ ಈ ಹುದ್ದೆಗಳು ನಿರ್ಮಾಣವಾಗಿವೆ. ನಾನು ನಿಮಗೆ ಒಂದು ಮಾತು ಕೇಳುತ್ತೇನೆ. ಜಿಲ್ಲಾಪರಿಷತ್‌ಗಳ ಬಗ್ಗೆ ಬಹಳ ವ್ಯಾಖ್ಯಾನ

ಮಾಡುತ್ತೇವೆ. ಮಾನ್ಯ ಡಿ.ಆರ್. ಪಾಟೀಲರು ಇರಬೇಕಾಗಿತ್ತು. ಇಡೀ ಅಭಿವೃದ್ಧಿ ಕಾರ್ಯಕ್ರಮಗಳು ಜಿಲ್ಲಾ ಪರಿಷತ್ ಕೆಳಗೆ ಎಂದು ಹೇಳಿ, Deputy Commissioner, CRF ನೋಡಿಕೊಳ್ಳಬೇಕಾಗಿರುವವರು ಅವರೇ. MLA grant ನೋಡಿಕೊಳ್ಳಬೇಕಾಗಿರುವವರು ಅವರೇ. MP grant ನೋಡಿಕೊಳ್ಳಬೇಕಾಗಿರುವವರು ಅವರೇ. Floods ಆದರೂ ಅವರೇ ನೋಡಿಕೊಳ್ಳಬೇಕು. ಏನು ನಡೆಯುತ್ತಿದೆ ಜಗದೀಶ್ ಶೆಟ್ಟರೇ? ಏಕೆ ಅದನ್ನು ತೆಗೆದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯದರ್ಶಿಯವರ ಕೈಗೆ ಕೊಡುವುದಿಲ್ಲ? ಏತಕ್ಕೆ ನಿಮ್ಮ DC ನೇ CRF ಕಾರ್ಯಕ್ರಮ ಮಾಡಬೇಕು? ಏತಕ್ಕೆ contractor ಗಳು ಅವರಿಗೆ ಒಂದು ಪರ್ಸೆಂಟ್ ಕಮಿಷನ್ ಕೊಡಬೇಕು? ಇದು ನಮಗೆ ಅರ್ಥವಾಗಬೇಕು. ಇಂಜಿನಿಯರ್ಸ್ ಎಲ್ಲ ಜಿಲ್ಲಾ ಪರಿಷತ್ ಕಂಟ್ರೋಲ್ ಎಂದು ಹೇಳುತ್ತೀರಿ. Deputy Commissioner ಗಳು notice ಕೊಟ್ಟುಕೊಂಡು ಸವಾರಿ ಮಾಡುತ್ತಾರೆ. ಬರ ಪರಿಹಾರದ ಕಾರ್ಯಕ್ರಮಕ್ಕೆ 3rd party inspection ಆಗಬೇಕು. ನಿಮ್ಮ AC ಹೋಗಬೇಕು. ತಹಶೀಲ್ದಾರ್ ಹೋಗಬೇಕು. ನಿಮ್ಮ DC office ನಲ್ಲಿ ಬಿಲ್ ಆಗಬೇಕು. Work load ಜಾಸ್ತಿಯಾಗಿಬಿಟ್ಟು Divisional Commissioner ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ. ಇದರ ಬಗ್ಗೆ ಇವರು ನನಗೆ ಒಂದು ಮಾಹಿತಿ ಕೊಡಬೇಕು. ಯಾವ work load ಜಾಸ್ತಿಯಾಯಿತು? ಈ ತರಹ ಬಿಲ್ಲುಗಳನ್ನು ಇಡಕ್ಕಾಗುವುದಿಲ್ಲ. You must bring every detail before the House. Exchequer ನಿಂದ 2 ಕೋಟಿ 65 ಲಕ್ಷ ಖರ್ಚಾಗುತ್ತದೆ ಎಂದು ಹೇಳುತ್ತಿದ್ದೀರಿ. ಯಾವ ಯಾವ ಕೇಸನ್ನು ನಿಮ್ಮ Deputy Commissioner ಎಷ್ಟು ವರ್ಷಗಳಿಂದ hear ಮಾಡುತ್ತಿಲ್ಲ? DC ಗಳು ಕೇಸ್ hear ಮಾಡುವುದಕ್ಕೆ ಏತಕ್ಕೆ ಕುಳಿತುಕೊಳ್ಳುತ್ತಿಲ್ಲ? ಎಷ್ಟು ಪುರಸಭೆ ಕೇಸ್‌ಗಳು ಇಡೀ ಅವಧಿ ಪಾಸಾದರೂ DC ಹತ್ತಿರ ಬಂದು ಪೆಂಡಿಂಗ್ ನಿಂತಿವೆ. ಯಾವ DC ಇವತ್ತು ಹೀಯರ್ ಮಾಡುತ್ತಿದ್ದಾರೆ? ಯಾವ DC ಯಿಂದ ನಿಮ್ಮ Divisional Commissioner ಗೆ ಅಪೀಲುಗಳು ಬರುತ್ತಿವೆ? ಈ White Elephant ಗಳನ್ನು ಏತಕ್ಕೆ create ಮಾಡುತ್ತೀರಿ? ಮಾನ್ಯ ರಾಮಸ್ವಾಮಿಯವರು ಬಹಳ ವ್ಯಾಪಕವಾಗಿ ಚರ್ಚೆ ಮಾಡಿ, ಶ್ರಮ ತೆಗೆದುಕೊಂಡು ಇಷ್ಟು ಹುದ್ದೆಗಳನ್ನು ರದ್ದು ಮಾಡಬೇಕು, Economy measure, ಅವತ್ತು ರಾಜ್ಯದಲ್ಲಿ ನಿರ್ದಿಷ್ಟವಾಗಿ ತೀರ್ಮಾನವಾಯಿತು. ಹುದ್ದೆಗಳನ್ನು ಕಡಿಮೆ ಮಾಡಬೇಕು, ಇಂತಿಂಥ ಕಡೆ ಹುದ್ದೆಗಳನ್ನು ಕಡಿಮೆ ಮಾಡಬೇಕು, ಇಂತಿಂಥ non plan expenditure ಕಡಿಮೆ ಮಾಡಬೇಕೆಂದು. ಇದರಲ್ಲಿ ದೊಡ್ಡ ಜಾಲ ಅಡಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ಯಾವುದೇ ಪೋಸ್ಟ್ ಅಲ್ಲ. ನಿಮಗೆ ಸಾರ್ವಜನಿಕರಿಗೆ ಅನುಕೂಲ ಮಾಡಬೇಕೆಂದರೆ, ನಾಡ ಕಛೇರಿಗಳಲ್ಲಿ ಜಾಸ್ತಿ ಮಾಡಿ. ತಾಲ್ಲೂಕು ಕಛೇರಿಗಳಲ್ಲಿರುವ ಶೇಕ್‌ದಾರ್‌ಗಳು, ಶಿರಸ್ತೇದಾರ್‌ಗಳ ಪೋಸ್ಟ್

fill up ಮಾಡಿ ಕೆಲಸ ಮಾಡುವ ಹಾಗೆ ಮಾಡಿ. Regional level ನಲ್ಲಿ ಏನೂ ಕೆಲಸ ಇರುವುದಿಲ್ಲ. ಅಪಿಲೇಟ್ ಟ್ರಿಬ್ಯುನಲ್ ರದ್ದು ಮಾಡಿ, ನಿಮ್ಮ ಕಾರ್ಯದರ್ಶಿಗಳಿಗಿರುವ ಅಪೀಲ್ ಪವರ್ ತೆಗೆಯಿರಿ, Revenue Commissioner appeal ಕೇಳಬಾರದು ಎಂದು ಮಾಡಿ, Government appeal ನ್ನು Divisional Commissioner level ಗೆ end ಮಾಡಿ. You must say. Divisional Commissioner hear ಮಾಡಿದ ಮೇಲೆ, there ends the matter ಎಂದು ಹೇಳಬೇಕು. At least, Revenue Commissioner ಗೆ ಕೆಲಸ ಆದರೂ ಇಲ್ಲಿ ಕಡಿಮೆ ಆಗಲಿ.

12–00 ಗಂಟೆ

ನೀವು ಇದನ್ನು ಮಾಡುತ್ತೀರಾ? ದಂ ಇದೆಯಾ? ಇವರ ಮೇಲೆ ಮತ್ತೆ ಅಲ್ಲಿಗೆ ಹೋಗುವುದು, ಅಪಲೇಟ್ ಟ್ರಿಬ್ಯೂನಲ್‌ಗೋ, ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ಗೋ ಹೋಗುವುದು, ಹೈಕೋರ್ಟ್‌ಗೆ ಹೋಗುವುದು, ಯಾವ ಪುರುಷಾರ್ಥಕ್ಕಾಗಿ ಈ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದೆ? ಸಾರ್ ದೌರ್ಭಾಗ್ಯ ಇಡೀ ರಾಜ್ಯದಲ್ಲಿ ಅಧಿಕಾರಕ್ಕೆ ಬಂದವರು ಅಧಿಕಾರಿಗಳನ್ನು ಓಲೈಸಿಕೊಂಡು ಕರ್ನಾಟಕವನ್ನು ಒಂದು ರೀತಿಯಲ್ಲಿ ಮೇವಿನ ಹುಲ್ಲುಗಾವಲು ರೀತಿ ಅವರಿಗೆ ಮಾಡಿಕೊಟ್ಟಿದ್ದಾರೆ. ಅವರಿಗೆ ಅಲ್ಲಿ ಮೇಯುವುದಕ್ಕೆ ಮೇವಿಲ್ಲ. ಅವರಿಗೆ ಇಲ್ಲಿ ಮೇಯುವುದಕ್ಕೆ ಮೇವನ್ನು ನೀವೆಲ್ಲಾ ಸೇರಿಕೊಂಡು ಸೃಷ್ಟಿ ಮಾಡುತ್ತಿದ್ದೀರಷ್ಟೆ. ಎಷ್ಟು ಆಫೀಸರ್ಸ್‌ಗಳು ಇದ್ದಾರೆ? ಏಕೆ ಇದ್ದಾರೆ? ಯಾರ ದುಡ್ಡನ್ನು ತಂದು ಅವರಿಗೆ ಸಂಬಳ ಕೊಡುತ್ತಿದ್ದೀರಿ? ಯಾರ ದುಡ್ಡಲ್ಲಿ ಎಸ್ಟಾಬ್ಲಿಶ್‌ಮೆಂಟ್ ಕೊಡುತ್ತಿದ್ದೀರಿ? ಇದರಿಂದ ಎಷ್ಟು ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಕುಂಠಿತವಾಗಿದೆ? ಇದರ ಬಗ್ಗೆ ಎಲ್ಲಾದರೂ ಒಂದು ಸಣ್ಣ ಕಲ್ಪನೆ ಸರ್ಕಾರ ನಡೆಸುವವರಿಗೆ ಇದೆಯಾ ಸಾರ್? ಇವೊತ್ತು ನೀವು ಮಾಡುತ್ತಿರುವ ಬಜೆಟ್‌ನಲ್ಲಿಯ ಘೋಷಣೆಗಳಿಂದ ಶೇಕಡ 75 ರಷ್ಟು ನಾನ್–ಪ್ಲಾನ್‌ಗೆ ಹೋಗುತ್ತಿದೆ. ಆದುದರಿಂದ ತಾವು ಈ ಬಗ್ಗೆ ರೀ–ಥಿಂಕ್ ಮಾಡಬೇಕು. ಏನು ಅಧಿಕಾರಿಗಳನ್ನು ರದ್ದು ಮಾಡಿ ಡಿ.ಸಿ.ಗಳಿಗೆ ವಾಪಸ್ಸು ಕೊಟ್ಟಿದ್ದೀರಿ ಅವರನ್ನು ಅಲ್ಲೇ ಮುಂದುವರೆಸಬೇಕು. ಅಪೀಲ್ ಇದೆ, ನಿಮ್ಮ ಹತ್ತಿರ ರೆವಿನ್ಯೂ ಕಮಿಶನರ್ ಇದ್ದಾರೆ, ರೆವಿನ್ಯೂ ಸೆಕ್ರೆಟರಿ, ರೆವಿನ್ಯೂ ಕಮಿಶನರ್ ಆಫೀಸ್‌ನಲ್ಲಿ ಮೂರು ಮೂರು ಜನ, ನಾಲ್ಕು ನಾಲ್ಕು ಜನ ಐ.ಎ.ಎಸ್. ಅಧಿಕಾರಿಗಳನ್ನು ತುಂಬಿಬಿಟ್ಟಿದ್ದೀರಿ. ಏನ್ ಒಬ್ಬೊಬ್ಬರು ಇಲ್ಲಾ ಇಲ್ಲಿ? ಸೆಕ್ರೆಟರೀಸ್, ಪ್ರಿನ್ಸಿಪಲ್ ಸೆಕ್ರೆಟರೀಸ್, ಏನಿದು, ಇವರ ಕಲ್ಪನೆಯೇ ನಮಗರ್ಥವಾಗುತ್ತಿಲ್ಲ. ರಾಜ್ಯವೇನೂ ವಿಸ್ತಾರವಾಗಲಿಲ್ಲ. ನೀವು ವರಮಾನವನ್ನೇನು ಬಹಳ ಹೆಚ್ಚು ಮಾಡಿಲ್ಲ. ಏತಕ್ಕಾಗಿ ಇಷ್ಟು ಅಧಿಕಾರಿಗಳನ್ನು ಸೃಷ್ಟಿ ಮಾಡಿಕೊಂಡು ಹೋಗುತ್ತಿದ್ದೀರಿ? ಒಬ್ಬ ಅಧಿಕಾರಿಯಲ್ಲ ಜಗದೀಶ್ ಶೆಟ್ಟರೆ, ಒಂದು ಆಫೀಸ್, ಒಂದು ಜಿಲ್ಲೆ ಸೃಷ್ಟಿ ಮಾಡುವುದರಿಂದ ನೂರು ಕೋಟಿ

ರೂಪಾಯಿಗಳನ್ನು ನೀವು ಹಾಳು ಮಾಡುತ್ತೀರಿ. ಒಂದು ಡಿವಿಶನಲ್ ಕಮಿಶನ್ ಆಫೀಸ್ ಸೃಷ್ಟಿ ಮಾಡುವುದರಿಂದ ಕನಿಷ್ಠ ನಾಲ್ಕು ಕೋಟಿ ರೂಪಾಯಿಗಳನ್ನು ನೀವು ಹಾಳು ಮಾಡುತ್ತೀರಿ. ಇದು ಈ ರಾಜ್ಯದ ದುಡ್ಡು. ಯಾರ ದುಡ್ಡು ಎಂದು ಈ ರೀತಿ ಹಾಳು ಮಾಡುತ್ತೀರಿ? ಯಾರ ತೆವಲಿಗೆ ಹಾಳು ಮಾಡುತ್ತೀರಿ? ಹಾಗಾದರೆ ರಾಮಸ್ವಾಮಿಯವರ ವರದಿ ತಪ್ಪು ಎಂದು ನಿಮಗನಿಸಿದ್ದು ಯಾವಾಗ? ಅದನ್ನು ತಂದು ಇಲ್ಲಿ ಇಡಿ. ಏನು ಏನೇನು ಡಿಫಿಕಲ್ಟೀಸ್‌ಗಳನ್ನು ಆ ವರದಿಯಿಂದ ಈ ಸರ್ಕಾರ ಫೇಸ್ ಮಾಡಿತು? ಅವರ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಮೇಲೆ ನೀವು ಹುದ್ದೆಯನ್ನು ರದ್ದು ಮಾಡಿದ ಮೇಲೆ ಮತ್ತೆ ಪರಿಶೀಲನೆ ಮಾಡಿ ಮಂಜೂರು ಮಾಡುವುದಕ್ಕೆ ಏನು ಕಾರಣವಿತ್ತು ಎಂಬ ಬಗ್ಗೆ ದಯಮಾಡಿ ಈ ಸದನದ ಮುಂದೆ ಚರ್ಚೆಗೆ ಇಡಬೇಕು. ಮತ್ತೆ ನಿಮಗೆ ಅಸಿಸ್ಟೆಂಟ್ ಕಮಿಶನರ್ ಹುದ್ದೆಯನ್ನು ಕಂಟಿನ್ಯೂ ಮಾಡುವುದಕ್ಕೂ ಕೂಡ ಅಧಿಕಾರವಿಲ್ಲ. ಊರು ತುಂಬ ಮಾತನಾಡುತ್ತಾರೆ ಸಾರ್. ಅವರೆಲ್ಲರೂ ಗ್ಯಾಂಗ್ ಆಗಿ ಹೋಗಿ ದುಡ್ಡು ಕೊಟ್ಟರು ಮತ್ತು ಕಂಟಿನ್ಯೂ ಆದರು ಎನ್ನುತ್ತಾರೆ. 165 ರಿಂದ 175 ಅಸಿಸ್ಟೆಂಟ್ ಕಮಿಶನರ್ ಪೋಸ್ಟ್ ಇರಬೇಕಾದ ಕಡೆ 400 ಜನ ಅಸಿಸ್ಟೆಂಟ್ ಕಮಿಶನರ್‌ಗಳು ಈ ರಾಜ್ಯದಲ್ಲಿ ಇದ್ದಾರೆ. ಏನು ತಮಾಷೆಯೆ ಇದೆಲ್ಲಾ. ಏನಾದರೂ ವೈಜ್ಞಾನಿಕವಾದ ತಳಹದಿ ಇದಕ್ಕೆ ಬೇಡವೇ? ಈ ರಾಜ್ಯ ಯಾವ ಸ್ಥಿತಿಗೆ ಹೋಗುತ್ತದೆ ಎನ್ನುವ ಕಲ್ಪನೆ ಬೇಡವೇ? ದಯಮಾಡಿ ಈ ಬಿಲ್‌ನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ರಿಪೋರ್ಟ್ ನಿಮಗೆ ಏಕೆ ಅನುಕೂಲವಾಗಲಿಲ್ಲ ಎನ್ನುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು. ತದನಂತರ ಈ ಹುದ್ದೆಗಳನ್ನು ಸೃಷ್ಟಿ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಅಧ್ಯಕ್ಷರೆ, ಈ amendment ಏನು ತಂದಿದ್ದಾರೆ, ಈ amendment ನ್ನು ಒಂದು ದೃಷ್ಟಿಯಿಂದ ಹಿಂದೆ Divisional Commissioner post ಇರತಕ್ಕಂಥದ್ದನ್ನು economy measures ಎಂದು ಹೇಳಿ abolish ಮಾಡಿದ್ದರು. ಅದೇ ರೀತಿಯಾಗಿ Assistant Commissioner post ನ್ನು ಕೂಡ ತೆಗೆದು ಹಾಕಬೇಕು ಎಂದು ಹೇಳಿ ಅದಕ್ಕೂ ಕೂಡ recommendation ಮಾಡಿದ್ದರು. ಆದರೆ, Divisional Commissioner post abolish ಮಾಡಿದ ತಕ್ಷಣ ಅವರ ಅಧಿಕಾರ ಬೇರೆಯವರಿಗೆ ಕೊಡಲಿಲ್ಲ. ಅಂದರೆ municipality appeals dispose off ಮಾಡತಕ್ಕಂಥದ್ದು ಇರಬಹುದು, revenue appeals dispose off ಮಾಡತಕ್ಕಂಥಾದ್ದು ಇರಬಹುದು, Land Revenue Act ಕೆಳಗೆ ಅಥವಾ Land Reforms ಕೆಳಗೆ ಅವರಿಗಿರತಕ್ಕಂಥ ಅಧಿಕಾರಗಳನ್ನು ಯಾರು ಚಲಾಯಿಸಬೇಕು ಎಂಬ

ಪ್ರಶ್ನೆ ಸುಮಾರು ವರ್ಷಗಳು ಹಾಗೆಯೇ ಇತ್ತು. ಈಗಾಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ, ಈಗ ಹೇಗೆ land reforms ನಲ್ಲಿ Land Tribunal ನವರು ಏನೇ ನಿರ್ಣಯ ತೆಗೆದುಕೊಂಡರೂ ಅದು ಅಂತಿಮ. No appeal lies. High courtಗೂ appeal ಇಲ್ಲ, ಯಾವ Courtಗೂ appeal ಇಲ್ಲ. ಆ ರೀತಿಯಾಗಿ Revenue Act ಆಗಲಿ, Municipality Act ಆಗಲಿ, Urban ceiling Act ಆಗಲಿ ಅಥವಾ ನಮ್ಮ Slum Clearance Board Act ಆಗಲಿ, ಇವೆಲ್ಲಾ Act ಕೆಳಗೆ Divisional Commissionerಗೆ ಏನು Appellate Powers ಇತ್ತು ಅದನ್ನು ನೀವು ಅಂತಿಮ ಎಂದು ಮಾಡಿಯಾದರೂ ಅವರಿಗೆ ಕೊಡಿ. ಅದರ ಮುಂದೆ Revenue Commissioner ಗೂ ಬರಬಾರದು, ಸರ್ಕಾರಕ್ಕೂ ಬರಬಾರದು. ಆ ರೀತಿ ಯಾವುದಾದರೂ amendment ಮಾಡಿದರೆ ಒಂದು ತೀರ್ಮಾನ ಕೆಳಮಟ್ಟದಲ್ಲಿ final ಆಗುತ್ತದೆ. ಇಲ್ಲವೆಂದರೆ ಪುನಃ Deputy Commissioner ನಿಂದ Divisional Commissionerಗೆ, Divisional Commissioner ನಿಂದ Revenue Commissioner ಗೆ, Revenue Commissioner ಮಾಡಿದರೂ ಸಹ ಪುನಃ Government interfere ಆಗಿ ಅನೇಕ ಬಾರಿ amend ಆಗತಕ್ಕಂಥಾದ್ದೂ ನಾವು ನೋಡುತ್ತೇವೆ. ಅದಕ್ಕೆ ಎರಡು ಕೆಲಸ ಮಾಡಬಹುದು. ಒಂದು, ಸಂಪೂರ್ಣವಾದಂಥ ಅಧಿಕಾರವನ್ನು Divisional Commissionerಗೆ ಕೊಟ್ಟು ಅದನ್ನು continue ಮಾಡುವುದನ್ನಾದರೂ ಮಾಡಬೇಕು. ಇಲ್ಲಾ, ಅದನ್ನು ತೆಗೆದರೆ, ಅಂತಿಮವಾಗಿ ರೆವಿನ್ಯೂ ಕಮಿಶನರ್‌ದಾದ್ರೂ ಡಿಸ್‌ಪೋಸ್ ಮಾಡಿ ಫೈನಲ್ ಆಗಿ ಕೊಡತಕ್ಕಂಥದ್ದು ಆಗಬೇಕು. ಅದು ಆಗುತ್ತಿಲ್ಲ. ಈ ಅಸಿಸ್ಟೆಂಟ್ ಕಮಿಶನರ್ ಪೋಸ್ಟ್‌ಗಳೂ ಕೂಡ ಕೆಲವು ಕಡೆ ತೆಗೆಯತಕ್ಕಂಥಾದ್ದನ್ನು ಮಾಡುತ್ತಾರೆ. ಅದನ್ನು ನ್ಯಾಯವಾಗಿ ಕೆಲವು ಕಡೆ ಬೇಕಾದಂಥದ್ದು ಇರುತ್ತದೆ. ಯಾವ ರೀತಿಯಾಗಿ ಡಿ.ವೈ.ಎಸ್.ಪಿ. ಪೋಸ್ಟ್‌ಗಳು ಬೇಕೋ ಅದೇ ರೀತಿಯಾಗಿ ಸಬ್-ಡಿವಿಶನಲ್ ಮ್ಯಾಜಿಸ್ಟ್ರೇಟ್ ಆಗಿ ಅಸಿಸ್ಟೆಂಟ್ ಕಮಿಶನರ್ ಅವರು ಕೆಲವು ಕಡೆ ಅವಶ್ಯಕತೆ ಇದೆ. ಕೆಲವು ಕೇಂದ್ರ ಸರ್ಕಾರದ ಆಕ್ಟ್‌ನಲ್ಲೂ ಕೂಡ ಮತ್ತು ರಾಜ್ಯ ಸರ್ಕಾರದ ಕಾನೂನಿನಲ್ಲಿಯೂ ಕೂಡ ಅವರ ಪೊಸಿಶನ್ ಏನು ಎಂಬುದನ್ನು ನಮೂದು ಮಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ಕೆಲವು ಅಟ್ರಾಸಿಟಿಸ್ ಕೇಸಸ್ ಇರುವ ಕಡೆ ಹಾಕಬೇಕು. ಡಿ.ವೈ.ಎಸ್.ಪಿ.ಗೇ ಹಾಕಬೇಕು ಅಥವಾ ಅದನ್ನು ಹಿಯರ್ ಮಾಡಬೇಕು, ಅದನ್ನು ಸಬ್-ಡಿವಿಶನಲ್ ಮ್ಯಾಜಿಸ್ಟ್ರೇಟ ಆದವರೇ ಮಾಡಬೇಕು. ಹೀಗೆ ಅನೇಕ ಕಾನೂನುಗಳು ಕೂಡ ಇದೆ. ಅದಕ್ಕಾಗಿ ಕನಿಷ್ಟ ಪಕ್ಷ ಮೂರು ಅಥವಾ ನಾಲ್ಕು ತಾಲ್ಲೂಕುಗಳಿಗೆ ಒಂದು ಸಬ್-ಡಿವಿಶನ್ ಮಾಡಿದ್ದನ್ನು ಅದು ಕೆಲವು ಕಡೆ ಅವಶ್ಯಕತೆ ಇದೆ ಮತ್ತು ಅನೇಕ ಸಾರಿ ಈ ಸೀನಿಯರ್ ಗ್ರೇಡ್

ಆಫೀಸರ್ಸ್ ಬಂದಾಗ ಅಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ವಿಶೇಷವಾಗಿ ಐ.ಎ.ಎಸ್.ಅಫೀಸರ್ಸ್ ಪ್ರೊಬೆಶನ್ ಬಂದವರಿಗೆ ನಾವು ಈ ದೊಡ್ಡ ಸಬ್-ಡಿವಿಶನ್‌ನ್ನೇ ಕೊಡುತ್ತಿರುತ್ತೇವೆ. ಇದರಿಂದಾಗಿ ಹೊಸದಾಗಿ ಬಂದಂಥ ಐ.ಎ.ಎಸ್. ಆಫೀಸರ್ಸ್‌ರವರಿಗೂ ಕೂಡ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಒಂದು ರೀತಿಯಲ್ಲಿ ಅನುಕೂಲವಾದಂಥ ವಾತಾವರಣ ಸಿಗುತ್ತದೆ. ಎರಡನೆಯದಾಗಿ ಆ ಸ್ಥಳದಲ್ಲಿದ್ದಂಥ ಅನೇಕ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಆ ಐ.ಎ.ಎಸ್. ಸಿಸ್ಟಂನನ್ನೇ ನೀವು ತೆಗೆದು ಹಾಕುವಂತಿದ್ದರೆ ಬೇಕಾದರೆ ನೀವು ಅದನ್ನು ತೆಗೆದು ಹಾಕಿ. ಒಂದು ಕಡೆ ಸಿಸ್ಟಂನನ್ನು ಇಟ್ಟುಕೊಳ್ಳುತ್ತೀವಿ ಎಂದು ಹೇಳುತ್ತೀರಿ. ಆದರೆ ಅದಕ್ಕೆ ಬೇಸಿಕಲಿ ಬೇಕಾದಂಥ ಇನ್‌ಫ್ರಾಸ್ಟ್ರಕ್ಚರ್‌ಗಳನ್ನೂ ಕೂಡ ನಾವು ಕ್ರಿಯೇಟ್ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಶೆಟ್ಟರ್‌ರವರಲ್ಲಿ ಕೇಳಿಕೊಳ್ಳುವುದಿಷ್ಟೆ, ನೀವು ಬರೇ ಡಿವಿಶನಲ್ ಕಮಿಶನರ್ ಜಾಗದಲ್ಲಿ ರೀಜನಲ್ ಕಮಿಶನರ್ ಎಂದು ಮಾಡುತ್ತೀದ್ದಿರಿ. ಇದರಲ್ಲಿ ವ್ಯತ್ಯಾಸವೇನೂ ಇಲ್ಲ. ಅಂದರೆ ಹಿಂದೆ ಡಿವಿಶನಲ್ ಕಮಿಶನರ್‌ಗೆ ಏನೇನು ಪವರ್ಸ್ ಇದ್ದವೋ ಅದೆಲ್ಲವನ್ನೂ ರೀಜನಲ್ ಕಮಿಶನರ್‌ರವರಿಗೆ ಇವೊತ್ತು ಟ್ರಾನ್ಸ್‌ಫರ್ ಮಾಡುತ್ತಿದ್ದೀರಿ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮತ್ತೆ ಹಳೆಯ ವಾದವೇ ಬರುತ್ತದೆ. ಯಾರಿಗೆ ಏನೂ ಕೆಲಸವಿಲ್ಲವೋ ಸುಮ್ಮನೇ ಒಂದು ಆಫೀಸ್ ಇಟ್ಟುಕೊಂಡು ಕುಳಿತಿದ್ದರು ಅಥವಾ ಸೂಪರ್‌ಫೈನ್ ಸ್ಕೇಲ್ ಕೊಡುವುದಕ್ಕೋಸ್ಕರ ಆ ಡಿವಿಶನಲ್ ಕಮಿಶನರ್ ಹುದ್ದೆಗಳ ಮೇಲೆ ಕ್ರಿಯೇಟ್ ಮಾಡಿದ್ದು, ಅದೇ ಕಂಟಿನ್ಯೂ ಆಗುತ್ತದೆಯೇ ಹೊರತಾಗಿ ನಿಜವಾಗಿ ಆಡಳಿತದಲ್ಲಿ ಜನರ ಸಮಸ್ಯೆಗೆ ಸ್ಪಂದಿಸಿದಂತೆ ಆಗುವುದಿಲ್ಲ. ಜನರ ಸಮಸ್ಯೆಗೆ ನೀವು ಸ್ಪಂದಿಸಬೇಕೆಂದರೆ ನಾವು ಯಾವ ರೀತಿಯಾಗಿ ಭೂ ಸುಧಾರಣೆ ಕಾನೂನಿನಲ್ಲಿ ಒಂದು ಸ್ಟೆಪ್ಸ್ ತೆಗೆದುಕೊಂಡಿದ್ದೇವೆ ಅದೇ ರೀತಿಯಾಗಿ ನೀವು ಎಲ್ಲಾ ಕಾನೂನುಗಳಿಗೆ ತಿದ್ದುಪಡಿಗಳನ್ನು ತಂದು ಅಂತಿಮವಾದಂಥ ಒಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಕೊಡಬೇಕಾಗುತ್ತದೆ. ಆ ರೀತಿ ಮಾಡಿದರೆ ಮಾತ್ರ ಇದು ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಪುನಃ Revival of Divisional Commissioner office ಆಗುತ್ತದೆ. ಇದು ಒಂದು; ಇನ್ನು ಎರಡನೆಯದಾಗಿ ಕೆಲವು ತಹಶೀಲ್ದಾರಗಳನ್ನು ಅಪ್‌ಗ್ರೇಡ್ ಮಾಡತಕ್ಕಂಥಾದ್ದನ್ನು 1991 ರಲ್ಲಿ ಮಾಡಿದ ಉದ್ದೇಶವೇನೆಂದರೆ ಪಾಪ ತಹಶೀಲ್ದಾರ್ ತಾಲ್ಲೂಕಿನಲ್ಲಿ ಮೀಟಿಂಗ್ ಕರೆದರೆ ಒಬ್ಬರೂ ಕೂಡ ಮೀಟಿಂಗ್‌ಗೆ ಹೋಗುತ್ತಿರಲಿಲ್ಲ. ಏಕೆಂದರೆ ತಹಸೀಲ್ದಾರ್ ಕ್ಲಾಸ್ 2. ಮತ್ತೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿ ಮತ್ತೆ ಕೆ.ಇ.ಬಿ. ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿ ಅವರೆಲ್ಲರೂ ಕ್ಲಾಸ್ 1 ಆಫೀಸರ್ಸ್. ಪಾಪ ತಹಸೀಲ್ದಾರ್ ತಾಲ್ಲೂಕಿನಲ್ಲಿ ಕೋ-ಆರ್ಡಿನೇಶನ್ ಮೀಟಿಂಗ್

ಕರೆದರೆ ಅಥವಾ ಯಾವುದೇ ಒಂದು ಮೀಟಿಂಗ್ ಕರೆದರೂ ಕೂಡ ಆ ಮೀಟಿಂಗ್ ಕರೆದಿರುವವರು ನಮ್ಮ ಜೂನಿಯರ್ ಇದ್ದಾನೆ, ನಾವೇಕೆ ಹೋಗಬೇಕು ಎಂದು ಹೇಳಿ ಒಬ್ಬರೂ ಕೇರ್ ಮಾಡುತ್ತಿರಲಿಲ್ಲ. ಇದರ ಜೊತೆಗೆ ಅವನಿಗೆ ಏನೂ ಅಧಿಕಾರವು ಇಲ್ಲ. ಯಾರದ್ದಾದರೂ class 1, class 2 officer Confidential Report ಬರೆಯುವುದಕ್ಕೆ ಅಧಿಕಾರವಿಲ್ಲ. ಆದುದರಿಂದ ತಹಸೀಲ್ದಾರ್ ಪೋಸ್ಟ್‌ನ್ನು ಅಪ್‌ಗ್ರೇಡ್ ಮಾಡಿ equivalent to other taluk...

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಖರ್ಗೆಯವರ, ಈಗೇನಾಗಿದೆ ತಮಗೆ ಗೊತ್ತೆ? 70 ಪರ್ಸೆಂಟ್ ತಹಸೀಲ್ದಾರ್‌ಗಳು ಕ್ಲಾಸ್ 1 ಆಗಿ ಅಫಿಶಿಯೇಟ್ ಆಗಿದ್ದಾರೆ. 5 ವರ್ಷವಾಗಿದೆ ಸಾರ್, ರೆಗ್ಯುಲರ್ ತಹಸೀಲ್ದಾರ್‌ಗಳು ಇಲ್ಲದೆ. ಈಗಲೂ ನಿಮ್ಮ ಇ.ಓ. ತಹಸೀಲ್ದಾರ್‌ಗಿಂತ ಎಬೋವ್ ಕೇಡರ್ ಹಾಕಿದ್ದಾರಲ್ಲ. ನೀವೇನು ಕ್ಲಾಸ್ 1 ತಹಸೀಲ್ದಾರ್ ಮಾಡಿದರೂ ಇ.ಓ. ಪೋಸ್ಟಿಂಗ್ ನಿಮ್ಮ ತಹಸೀಲ್ದಾರ್‌ಗಿಂತ ಎಬೋವ್ ಕೇಡರ್ ಕೊಟ್ಟರಲ್ಲಾ ಇವರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಅದು ಹಾಗಲ್ಲ. ಮೊದಲಿಂದ ಇದೆ ಡಿಫಿಕಲ್ಟೀಸ್ ಬಗ್ಗೆ ಹೇಳುತ್ತೇನೆ. ಏಕೆ ಇದು ಕ್ರಿಯೇಟ್ 1991 ರಲ್ಲಿ ಆಯಿತೆಂದರೆ, ಈ ದೃಷ್ಟಿಯಿಂದ ಆಡಳಿತಾತ್ಮಕವಾಗಿ ಒಂದು ಅನುಕೂಲವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಕ್ರಿಯೇಟ್ ಮಾಡಲಾಯಿತು. ಅದು ಅನೇಕ ಜನರಿಗೆ ಲಾಭವಾಯಿತು. Direct ತಹಸೀಲ್ದಾರ್ recruit ಮಾಡಲಿಲ್ಲವೆಂದರೆ ಯಾರು ಏನು ಮಾಡುತ್ತಾರೆ? Village Accountant ತಹಸೀಲ್ದಾರ್ ಆಗಿದ್ದಾರೆ, Assistant Commissioner ಆಗಿದ್ದಾರೆ. ಯಾವಾಗಲೂ ಕೂಡ ಒಂದು ಏನಾಗಿದೆಯೆಂದರೆ direct recruitment ನಾವು ಗಮನ ಕೊಡುತ್ತಿಲ್ಲ. Always Article 32 ನಲ್ಲಿ ಖುಷಿ ಬಂದ ಹಾಗೆ list ಮಾಡುವುದು, promote ಮಾಡುವುದು ಮತ್ತು ಅದರ ಬಗ್ಗೆ ಜಗಳಗಳು, ಹೊಡೆದಾಟಗಳು, ಲಾಬಿಗಳು pro, against. ಈಗ ನಮ್ಮ ಜಾತಿಯವನು ಬಂದರೆ ನಾನು ಹೇಳುವುದು, ಇನ್ನೊಂದು ಜಾತಿಯವನು ಬಂದರೆ ಅವನು protest ಮಾಡುವುದು. ಈ ರೀತಿಯಾಗಿ ಇಡೀ ಆಡಳಿತ ಹಾಳಾಗುತ್ತಿದೆ. Direct recruitment ಬಂದರೆ ಕನಿಷ್ಟಪಕ್ಷ ಅವನು 15 ವರ್ಷವಾದರೂ ನಿಷ್ಠೆಯಿಂದ ಸೇವೆ ಮಾಡುವುದಕ್ಕೆ ಅಡ್ಡಾಡಿ, enthusiastically ಆಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇವನ್ಯಾರೋ ಒಬ್ಬ Village Accountant promote ಆಗಿ, ಆಗಿ ತಹಸೀಲ್ದಾರ್ post ಗೆ ಬಂದರೆ ಅವನಿಗೆ ಎಲ್ಲಾ ಗೊತ್ತು. ಆ ಹಳ್ಳಿಯಲ್ಲಿ ಅವನು ಏನು ಲಂಚ ತಿಂದಿದ್ದಾನೆ, ಏನು ತೆಗೆದುಕೊಳ್ಳುತ್ತಿದ್ದ, ಕೊಡುತ್ತಿದ್ದ ಎಂದು ಎಲ್ಲಾರಿಗೂ ಗೊತ್ತಿರುತ್ತದೆ. ಆ ಕುರ್ಚಿ ಮೇಲೆ ಕುಳಿತರೆ ಒಬ್ಬರಿಗೂ ಭಯವಿರುವುದಿಲ್ಲ. ಅದಕ್ಕೆ ಸಹಸೀಲ್ದಾರ್ post, Assistant Commissioner post, even first division

clerk post ಕೂಡ direct recruitment ಆಗಬೇಕು. ಅನೇಕ Village Accountant ಯಾರಿಗೆ ಕೊಟ್ಟಿದ್ದಾರೆ ಎಂದರೆ daily wages ನಲ್ಲಿ ಕೆಲಸ ಮಾಡುತ್ತಿದ್ದವನಿಗೆ regularize ಆದತಕ್ಷಣ ಅವರಿಗೆ prime post. ಅದರಲ್ಲಿ ಕೂಡ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗ ಅಂತಹ ಕಡೆ ಒಬ್ಬ Village Accountant ಅಂದರೆ ಅವನು ಎಲ್ಲರನ್ನೂ ಮೀರಿಸುವಂತಹ ಶಕ್ತಿ ಇದೆ. Village Accountant ಕೋಟ್ಯಾಧೀಶ್ವರ. Sub Register Officer ಕೂಡ ಅವನ ಮುಂದೆ ಏನೂ ಇಲ್ಲ. ಅಷ್ಟೊಂದು corruption Sub register office ನಲ್ಲಾಗಲಿ, ಕೆಳಮಟ್ಟದ Village Accountant ಮಟ್ಟದಲ್ಲಿ ಇವತ್ತೂ ಇದೆ. ಏಕೆಂದರೆ ಅವರಿಗೆ ಯಾರೂ ಕೇಳುವವರೂ ಇಲ್ಲ, ಹೇಳುವವರಿಗೆ naturally ಅವರಿಗೆ ಯಾವ ಹಿಡಿತ ಕೂಡ ಇಲ್ಲ, At least, ಹೊಸದಾಗಿ recruit ಆದವನಾದರೆ ಭಯಭೀತಿಯಿಂದ ಐವತ್ತು ವರ್ಷವಾದರೂ confidential report ಗಾಗಿ, ಮುಂದೆ promotion ಸಿಗುತ್ತದೆಂದು ಚೆನ್ನಾಗಿ ಕೆಲಸ ಮಾಡುತ್ತಾನೆ. ಅದೂ ಕೂಡ ಇಲ್ಲ. ಆದುದರಿಂದ ದಯವಿಟ್ಟು ಇದನ್ನು ನೀವು reconsider ಮಾಡಿ. ಇಲ್ಲವೆಂದರೆ ಅವರಿಗೆ ಕೊಡಬೇಕಾದರೆ ಅಂತಿಮವಾಗಿ ಒಂದು powers ಕೊಡಿ. ಅದರ ಮುಂದೆ ಇಲ್ಲಿ ವಿಧಾನಸೌಧಕ್ಕೆ ಬರುವಂಥಾದ್ದಲ್ಲ. ಆ ಜಾಗಗಳಲ್ಲೆ ಗುಲ್ಬರ್ಗ, ಬೆಳಗಾಂ, ಮೈಸೂರು ಮತ್ತು ಬೆಂಗಳೂರಿನಲ್ಲೆ decide ಆಗುವ ಹಾಗೆ ಇರಬೇಕು. ಇಲ್ಲದೆ ಇದ್ದರೇ ಅಲ್ಲಿ Regional Commissionerಗೆ ಸುಮ್ಮನೆ powers ಕೊಟ್ಟು ಪುನಃ Appellate Authority ಯನ್ನು ನಾವು ಬೆಂಗಳೂರಿನಲ್ಲೇ ಇಟ್ಟುಕೊಂಡರೆ ಯಾರಿಗೂ ನ್ಯಾಯ ಸಿಗುವುದಿಲ್ಲ ಮತ್ತು decentralization ಮಾಡುವಂತಹ ಉದ್ದೇಶ ಏನಿದೆಯೆಂದರೆ ನ್ಯಾಯ ಸ್ಥಳದಲ್ಲೇ ಸಿಗಬೇಕು, local ಜನರಿಗೆ ಅನುಕೂಲವಾಗಬೇಕು. ಸಾವಿರಾರು ಮೈಲಿ ದೂರದಿಂದ ಬೆಂಗಳೂರಿಗೆ ಬರಬಾರದು ಎನ್ನುವಂತಹ ಉದ್ದೇಶದಿಂದ ಕೊಟ್ಟಿದೆ. ಆದರ ದುರ್ದೈವದಿಂದ ನಾವು ಅನೇಕ ಸಾರಿ ನಮ್ಮ ಅಧಿಕಾರವನ್ನು ಕೆಳಮಟ್ಟದಲ್ಲಿ ಕೊಡುವುದಕ್ಕೆ ತಯಾರಿದ್ದೇವೆ. ಅನೇಕ ಸಾರಿ ನಾವೇ ನೋಡುವುದಿಲ್ಲ. ಅನೇಕ ಸಾರಿ Secretary ಗಳು ಹೇಳುವುದನ್ನು ಕೇಳುವುದೇ ನಮ್ಮ ಕೆಲಸವಾಗಿದೆ. ಅವರು ನಿಮಗೆ ಅಧಿಕಾರ ಇಲ್ಲ, ಇದು cabinet ಗೆ ಹೋಗಬೇಕು ಎಂದರೆ ಅದು cabinet ಗೆ ಹೋಗುತ್ತದೆ. ಇಲ್ಲ ಇದು cabinet ಹೋಗುವ ಹಾಗೆ ಇಲ್ಲ, ಇದನ್ನು ನೀವೇ ಮಾಡಬಹುದು ಎಂದು ಅವರಿಗೆ ಬೇಕಾದರೆ ಅವರೇ ಮಾಡಬಹುದು. ಏಕೆಂದರೆ ನಮ್ಮಲ್ಲೂ ಲೋಪವಿದೆ. ಅನೇಕ ಬಾರಿ ನಾವೂ ಕೂಡ ತಿಳಿದುಕೊಳ್ಳದೇ blind ಆಗಿ ಅವರನ್ನು follow ಮಾಡುತ್ತಿರುವುದರಿಂದ ಕೆಳಮಟ್ಟದಲ್ಲಿ ಹಳ್ಳಿಜನರಿಗೆ ಅನ್ಯಾಯ ಆಗುವಂಥದಾಗುತ್ತದೆ. ಅದಕ್ಕಾಗಿ ಅವರಿಗೆ full powers ಕೊಡಿ, ಇಲ್ಲವೆಂದರೆ ಅದನ್ನು complete ಆಗಿ abolish ಮಾಡಿ. State level ನಲ್ಲಿ powers ಇಟ್ಟುಕೊಂಡು ಅಂತಿಮವಾಗಿ ಅದಕ್ಕೆ ನಿರ್ಣಯ ಕೊಡುವಂತಹ ಅಧಿಕಾರ ಇರಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :- ಮಾನ್ಯ ಮಾಧುಸ್ವಾಮಿಯವರು almost ಈಗಾಗಲೇ ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಇಷ್ಟೇ ಕೇಳುತ್ತೇನೆ, ನಿಮಗೆ ಇದನ್ನು ಪುನಃ ಈ ರೂಪದಲ್ಲಿ ತರಬೇಕು ಎನ್ನುವಂತಹ ಆಲೋಚನೆ ಏಕಾದರೂ ಬಂತು? ಅದಕ್ಕೆ grounds ಏನು? ಏನಾದರೂ ಒಂದು ಕೆಲಸ ಮಾಡುವುದಕ್ಕೆ ಒಂದು cause of action ಬೇಕಲ್ಲ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ರೈತರಿಗೆ, ಸಾಮಾನ್ಯ ಜನರಿಗೆ ತೊಂದರೆಯಾಯಿತು, ಅವರೆಲ್ಲಾ ಬಂದು ನಿಮಗೆ ಅಹವಾಲು ಕೊಟ್ಟು, ಪೀರ್ಯಾದು ಕೊಟ್ಟು ಜನತಾ ದರ್ಶನದಲ್ಲಿ ಹೇಳಿ, ಎಲ್ಲಾ ಆಗಿ, ಒಟ್ಟು ಅಭಿಪ್ರಾಯದ ಮೇಲೆ ನಿಮಗೆ ಜ್ಞಾನೋದಯವಾಗಿ, ಹೌದು ತಪ್ಪಾಗಿ ಬಿಡುತ್ತದೆ, ಇದು ಅಗತ್ಯವಾಗಿ ಇರಲೇಬೇಕಾಗುತ್ತದೆ, ಇಲ್ಲದಿದ್ದರೆ ಜನಸಾಮಾನ್ಯರಿಗೆ ಮತ್ತು ದಿನನಿತ್ಯದ ಜೀವನಕ್ಕೆ ಬಹಳ ತೊಂದರೆಯಾಗುತ್ತದೆ ಎಂದು ಏನಾದರೂ ಮನವರಿಕೆಯಾಗಿದ್ದರೆ, ಅದನ್ನು ನಮಗೆ ಹೇಳಿದರೆ, ನಾವೂ ಕೂಡ ದುಬಾರಿ ಮಾತನಾಡಿದೆವು ಎಂದು ಕ್ಷಮೆ ಯಾಚಿಸಿ, ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡುತ್ತೇವೆ. Administrative Reforms Commission ಏಕೆ ಮಾಡಿದಿರಿ ಎಂದು ಮೊದಲು ಹೇಳಿ. ಏನೇನು ಪೋಸ್ಟ್ಸ್ ಇವೆ, Taluk level Officers meeting ಎಂದು ಕರೆದರೆ ಯಾರೋ ಬಂದು ಕುಳಿತಿರುತ್ತಾರೆ. ನೀನು ಯಾವ Department ಎಂದು ಕೇಳಿದರೆ Industries Department ಎಂದು ಹೇಳುತ್ತಾನೆ. ಏನಪ್ಪ ನೀನು ಅಲ್ಲಿ ಎಂದರೆ Industries Department ನಲ್ಲಿ Industrial Production Officer, Industrial Extension Officer ಎಂದು ಹೇಳುತ್ತಾನೆ. ಅವನಿಗೆ ಏನೂ ಕೆಲಸವೇ ಇಲ್ಲ. ಇಲ್ಲಿ ಬೇಕಾದರೆ Industries Minister ಇದ್ದಾರೆ ಹೇಳಲಿ. Taluk level ನಲ್ಲಿ Industrial Extension Officer ಗೆ ಏನಾದರೂ ಕೆಲಸ ಇದೆಯಾ? ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ಏನು ಹೇಳುತ್ತೇನೆಂದರೆ tax payers money ಗೆ ನಾವು custodians. ನಮ್ಮ conscious prick ಆಗುವುದು ಬೇಡವೇ? ನಾನು ಇದನ್ನೇ ಹೇಳುವುದು, ಯಾರೋ ಇಲ್ಲಿ proposals put up ಮಾಡುತ್ತಾರೆ, ಏನು ಬೇಕಾದರೂ ಮಾಡುತ್ತಾರೆ. ಜನ ಸಾಮಾನ್ಯರಿಗೆ ಸಂಬಂಧಿಸದೇ ಇರುವಂತಹ ವಿಚಾರಗಳಲ್ಲಿ ನಿಮ್ಮ ಸಮಯವನ್ನು ಪಡೆದುಕೊಂಡು, ನಿಮ್ಮನ್ನು ಅವರು ವಶಕ್ಕೆ ತೆಗೆದುಕೊಂಡು ಇಂತಹ bill ಅನ್ನು introduce ಮಾಡುವಂತಹ ಸ್ಥಿತಿಗೆ ನಿಮ್ಮನ್ನು ತರುತ್ತಾರಲ್ಲ, ಇದು ನಮಗೆ ವ್ಯಥೆ. ಮಾನ್ಯ ಖರ್ಗೆಯವರು ಹೇಳಿದರು, Divisional Commissioner ಇದ್ದಾಗ ಏನೇನು ಆಗುತ್ತಿತ್ತು? ಎಂದು you transfer those powers, either downwards or upwards, ಎಲ್ಲೋ ಒಂದು ಕಡೆ ಬಿದ್ದಿರಲಿ. ಮೊನ್ನೆ ಒಂದು ದಿವಸ ನಾನು ಹೇಳಿದೆ, Forest Department

ನಲ್ಲಿ ನಮಗೆ ಅಧಿಕಾರಿಗಳು All India Cadre ನವರು ಇರಬೇಕು ಎನ್ನುವುದನ್ನು ನಾವು ಅಗತ್ಯತೆ ಮೇಲೆ decide ಮಾಡಿಲ್ಲ. ಯಾವ fancy ಗೆ ಮಾಡಿದರೋ ಗೊತ್ತಿಲ್ಲ. IFS ಇಷ್ಟು ಬೇಕು ಎಂದು ಕೇಳಿ ತೆಗೆದುಕೊಂಡು ಅವರಿಗೆ ಇಲ್ಲಿ ಮಾಡುವುದಕ್ಕೆ ಕೆಲಸ ಇಲ್ಲ. ಅವರನ್ನು University ಗೆ, Information Departmentಗೆ, ZPಗೆ, Archivesಗೆ ಹಾಕಿದ್ದೇವೆ. ಆಡಳಿತದ ಕಡೆಗೆ ನಿಮ್ಮ ಗಮನ ಹೋಗುತ್ತಿಲ್ಲ. ಈ ರಾಜ್ಯದ ಆಡಳಿತ ಹೇಗೆ ನಡೆಯಬೇಕು ಎಂದು ಗಮನಿಸುವುದಕ್ಕೆ ನಿಮಗೆ ಸಮಯ ಇಲ್ಲ. ನೀವು ಹೇಗೆ ಅಭಿವೃದ್ಧಿ ಸಾಧಿಸುವುದಕ್ಕೆ ಸಾಧ್ಯ? ದಯಮಾಡಿ ನೀವೇ ಹೇಳಿ. ನಾನು ಮೊದಲನೇ ಬಾರಿಗೆ ಈ ಸಭೆಗೆ ಬಂದಿದ್ದು 1978ರಲ್ಲಿ. ಇದು ಎಂತಹ ದುಸ್ಥಿತಿಗೆ ಬಂದಿದೆ ಎಂದರೆ, ಆಗ ಈ ವಿಧಾನಸೌಧದ ಮೊಗಸಾಲೆಗಳಲ್ಲಿ ಓಡಾಡಿದರೆ IAS officers ಪೈಕಿ ಆರೇಳು ಜನರ ಹೆಸರನ್ನು ಹೇಳಿ, ಇವರದು ಸ್ವಲ್ಪ ಸರಳ ಸ್ವಭಾವ, adjust ಆಗುತ್ತಾರೆ, integrity ಕಡಿಮೆ, ಇಂತಿಂತಹವರು ಹೀಗೆ ಎಂದು ಹೇಳುತ್ತಿದ್ದರು. ಇಡೀ ರಾಜ್ಯಕ್ಕೆಲ್ಲಾ ಸೇರಿ ಆರೇಳು ಜನರ ವಿಚಾರ ಮಾತನಾಡುತ್ತಿದ್ದರು. ಅವರು ಭ್ರಷ್ಟರು ಎನ್ನುವುದಕ್ಕೆ ಬಹಳ ಕಠಿಣ ಪದವನ್ನು ಉಪಯೋಗಿತ್ತಿರಲಿಲ್ಲ. ಅವರು adjustable, flexible people ಎಂದು ಆರೇಳು ಜನರು ಮಾತನಾಡುತ್ತಿದ್ದರು. IPS ಎಂದರೆ 8 ರಿಂದ 10 ಜನರ ಬಗ್ಗೆ ಮಾತನಾಡುತ್ತಿದ್ದರು. ಈಗ reverse ಆಗಿದೆ. ಈಗ ನಾವು integrity, ಪ್ರಾಮಾಣಿಕತೆ ಇರುವವರನ್ನು ಎಂಟತ್ತು ಹೆಸರು ಬಿಟ್ಟು, ಉಳಿದವರು ಪರವಾಗಿಲ್ಲ, ಸ್ವಲ್ಪ ಹೆಚ್ಚು ಕಡಿಮೆ ಹಾಗೆ ಹೀಗೆ adjust ಆಗುತ್ತಾರೆ ಎಂದಿದೆ. ಮೊದಲಿಗೆ ಎಲ್ಲೋ ಒಂದು check postಗೆ ಒಬ್ಬ Commercial Tax Department ನವನು, traffic ನಲ್ಲಿ ಒಳ್ಳೆಯ postಗೆ ಒಬ್ಬ Circle Inspector ಇವರು canvas ಮಾಡಿಕೊಳ್ಳುತ್ತಿದ್ದರು. ಈಗ IAS officers postingsಗೆ canvas ಮಾಡಿಕೊಳ್ಳುತ್ತಾರೆ. ಅವರಿಗೆ BDA ಬೇಕು, Industrial Area Development Board ಬೇಕು, Housing Board ಬೇಕು, Exercise Commissioner ಆಗಬೇಕು ಎಂದು canvas ಮಾಡಿಕೊಂಡು ಬರುತ್ತಾರೆ. ಆ canvas ನಾನಾ ರೂಪಗಳು. This is a secret known to all of us. ತಾವು ಮೊನ್ನೆ ಹೇಳಿದಂತೆ ದುರಂತ ಏನಾಗಿದೆಯೆಂದರೆ ಸಾರ್ವಜನಿಕರ ಆಪಾದನೆಗೆ ಭ್ರಷ್ಟರು ಎಂದು ನಾವೂ ನೀವೂ ಸಿಕ್ಕಿಬಿಟ್ಟಿದ್ದೇವೆ ಅಷ್ಟೇ. ನೀವು, ನಿಮ್ಮ ಕುಟುಂಬ ಒಂದು ರೀತಿಯಲ್ಲಿ ಜೀವನ ನಡೆಸಿಕೊಂಡು ಬಂದಿದ್ದೀರಿ. ನಿಮ್ಮ ಜೀವನ ಶೈಲಿಯಲ್ಲಿ ಏನಾದರೂ ಒಂದು ಚೂರು ಬದಲಾವಣೆಯಾಗಲಿ, ನೀವು ಯಾವುದಾದರೂ ಸುಮಾರಾಗಿ ಇರುವ ಒಂದು ಕಾರನ್ನು ತೆಗೆದುಕೊಂಡು ಹೋಗಿ. ನಿಮ್ಮ constituency ಯಲ್ಲಿ ಜನ ಎಲ್ಲಾ ಮಾತನಾಡಿಕೊಳ್ಳುತ್ತಾರೆ. "ನೋಡ್ದ ಕಣ್ಲಾ", ಎಂದು ಮಾತನಾಡಿಕೊಳ್ಳುತ್ತಾರೆ. ಇವರಿಗೆ

ಏನೂ ಗೊತ್ತೇ ಇಲ್ಲ, Bangalore Corporationನ Health Inspector ಆಗಿರುವಂಥವರು, ಅವನು ಇಲ್ಲಿ ಒಂದೂವರೆ ಕೋಟಿ ರೂಪಾಯಿಗಳ ಮನೆಯನ್ನು ಕಟ್ಟಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಇನ್ನೂ ತಾರುಣ್ಯದಲ್ಲಿ ಇದ್ದೀರಿ, ತಾವು ಬಹಳ ಚಿಕ್ಕ ವಯಸ್ಸಿನಲ್ಲೇ You are a privileged man, Opposition Leader ಆಗಿ ಇಲ್ಲಿ ಕುಳಿತು ಕೆಲಸ ಮಾಡಿದ್ದೀರಿ. "ಇದನ್ನು ಎಡಗೈಯಲ್ಲಿ ಬಿಸಾಕಿ, ಇನ್ನು ಇಂಥವು ಕೆಲಸಕ್ಕೆ ಬಾರದ ಉದ್ಯೋಗಗಳು ಯಾವ್ಯಾವುದು ಇವೆ, ಅವೆಲ್ಲವನ್ನು ತೆಗೆದು ಬಿಸಾಕುತ್ತೇವೆ, ಸರ್ಕಾರದ ಹೊರೆ ಕಡಿಮೆ ಮಾಡುತ್ತೇವೆ. ಅದರಲ್ಲಿ ಉಳಿಯುವಂಥ ದುಡ್ಡೆಲ್ಲಾ, ಮಾನ್ಯ ಯಡಿಯೂರಪ್ಪನವರ ಕಡೆಗೆ ಕೊಡುತ್ತೇವೆ. ಇನ್ನೂ ಜನಪರವಾದ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರೆ, ನಿಮ್ಮ ಗೌರವ ಹೆಚ್ಚು ಆಗುತ್ತಾ ಇತ್ತು. ಈಗ ನೀವು ಸೈಕಲ್ ಕೊಡುವ ಕಾರ್ಯಕ್ರಮವನ್ನು ಮಾಡಿದ್ದೀರಿ. ಇದನ್ನು ನಾವು ವಿರೋಧ ಮಾಡುವುದಕ್ಕೆ ಆಗುತ್ತದಾ? ಮಕ್ಕಳಿಗೆ ಸೈಕಲ್ ಅನ್ನು ಕೊಡಬೇಡಿಯೆಂದು ಹೇಳುತ್ತೇವಾ? ಇನ್ನೂ 20 ಸೈಕಲ್ ಜಾಸ್ತಿ ಕೊಡಿಯೆಂದು ಹೇಳಬಹುದೇ ಹೊರತು, ವಿರೋಧ ಮಾಡಿದರೆ, ನಾವು ಉಳಿಯುತ್ತೇವಾ? ಜನಪರ ಕೆಲಸವನ್ನು ಮಾಡುವ ಕಡೆಗೆ ಸರ್ಕಾರದ ಗಮನ ಇರಬೇಕೇ, ಹೊರತು ಇದು ಯಾವುವು ಜನರಿಗೆ ಸಂಬಂಧಿಸಿದ ಕೆಲಸಗಳಲ್ಲ. ಇದಕ್ಕೆ ತಾವು Secretariat ಅನ್ನು ನೋಡಬೇಕು. ಒಂದು order copy ನಮ್ಮ ಕೈಗೆ ಬರಬೇಕೆಂದರೆ, Secretariat ನಲ್ಲಿ ನಮ್ಮ ಜೀವ ಹೊರಟು ಹೋಗುತ್ತದೆ, ಪುನಃ ತಾಯಿ ಗರ್ಭದಿಂದ ಈಚೆಗೆ ಬಂದಂತೆ, last ಎಲ್ಲರದ್ದು ಆದ ಮೇಲೆ Section Officerಗೆ ಹೋಗುತ್ತದೆ. ಅವನು ರಜಾ ಹಾಕುತ್ತಾನೆ, ಇಲ್ಲವೆಂದರೆ ಹೊರಟು ಹೋಗುತ್ತಾನೆ, ಇಲ್ಲವೆಂದರೆ case-worker ಇಲ್ಲವೆಂದು ಹೇಳುತ್ತಾರೆ. Case-worker ಬೀರುವಿನ key ಯನ್ನು ಇಟ್ಟುಕೊಂಡು tea ಗೆ ಹೊರಟು ಹೋಗಿರುತ್ತಾನೆ, ಅವನು ಸಿಗುವುದಿಲ್ಲ, ಇಲ್ಲವೆಂದರೆ Typist ಇರುವುದಿಲ್ಲ, typist ಇದ್ದರೂ carbon paper ಇರುವುದಿಲ್ಲ. ಅತ್ಯಂತ ಪ್ರಮುಖವಾಗಿರುವಂತಹ ಸರ್ಕಾರಿ ಆಜ್ಞೆಗಳನ್ನು ಅವರು ತಡೆಯಬೇಕು, ಈಚೆಗೆ ಬರದಂತೆ ಮಾಡಬೇಕೆಂದರೆ ಇಷ್ಟು ಹುನ್ನಾರಗಳನ್ನು ಹೂಡುತ್ತಾರೆ. ಈಗ ನಮಗೆ ನವೀನ ಸಲಕರಣೆಗಳೆಲ್ಲಾ ಬಂದು ಬಿಟ್ಟಿದೆ. ಇವುಗಳನ್ನೆಲ್ಲಾ ಸುಲಭಗೊಳಿಸುವುದಕ್ಕೆ, ನಿನ್ನೆ tender ವಿಚಾರದಲ್ಲಿ ಮಾನ್ಯ ಯಡಿಯೂರಪ್ಪನವರು, E-tendering ಮಾಡಿಸುತ್ತೇವೆಂದು ಹೇಳಿದರು. Excellent, ನೀವು ಚರಿತ್ರೆಯ ಒಂದು ಭಾಗವಾಗಿ ಹೋಗುತ್ತೀರಿ. ನೀವು ಶಾಶ್ವತವಾಗಿ ಮುಖ್ಯಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ ಇರುತ್ತೀರಾ? ಆದರೆ ಇತಿಹಾಸದಲ್ಲಿ ಉಳಿಯುತ್ತೀರೋ, ಇಲ್ಲವೋ? ಅದು ಎಂಥ ನಿರ್ಣಯ. ನೀವು mind apply ಮಾಡಬೇಕು. ಇದು totally unfortunate. Police ಇಲಾಖೆಯವರು ಮೊನ್ನೆ ಒಂದು ಒತ್ತಡವನ್ನು ತಂದಿದ್ದಾರೆ.

Any number of DGಗಳನ್ನು ನೇಮಕ ಮಾಡಿಕೊಳ್ಳಬಹುದಂತೆ, ನಾನು ಇದನ್ನು ಆಮೇಲೆ ಹೇಳುತ್ತೇನೆ. ಈಗ ಎಲ್ಲಾದರೂ ಗಲಾಟೆಯಾದರೆ constableಗಳು field ಗೆ ಹೋಗುವುದು. ಇವರಿಗೆ constableಗಳ ಸಂಖ್ಯೆ ಅಲ್ಲ increase ಆಗಬೇಕಾಗಿರುವುದು, DGಗಳ ಸಂಖ್ಯೆ increase ಆಗಬೇಕಾಗಿರುವುದು, ಏಕೆಂದರೆ ಇಲ್ಲಿ ಅರಾಮವಾಗಿ ಕುಳಿತುಕೊಳ್ಳಬೇಕಲ್ಲಾ. ತಾವು guardಗಳು, forestersಗಳನ್ನು ಜಾಸ್ತಿ ಮಾಡಿ, ಗಿಡ ನೆಡಿ, ಅವುಗಳಿಗೆ ನೀರು ಹಾಕಿ, ಕಾಡನ್ನು ಬೆಳೆಸಿ ಎಂದರೆ, IFSಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತಾರೆ. ಇದು ಎಲ್ಲಾ This is not the right way of running the Government. ಇದನ್ನು ನಾವು ಆ ಪಕ್ಷ, ಈ ಪಕ್ಷ, ಆಡಳಿತ ಪಕ್ಷ ನಾವು ತಂದು ಬಿಟ್ಟೆವು, ಅಥವಾ ನೀವು ಆಡಳಿತದಲ್ಲಿ ಇದ್ದಾಗಲೇ ತಂದಿದ್ದೀರಿ, ಎಂದರೆ ಒಂದು ವೇಳೆ ನಾವು ಇದ್ದಾಗಲೇ ತಂದೆವು, ಎಂದು ಇಟ್ಟುಕೊಳ್ಳಿ. ಆಗ ನಮಗೆ ಇಷ್ಟು ಬುದ್ಧಿ ಇರಲಿಲ್ಲ, ಅಥವಾ ನಾವು ಅವತ್ತು ಯೋಚನೆ ಮಾಡಲಿಲ್ಲ, ಇವತ್ತು ನೀವು ಬಿದ್ದಂತೆ ನಾವು ಅತ್ತು ಹಳ್ಳಕ್ಕೆ ಬಿದ್ದಿದ್ದೆವು. ಇವತ್ತು ನೀವು, ನಾವು ಇಬ್ಬರೂ ಹಳ್ಳದಿಂದ ಹೊರಕ್ಕೆ ಬರೋಣ, ಎಚ್ಚೆತ್ತುಕೊಳ್ಳೋಣ. ನಮಗೆ, ನಿಮಗೆ ಎಲ್ಲರಿಗೂ ಕೂಡ ಸಾಮೂಹಿಕವಾಗಿ, ಹೊರಗಡೆ ಇರುವಂಥ ಜನರ ಜವಾಬ್ದಾರಿ ಇದೆ. ಈ ರೀತಿ ಅಧಿಕ ಹೊರೆ ಬೀಳತಕ್ಕಂಥ ನಿರೂಪಯುಕ್ತವಾದಂಥ, ಅನಗತ್ಯವಾದಂಥ, ಇಲ್ಲೆ ವಿಧಾನಸೌಧದಲ್ಲಿ ಕುಳಿತುಕೊಂಡು ಟೈಲರ್ ಹೊಲಿಗೆ ಹಾಕಿ ತಯಾರಿ ಮಾಡುವಂತಹ ಹುನ್ನಾರಗಳಿಗೆ ತಾವು ಬಲಿಯಾಗಬಾರದು. ಜನರ ಪ್ರತಿನಿಧಿಗಳಾಗಿ ನಮಗೆ ಯೋಚನೆ ಮಾಡುವಂಥ ಶಕ್ತಿ ಇದೆ. ನಮ್ಮದೇ ಆದಂಥ ನಿರ್ಣಯವನ್ನು ತೆಗೆದುಕೊಳ್ಳುವಂಥ ಸಾಮರ್ಥ್ಯ ಇದೆ, ಸಾಮರ್ಥ್ಯ ಇದ್ದದ್ದನ್ನು ಜೀರ್ಣಿಸಿಕೊಳ್ಳುವಂಥ ಯೋಗ್ಯತೆ ಇದೆಯೆಂದು ಅಧಿಕಾರ ನಮ್ಮ ಕೈಯಲ್ಲಿ ಇದ್ದಾಗ ನಿಭಾಯಿಸಬೇಕಾಗುತ್ತದೆ. ಇವೆಲ್ಲವನ್ನು ನಾವು ಮಾಡದೇ ಹೋದರೆ ನಿರರ್ಥಕವಾಗುತ್ತದೆ. ಅವರು ನಮ್ಮ ಬಗ್ಗೆ ಏನು ಲೆಕ್ಕ ಹಾಕುತ್ತಾರೆಂದರೆ, ಅವರು ನಮ್ಮನ್ನು ಹಾಸ್ಯ ಮಾಡಿಕೊಳ್ಳುವುದು. ನೀವು ಅಸೆಂಬ್ಲಿ ಮೆಂಬರ್ ಆಗುವುದಕ್ಕೆ ನಿಮಗೆ ಏನು qualification ಬೇಕು? ಅದಕ್ಕೆ 25 ವರ್ಷ ವಯಸ್ಸಾದರೆ ಸಾಕು, voter list ನಲ್ಲಿ ಹೆಸರು ಇದ್ದರೆ ಸಾಕು, ಜೈಲು ಆಗದಿದ್ದರೆ ಸಾಕು, ಹುಚ್ಚು ಹಿಡಿಯದಿದ್ದರೆ ಸಾಕು, ಹೌದು, ನಿಜ, ಅಷ್ಟೆ ಸಾಕು. ನಾವು ಹೇಳುತ್ತೇವೆ, ನೀವು ಗುಮಾಸ್ತನಾಗುವುದಕ್ಕೆ ಒಂದು ಡಿಗ್ರಿ ಮಾಡಿರಬೇಕು, IAS ಮಾಡುವುದಕ್ಕೆ ಒಂದು competitive exam ಮಾಡಿ training ಮಾಡಿಕೊಂಡು ಬಂದಿರಬೇಕು. ಆದರೆ ನಾವು ಜನರ ನಾಡಿಯ ಮಿಡಿತವನ್ನು ಹಿಡಿದು, ಬದುಕಿನಲ್ಲಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ, ಆ ಅಲೆಗಳಲ್ಲಿ ಈಜಿಕೊಂಡು ವಿಧಾನಸೌಧಕ್ಕೆ ಬರುವುದು, ಇಲ್ಲಿಗೆ ಪಕ್ಕಟೆಯಾಗಿ ಗಾಳಿಯಲ್ಲಿ ತೇಲಿಕೊಂಡು ಬೀಳುವುದಿಲ್ಲ.

ಶ್ರೀ ಕಾಮರಾಜನವರು ಏನು M.B.B.S.ಮಾಡಿದ್ದೀರಾ? I.A.S.ಮಾಡಿದ್ದೀರಾ? I.R.S.ಮಾಡಿದ್ದರಾ? I.F.S.ಮಾಡಿದ್ದರಾ? ಇವತ್ತಿಗೂ ಕೂಡ ಕಾಮರಾಜ್ ನಾಡರ್‌ರವರ ಕೈಯಲ್ಲಿ ತಯಾರಾದಂಥ ಶ್ರೀ.ಸಿ.ಸುಬ್ರಮಣ್ಯಂರವರು, ಶ್ರೀ ಆರ್.ವೆಂಕಟರಾಮನ್‌ರವರು, ಇಂಥವರೆಲ್ಲಾ ದೇಶವನ್ನು ಆಳಿದರು. ಅವರೆಲ್ಲಾ ಏನು ಓದಿದ್ದರು? ಮಾನ್ಯ ಕಾಮರಾಜ್‌ರವರ ಬಗ್ಗೆ ಆಫೀಸರ್‌ಗಳು ಜೋಕ್‌ಗಳನ್ನು ಮಾಡಿದರು. Please address a meeting ಎಂದು ಹೇಳಿದ್ದು ಅವರಿಗೆ ಅರ್ಥವಾಗಲಿಲ್ಲವಂತೆ, ಅವರ ಮನೆ address ಅನ್ನು ಕೊಟ್ಟರಂತೆ. ಮಾನ್ಯ ಗೋಪಾಲಗೌಡರು ಯಾವ graduate ಆಗಿದ್ದರು? ಮಾನ್ಯ ದೇವರಾಜ ಅರಸುರವರು, he was a just graduate ಅಷ್ಟೆ, ಅವರು only B.Sc. ಆಡಳಿತ ನಡೆಸುವುದಕ್ಕೆ, ಜನರ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕೆ, ಜನರ ಹೃದಯ ಸಿಂಹಾಸನದಲ್ಲಿ ಕುಳಿತುಕೊಳ್ಳುವುದಕ್ಕೆ, ನಮಗೆ ಹೃದಯ ಬೇಕು. ಅವರ ಹೃದಯದಲ್ಲಿ ಏನು ಆಳಲು ಇದೆ, ಏನು ಕೂಗನ್ನು ಹಾಕುತ್ತಿದೆ, ಅದನ್ನು ಆಲಿಸುವಂತಹ ಕಿವಿ ನಿಮ್ಮ ಹೃದಯಕ್ಕೆ ಇರಬೇಕು. ಉಳಿದ ಹಾಗೆ ತುತ್ತೂರಿಯನ್ನು ಬಾರಿಸುವವರು ಇದ್ದಾರಲ್ಲಾ, ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇವತ್ತು ನಿಮ್ಮ ಅಧಿಕಾರ ಹೋಗಲಿ, ನಾಳೆ ಅವರು ನಿಮಗೆ Good morning Sir, ಎಂದು ಕೂಡ ಹೇಳುವುದಿಲ್ಲ. ಅವರು ಆಗಲೇ waste ಎಂದು reserve ಮಾಡಿಕೊಳ್ಳುತ್ತಾರೆ. ವಿಧಾನಸೌಧದಲ್ಲಿ ಇರುವವರು ಅವರ energy ಬಗ್ಗೆ ಬಹಳ conscious ಆಗಿ ಇದ್ದಾರೆ. ನಾವು ಇದೆಲ್ಲವನ್ನು ಅನುಭವಿಸಿದ್ದೇವೆ. ನಾನು Speaker ಆಗಿ ಇದ್ದಾಗ ನನಗೆ ಸಿಗುತ್ತಿದ್ದ ಗೌರವ, ಈಗ ನನಗೆ ಸಿಗುವ ಗೌರವ, ನಾವು ಅದನ್ನು ನೋಡಿ ನಕ್ಕು ಹಾಗೇ ಹೋಗುತ್ತಾ ಇರುತ್ತೇವೆ. ಆಯಿತು ಬಿಡು, ಇದೆಲ್ಲಾ ಜೀವನದ ಒಂದು ಪರಿಯೆಂದುಕೊಂಡು ಹೋಗುತ್ತೇವೆ. The most cunning opportunistic class if you want to ever find amongst the human species please come and look for them in Vidhana Soudha, Mr.Acharya. Therefore, please never get misled by them. ನಿಮ್ಮ ಸ್ವಂತ ವಿವೇಚನೆಯನ್ನು ಉಪಯೋಗಿಸಿ, ಜನರ ಒಳಿತು, ಜನರ ಕಲ್ಯಾಣ ನಮಗೆ ಸರ್ವಸ್ವವಾಗಿರಬೇಕು. ಜನರ ಹಿತದೃಷ್ಟಿಯಿಂದ, ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇದರಲ್ಲಿ ನೀವು prestige ತೆಗೆದುಕೊಳ್ಳಬೇಡಿ. Please drop this proposal. This is my humble request to you.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಮಾನ್ಯ ಜಗದೀಶ್ ಶೆಟ್ಟರ್‌ರವರನ್ನು ಕೇಳುತ್ತಿದ್ದೇನೆ. Whether we are living in a democratic set up or bureaucratic set up? ಅವರು ಇದಕ್ಕೆ ಉತ್ತರ

ಹೇಳಬೇಕು, ಏಕೆಂದರೆ ನಾವು ಇಡೀ ಯಂತ್ರಾಂಗವನ್ನು, Democratize ಮಾಡುವುದರ ಬದಲು, bureaucratise ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು ಆಡಳಿತವನ್ನು ನಡೆಸುತ್ತಿರುವಂಥವರು, ಈ ರಾಜ್ಯದಲ್ಲಾಗಲಿ, ದೇಶದಲ್ಲಿಯಾಗಲಿ, ಹೆಸರಿಗೆ executive authority, Chief Minister, but ಆಡಳಿತ ನಡೆಸುತ್ತಿರುವಂಥವರೆಲ್ಲಾ ಅಧಿಕಾರಿಗಳಾಗಿದ್ದಾರೆ. Divisional Commissioner post ಅನ್ನು rejuvenate ಮಾಡುವುದಕ್ಕೆ ಒಂದು bill ಅನ್ನು ತಂದಿದ್ದಾರೆ. ಇದನ್ನು ರದ್ದು ಮಾಡುವುದಕ್ಕೆ ಜ್ಞಾನೋದಯವಾಗಿದ್ದು, ಯಾರಿಗೆ? ಆ advice ಅನ್ನು ಇವರಿಗೆ ಯಾರು ಮೊದಲು ಕೊಟ್ಟರು? ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರ ಕಮಿಟಿಯನ್ನು ನೇಮಕ ಮಾಡಿದ್ದ ಸರ್ಕಾರ ಇದನ್ನು ಆಲೋಚನೆ ಮಾಡಲಿಲ್ಲವಾ? ಅಥವಾ ಮಾನ್ಯ ಜಗದೀಶ್ ಶೆಟ್ಟರ್‌ರವರ ಒಂದು ವಿಷಯವನ್ನು ಹೇಳಬೇಕು. ಅವರಿಗೆ ಬುದ್ಧಿ ಇಲ್ಲ, ಹಾರನಹಳ್ಳಿ ರಾಮಸ್ವಾಮಿಯವರ ಕಮಿಟಿಯನ್ನು ಮಾಡಿ ಬಿಟ್ಟಿದ್ದರು. ಅವರು ಇದನ್ನು ರದ್ದು ಮಾಡಿದರು, ನಾವು ಬಾರೀ ಬುದ್ಧಿವಂತಿಕೆಯಿಂದ ಮತ್ತೆ ಇದನ್ನು ತರುತ್ತಿದ್ದೇವೆಂದಾದರೂ ಹೇಳಬೇಕು, ಮತ್ತೆ ಎಲ್ಲೆಲ್ಲಿ ಬುದ್ಧಿ ಕಡಿಮೆಯಾಗಿತ್ತು, ಯಾರ್‍ಯಾರಿಗೆ ಬುದ್ಧಿ ಕಡಿಮೆಯಾಗಿತ್ತು, ಎಷ್ಟೆಷ್ಟು ಪ್ರಮಾಣದಲ್ಲಿ ಬುದ್ಧಿ ಕಡಿಮೆಯಾಗಿತ್ತು, ಎಂಬುದನ್ನು ಸಹ ಈ ಸರ್ಕಾರ ಹೇಳಬೇಕಾಗುತ್ತದೆ. ಇದು ಏನು ಹುಡುಗಾಟಿಕೆಯಲ್ಲ, ಇವರು ಮನಸೋ ಇಚ್ಛೆ ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಇದು ಪ್ರಜಾಪ್ರಭುತ್ವ ದೇಶವಾಗಿದೆ. ಜನರು ಅಧಿಕಾರವನ್ನು ಕೊಟ್ಟಿರುವಂಥಾದ್ದು, ಇಲ್ಲಿ ಮಾನ್ಯ ಜಗದೀಶ್ ಶೆಟ್ಟರನ್ನು ಅಧಿಕಾರಿಗಳಲ್ಲ ಮಂತ್ರಿಗಳನ್ನಾಗಿ ಮಾಡಿರುವುದು. ನಾವು ಇಲ್ಲಿ ಮಾಡಿರುವುದು, ಇವರು ಸ್ವಲ್ಪವಾದರೂ ವಿವೇಚನೆ ಇಲ್ಲದೇ ಮನಸ್ಸು ಬಂದ ಹಾಗೆ ಒಂದು ಕಾಯಿದೆಯನ್ನು ತರುವಂಥಾದ್ದು, ಈಗ Divisional Commissioner post ಇದು ornamental post, ಇದು useless ಎಂದು ಒಂದು ಹಂತದಲ್ಲಿ ನೀವೇ ತೀರ್ಮಾನ ಮಾಡಿದ್ದೀರಿ. ಈಗ ಇದನ್ನು ವೈಭವೀಕರಣ ಮಾಡುವುದಕ್ಕೆ ಹೊರಟಿದ್ದೀರಿ. ನಾಳೆ ಇನ್ನೊಂದು ಸರ್ಕಾರ ಬಂದಾಗ ಇದನ್ನು ಏನು ಮಾಡುತ್ತದೋ ನಮಗೆ ಗೊತ್ತಿಲ್ಲ. ಅಂದರೆ ನೀವು ಆಡಳಿತ ಯಂತ್ರಾಂಗವನ್ನು ನಡೆಸುವುದರ ಬಗ್ಗೆ, ಆಡಳಿತ ಯಂತ್ರಾಂಗದ ಬಗ್ಗೆ ನಿಮ್ಮ ದೃಷ್ಟಿ ಏನು? ನಿಮ್ಮ concept ಏನು? Why bureaucracy is there? It is there to carry out the decisions of the democratic authorities. ಆದರೆ ಇವತ್ತು ಏನಾಗಿದೆಯೆಂದರೆ, you are carried away by them. ಅದರಿಂದ ಪರಿಣಾಮ ultimate ಏನು ಆಗಿದೆ? ಆಡಳಿತ ಯಂತ್ರಾಂಗದ ಬಗ್ಗೆ ಸರ್ಕಾರ ನಡೆಸತಕ್ಕಂಥ ಈ ಜನರ ದಿವಾಳಿಕೋರತನವನ್ನು ಇವರು ಪ್ರದರ್ಶನ ಮಾಡುತ್ತಿದ್ದಾರೆ.

12-30 ಗಂಟೆ

ಆಡಳಿತ ಯಂತ್ರಾಂಗದ ಬಗ್ಗೆ ಸರ್ಕಾರ ನಡೆಸತಕ್ಕಂಥ ಈ ಜನರ ದಿವಾಳಿಕೋರತನವನ್ನು ಇವರು ಪ್ರದರ್ಶನ ಮಾಡುತ್ತಿದ್ದಾರೆ. They are expressing, demonstrating their bankrupty towards the administration. They do not know an iota of the administration and its weakness. ಇವತ್ತು ಇವರು Regional Commissioner ಗಳನ್ನು ಮಾಡಲು ಹೊರಟಿದ್ದಾರೆ. ಯಾವುದನ್ನು streamline ಮಾಡಲಿಕ್ಕೆ ಇದನ್ನು ನೀವು ಮಾಡಿದ್ದೀರಿ. ಯಾವ ವಿಚಾರವನ್ನು streamline ಮಾಡಲಿಕ್ಕೆ ಇದನ್ನು ನೀವು ಮತ್ತೆ re-institute ಮಾಡುತ್ತಿದ್ದೀರಿ, re-constitute ಮಾಡುತ್ತಿದ್ದೀರಿ. ಅದನ್ನು ಹೇಳಿ ನೀವು. ಇದರಲ್ಲಿ ಏನಾದರೂ explain ಮಾಡಿರುವಿರಾ ನೀವು? ಈ ರೀತಿಯಲ್ಲಿ ನಾವು ಆಡಳಿತ ಯಂತ್ರಾಂಗವನ್ನು ಚುರುಕುಗೊಳಿಸಬೇಕಾಗಿದೆ, streamline ಮಾಡಬೇಕಾಗಿದೆ, ಅದಕ್ಕೋಸ್ಕರವಾಗಿ ನಾವು ಮತ್ತೆ ಈ ಹುದ್ದೆಗೆ ಪುನರ್‌ಜೀವ ಕೊಡುತ್ತಿದ್ದೇವೆ ಎನ್ನತಕ್ಕಂಥದ್ದನ್ನೇನಾದರೂ ನೀವು explain ಮಾಡಿರುವಿರಾ? ಇದಕ್ಕೆ ನೀವು ಏನು explanation ಕೊಟ್ಟಿದ್ದೀರಿ ಎಂದು ಹೇಳಿ. ಏನೂ ಇಲ್ಲ. ಇದಕ್ಕೆ ಒಂದು ತಿದ್ದುಪಡಿ ತಂದಿದ್ದೀರಿ, ಇದರಿಂದ ಒಂದು ವರ್ಷಕ್ಕೆ ಸುಮಾರು ಮೂರು ಕೋಟಿ ರೂಪಾಯಿಗಳ ಖರ್ಚು ಬರುತ್ತದೆ ಎಂದು ಹೇಳುತ್ತೀರಿ. ನೀವು ಈ Regional Commissioner postಗಳನ್ನು ಸೃಷ್ಟಿ ಮಾಡುವುದರ ಬದಲು, ಆಡಳಿತ ಯಂತ್ರಾಂಗವನ್ನು ಚುರುಕುಗೊಳಿಸಬೇಕು ಎಂದು ನಿಮಗೆ ಪ್ರಾಮಾಣಿಕತೆಯಿದ್ದರೆ, ತಹಶೀಲ್ದಾರ್ ಆಫೀಸ್‌ಗಳನ್ನು ಮೊದಲು strengthen ಮಾಡಿ. ಜಗದೀಶ್ ಶೆಟ್ಟರ್‌ರವರೇ ನೀವು ಪ್ರಾಮಾಣಿಕವಾಗಿ ಹೇಳಿ, ಎಲ್ಲ ತಹಶೀಲ್ದಾರ್ ಆಫೀಸ್‌ಗಳಲ್ಲಿ Revenue Inspector ಗಳಿದ್ದಾರೆಯೇ? Village Accountants ಇದ್ದಾರೆಯೇ? ಎಷ್ಟು ಜನ ಶಿರಸ್ತೇದಾರರುಗಳಿದ್ದಾರೆ? ಎಷ್ಟು ಜನ ಸರ್ವೇಯರ್‌ಗಳು ಯಾರಿದ್ದಾರೆ? ಒಬ್ಬ ಹುಡುಗನಿಗೆ Caste Certificate ಬೇಕೆಂದರೆ, ಅವನು ಒಂದು ತಿಂಗಳು ತಾಲ್ಲೂಕು ಆಫೀಸಿನ ಹತ್ತಿರ ಹೋಗುತ್ತಿರಬೇಕು. ಇಷ್ಟನೇ ತಾರೀಖಿನೊಳಗೆ ನೀನು ಎಲ್ಲ ಮೂಲ ದಾಖಲೆಗಳನ್ನು ಒದಗಿಸಬೇಕು ಎಂದು ಇಲಾಖೆಯವರು ಹೇಳುತ್ತಾರೆ. ಆ ಹುಡುಗನ ಅಪ್ಪ ಹೆಬ್ಬೆಟ್ಟು ಒತ್ತುವವನು. Caste Certificate ಪಡೆಯಲಿಕ್ಕೆ ಅವನು ತಹಶೀಲ್ದಾರ್ ಆಫೀಸಿಗೆ ಒಂದು ತಿಂಗಳು ಅಲೆಯಬೇಕು. Revenue Inspector ಇದ್ದರೆ secretary ಇರುವುದಿಲ್ಲ, Secretary ಇದ್ದರೆ Revenue Inspector ಇರುವುದಿಲ್ಲ. ಇವರಿಬ್ಬರೂ ಇದ್ದರೆ ಶಿರಸ್ತೇದಾರ್ ಇರುವುದಿಲ್ಲ. ಶಿರಸ್ತೇದಾರ್ ಇದ್ದರೆ ತಹಶೀಲ್ದಾರ್ ಆಫೀಸಿನಲ್ಲಿರುವುದಿಲ್ಲ. ಅವನಿಗೆ Caste Certificate ಸಿಗುವುದಿಲ್ಲ. ಈ ದೇಶದಲ್ಲಿ ಆಡಳಿತ ಬೇಕಾಗಿರುವುದು ಯಾರಿಗೆ? ಸಾಮಾನ್ಯ ಜನರಿಗೆ ಆಡಳಿತ ಸಿಗಬೇಕೋ ಅಥವಾ ವಿಧಾನಸೌಧದಲ್ಲಿರುವ

ನಮ್ಮಂಥವರಿಗೆ ಬೇಕೋ? ಯಾರಿಗೆ ಬೇಕು ಆಡಳಿತ. Luxury ಮಾಡುವವರಿಗೆ ಆಡಳಿತ ಬೇಕೇ? ಅದನ್ನು ನೀವು streamline ಮಾಡಿ. ಅಲ್ಲಿ ನೀವು post ಗಳನ್ನು ಹೆಚ್ಚು ಮಾಡಿ. Regional Commissioner ಗಳಿಗೆ ಇಲ್ಲಿ ನೀವು ಖರ್ಚು ಮಾಡುತ್ತಿರುವ 2 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಪೂಲ್ ಮಾಡಿ ನೀವು Revenue Office ಗಳನ್ನು strengthen ಮಾಡಿ. ಅದರಿಂದ ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ. Divisional Commissioner ಮೇಲೆ ಮತ್ತೆ appeal ಹೋಗುವ ಹಾಗಿಲ್ಲವೇ? ಪ್ರಾಮಾಣಿಕವಾಗಿ ಹೇಳಿ ನೀವು. ಹಾಗಿರುವಾಗ ಇದು ಮತ್ತೇಕೆ ಬೇಕು? Divisional Commissioner, Administrative Tribunal ಮತ್ತೆ High Court. High Court ಗೆ ಹೋದರೆ ಮತ್ತೆ Supreme Court. Then what is the point? ಯಾವ ಪುರುಷಾರ್ಥಕ್ಕೆ ನೀವು ಇದನ್ನು ತರುತ್ತಿದ್ದೀರಿ ಎಂದು ಹೇಳಿ. ಅಧ್ಯಕ್ಷರೇ, ನಿಮಗೂ ಅನುಭವವಿರಬಹುದು. ಶಾಸಕರಾದ ನಮ್ಮ ಕಣ್ಣಿನಲ್ಲೂ ನೀರು ಬರುತ್ತದೆ. ನಾವು ಒಂದು ಆಫೀಸಿನಲ್ಲಿ ಒಂದು order ತೆಗೆದುಕೊಳ್ಳಬೇಕಾದರೆ ವಾರಗಟ್ಟಲೇ ಒದ್ದಾಡಬೇಕು. C.M.Sign ಮಾಡಿ ಕಳುಹಿಸಿದರೆ, ಅದು ಒಂದು circle ಹೊಡೆದುಕೊಂಡು ಮತ್ತೆ ಬರಬೇಕಾದರೆ 15 ದಿವಸವಾಗುತ್ತದೆ. ಅಂಥ waste post ಗಳನ್ನೆಲ್ಲ ಇಲ್ಲಿ ಇಟ್ಟುಕೊಂಡಿದ್ದೀರಿ. ಆದರೆ, ಕೆಲಸಕ್ಕೆ ಬರುವ ಕಡೆಗಳಲ್ಲಿ, ಎಲ್ಲಿ ಜನರಿಗೆ serve ಮಾಡಬೇಕೋ, ಎಲ್ಲಿ ಜನರಿಗೆ ಸೇವೆ ಮಾಡಬೇಕೋ, ಎಲ್ಲಿ ಅಗತ್ಯತೆಯಿದೆಯೋ ಅಲ್ಲಿ ಜನರಿಲ್ಲ. Secretariat ಇರುವ M.S.Buildings ನಲ್ಲೇ ನೋಡಿ. Section Officer, ಅವನು, ಇವನು ಎಂದು ಯಾರ್ಯಾರೋ ಎಷ್ಟೊಂದು ಜನರು ಸೇರಿಕೊಂಡಿದ್ದಾರೆ ಇಲ್ಲಿ. ಆದರೆ, ನಮ್ಮ ತಹಶೀಲ್ದಾರ್ ಆಫೀಸಿನಲ್ಲಿ ಯಾರ್ಯಾರಿದ್ದಾರೆ ಎಂದು ನೋಡೋಣ ನಡೆಯಿರಿ. ಅಲ್ಲಿ peon ಗತಿಯಿಲ್ಲ, typist ಇಲ್ಲ. ಎಲ್ಲಿ Sir ನೀವು administration ಅನ್ನು strengthen ಮಾಡುವುದು? Divisional Commissioner post ಅನ್ನು Regional Commissioner ಎಂದು ಹೆಸರು ಬದಲಾವಣೆ ಮಾಡಿಬಿಟ್ಟು ನೀವು administration ಅನ್ನು strengthen ಮಾಡುವಿರಾ? ಯಾವ ಕಾರಣಕ್ಕೋಸ್ಕರ ನೀವು ಈ post ಅನ್ನು ಪುನರ್‌ರಚನೆ ಮಾಡಲಿಕ್ಕೆ ಹೊರಟಿದ್ದೀರಿ ಎಂದು ಹೇಳಿ. ಅದರ ಅವಶ್ಯಕತೆ ಏನಿದೆ? What is the emergency? ತುರ್ತಾಗಿ ಆಗಬೇಕಾಗಿದೆ ಎಂದು ಹೇಳಿದ್ದೀರಿ. What is the emergency for the Government to create this post? Regional Commissioner post ಅನ್ನು ಮಾಡುವಂಥ ತುರ್ತು ಏನಿದೆ ಎಂದು ಹೇಳಿ. Regional Commissioner ಅನ್ನು ಮಾಡಿ ಗುಲ್ಬರ್ಗಾವನ್ನು ಹೈದರಾಬಾದಿಗೆ ಕಳುಹಿಸಿಬಿಡಿ, ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಕಳುಹಿಸಿಬಿಡಿ. ಇದಕ್ಕೇನಾದರೂ ತಲೆ ಬುಡ ಎನ್ನುವುದಿದೆಯೇ? Is there any

meaning? Is there an iota of meaning? ಹಾಗಾದರೆ ನೀವು ಮೊದಲು ಇವುಗಳನ್ನು ರದ್ದು ಮಾಡಿದ್ದು ಏಕೆ? ಹಾರ್ನಹಳ್ಳಿ ರಾಮಸ್ವಾಮಿಯವರ ಸಮಿತಿ appoint ಆಗಿ ಅವರು report ಕೊಟ್ಟಿದ್ದೇ 2002-03ರಲ್ಲಿ. 2007-08ರ ಹೊತ್ತಿಗೆ, ಅಂದರೆ ಇಷ್ಟು ಬೇಗ ಅದು ನಿಮಗೆ ಹೇಗೆ useless ಅಂತ ಅನ್ನಿಸಿತು. ಆ ವರದಿಯನ್ನು ಇನ್ನೂ ಪೂರ್ತಿಯಾಗಿ implementatiion ಮಾಡಿಲ್ಲ. ಅದರ ಕೆಳಹಂತಕ್ಕೆ ನೀವು ಇನ್ನೂ ಹೋಗಲೇ ಇಲ್ಲ. Assistant Commissioner post ಗಳು ಇನ್ನೂ ಹಾಗೇ ಇವೆ. ಮಾಧುಸ್ವಾಮಿಯವರು ಹೇಳಿದ ಹಾಗೆ, ಆ ಪದವನ್ನು ಉಪಯೋಗಿಸುವುದಕ್ಕೆ ನನಗೆ ಆಗುವುದಿಲ್ಲ. ಏನೇನು ಆಗಿದೆ, ಎಲ್ಲೆಲ್ಲಿ ಲಾಬಿಗಳು ನಡೆಯುತ್ತವೆ ಎನ್ನುವ ಬಗ್ಗೆ ಆ ಭಾಷೆಯನ್ನು ಉಪಯೋಗಿಸಲು ನನಗೆ ಆಗುವುದಿಲ್ಲ. ಇದು ನಿಜವಾಗಿಯೂ ಕೂಡ ಜನತಂತ್ರಕ್ಕೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ನಾವೆಲ್ಲರೂ ಸೇರಿಕೊಂಡು ಮಾಡುತ್ತಿರತಕ್ಕಂಥ ಅವಮಾನ. ಇಡೀ ಅಧಿಕಾರವನ್ನು ಅಧಿಕಾರಿಗಳ ಕೈಗೆ ಕೊಟ್ಟುಬಿಟ್ಟು, ನಾವು ಕೈಬೀಸಿಕೊಂಡು ಹೋಗುತ್ತಿದ್ದರೆ, ಅವರು file ತೆಗೆದುಕೊಂಡು ಹಿಂದುಗಡೆ ಬರುತ್ತಿರುತ್ತಾರೆ. ಅವರು ಎಲ್ಲಿ ಹೇಳುತ್ತಾರೋ ಅಲ್ಲಿ sign ಮಾಡಿಕೊಂಡು ಹೋಗುವುದಷ್ಟೇ ನಮ್ಮ ಕೆಲಸವಾಗುತ್ತದೆ. Why we are calling it as a democracy when there is no even minimum respect towards the democratic system? You please democratize the whole administration instead of bureacratizing it. It is the basic principle of Democracy. When we accepted our Constitution, the basic principle is to make the administration more democratic for serving the people but not making it more bureacratic. Instead of going towards more liberal democracy we are going towards strong bureacratic system. ರೆವಿನ್ಯೂ ಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಪ್ರಾಮಾಣಿಕವಾಗಿ ಹೇಳಬೇಕು, ನಿಮಗೆ ಏನು powers ಇದೆ? ನಿಮಗೆ ಓಟು ಹಾಕಿರತಕ್ಕಂಥ ಒಬ್ಬ ಮನುಷ್ಯ ಬಂದು ಸ್ವಾಮಿ, ನನ್ನ ಮಗನಿಗೆ Caste Certificate ಕೊಡಲಿಕ್ಕೆ ಅಧಿಕಾರಿಗಳು ಒಂದು ತಿಂಗಳು ತಿರುಗಿಸಿದ್ದಾರೆ ಎಂದು ಹೇಳಿದರೆ, ಅವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರ ನಿಮಗೇನಿದೆ ಹೇಳಿ. ಪ್ರಾಮಾಣಿಕವಾಗಿ ಹೇಳಿ. You are a Revenue Minister. ನಿಮಗೆ ಓಟು ಹಾಕಿರತಕ್ಕಂಥ ಒಬ್ಬ ಮನುಷ್ಯ ಬಂದು, ನನ್ನ ಮಗನಿಗೆ Caste Certificate ಕೊಡಲು ಒಂದು ತಿಂಗಳಿಂದ ಅಡ್ಡಾಡಿಸುತ್ತಿದ್ದಾರೆ ಎಂದು ಹೇಳಿದರೆ, What action you are going to take? What authority you are having to take? ಹೇಳಿ ನೀವು. ನಿಮ್ಮ ಹತ್ತಿರ ಅಧಿಕಾರವೇನೂ ಇಲ್ಲ. ನೀವು Secretary ಗೆ ಬರೆಯಬೇಕು. ಅಷ್ಟೇ ನೀವು

ಮಾಡಬೇಕಾಗಿರುವ ಕೆಲಸ. Secretary ಗೆ ಬರೆದ ಮೇಲೆ, ಅವರೇನಾದರೂ ಕ್ರಮ ತೆಗೆದುಕೊಂಡರೆ ಸರಿ, ಇಲ್ಲದಿದ್ದರೆ ಇಲ್ಲ. I am told, one Deputy Commissioner told the then R.D.P.R. Minister, "Sir, I am having my own set of Rules. I am going according to that". ಹೀಗಾದರೆ, Minister Post ಅನ್ನು ಕಟ್ಟಿಕೊಂಡು ಏನು ಮಾಡಬೇಕು? ಒಬ್ಬ Cabinet Minister ಗೆ ಒಬ್ಬ D.C.ಹೇಳತಕ್ಕಂಥ ಉತ್ತರ ಅದು. ನೀವು ನೇಣು ಹಾಕಿಕೊಳ್ಳಬೇಕು.

ಅಧ್ಯಕ್ಷರು :- ರೆಡ್ಡಿಯವರೇ, ನೀವು ಮೂಲಭೂತವಾದ ವಿಚಾರಗಳಿಗೆ ಹೊರಟುಬಿಟ್ಟಿರಿ. ಇದರ ಬಗ್ಗೆ ಮಾತನಾಡಿ. ಅದನ್ನೆಲ್ಲ ಇಲ್ಲಿ ಚರ್ಚೆ ಮಾಡಿ ಏನು ಪ್ರಯೋಜನ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹಾಗಾದರೆ ವಿಧಾನಸಭೆಯಲ್ಲಿ ಏನು ಚರ್ಚೆಯಾಗಬೇಕು? ಎಂದು ಹೇಳಿ. ಮಾತನಾಡುವುದು ಬೇಡ ಎಂದು ಹೇಳಿ ಕುಳಿತುಕೊಂಡು ಬಿಡಲೇ? ವಿಧಾನಸಭೆಯಲ್ಲಿ ಚರ್ಚೆಯಾಗುವುದು ಇದೇನಾ? ವಿಧಾನ ಸಭೆಯಲ್ಲಿ ಚರ್ಚೆಯಾಗಬೇಕಾಗಿರುವುದೇ ಇಂಥ ವಿಚಾರಗಳು Sir. "To uphold the dignity of this House, to uphold the dignity of democracy, but not to uphold the dignity of the bureaucracy". ಆದ್ದರಿಂದ ಈ post ಅನ್ನು ಯಾರದ್ದೋ ತೆವಲಿಗೆ create ಮಾಡಿ ಸಾರ್ವಜನಿಕರ ಹಣವನ್ನು ಪೋಲು ಮಾಡಲಿಕ್ಕೆ ನಮಗೆ ಒಪ್ಪಿಗೆಯಿಲ್ಲ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮತ್ತೆ Divisional Commissioner ಹುದ್ದೆಗಳನ್ನು ಸೃಷ್ಟಿ ಮಾಡಿ, ಅವರಿಗೆ ಅಧಿಕಾರ ಕೊಡಲು ಹೊರಟಿದ್ದಾರೆ. Regional Commissioner ಎಂದು ಹೆಸರು ಬದಲಾಯಿಸಿದ್ದಾರೆ ಅಷ್ಟೇ. ಹಿಂದೆ ಇದ್ದಂಥ Divisional Commissioner ಗಳನ್ನು ಈಗ Regional Commissioner ಎಂದು ಮಾಡಿದ್ದಾರೆ. ವ್ಯತ್ಯಾಸವೇನೂ ಇಲ್ಲ. ಹಿಂದೆ ಇದ್ದ powers ವಾಪಸ್ಸು ಕೊಡಲು ಮಾಡಿದ್ದೀರಿ. ಕರ್ನಾಟಕ ಸರ್ಕಾರದಲ್ಲಿ ಎರಡು ಸಾರಿ ಈ Divisional Commissioner post ಗಳ ಅಗತ್ಯವಿಲ್ಲ ಎಂದು ತೀರ್ಮಾನವಾಗಿದೆ. ಹಾಗೆಯೇ ಎಲ್ಲ ಇಲಾಖೆಗಳಲ್ಲಿರುವ Sub Divisional post ಗಳು ಅಂದರೆ Joint Director ಗಳು, Dy.S.P.ಗಳು, Assistant Commissioner ಗಳು, Divisional Commissioner ಗಳು ಇಂಥ postಗಳೆಲ್ಲ Divisional level ನಲ್ಲಿವೆ. ಇವರಿಗೆ ಕೆಲಸಗಳೇನಿಲ್ಲ.

ಇವರಿಗೆ ಕೆಲಸಗಳೇನೂ ಇಲ್ಲ. ಇವರದು ಒಂದು ರೀತಿ post-office ಕೆಲಸ ಇದ್ದ ಹಾಗೆ. 1997–98ರಲ್ಲಿ ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ಮಾಡಿ ಸರ್ಕಾರಕ್ಕೆ ಒಂದು report ಕೊಟ್ಟು ಅನಗತ್ಯವಾದ ಸುಮಾರು 25 ಸಾವಿರ ಹುದ್ದೆಗಳನ್ನು ರದ್ದು ಮಾಡಬೇಕೆಂದು ಅದರಲ್ಲಿ ಹೇಳಿದ್ದೇನೆ. ಅದನ್ನು ತಾವು ಬೇಕಾದರೆ ತೆಗೆಸಿ ನೋಡಿ. ಅದಾದ ಮೇಲೆ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಅಧಿಕೃತವಾಗಿ ಒಂದು committee ಮಾಡಿದ್ದು, ಅವರೂ ಸಹ ಒಂದು report ಕೊಟ್ಟಿದ್ದಾರೆ. ಅವರ report ನ ಪ್ರಕಾರ ಸಹ ಇವು ಯಾವ ಹುದ್ದೆಗಳೂ ಕೂಡ ಅಗತ್ಯವಿಲ್ಲ. Smooth administration ಗೆ ಜನರಿಗೆ ನೇರವಾಗಿ ಆಡಳಿತ ಮುಟ್ಟಿಸಲಿಕ್ಕೆ ಏನೂ ಸಹಾಯಕವಾಗಲ್ಲವೆಂದು ದೀರ್ಘವಾದಂಥ ಚರ್ಚೆಯಾಗಿದೆ. ಈಗ ನೀವೇಕೆ ಹಿಂದಕ್ಕೆ ಬಂದಿದ್ದೀರಿ? ರದ್ದು ಮಾಡಿದವುಗಳನ್ನೆಲ್ಲ ಮತ್ತೆ ಏಕೆ ತೆಗೆಯುವುದಕ್ಕೆ ಬಂದಿದ್ದೀರಿ? ಅದರ ಅಗತ್ಯವೇನಿದೆ? ಅಗತ್ಯವಿದೆಯೆಂದು ನಿಮಗೆ ಎಲ್ಲಿ ಅನಿಸಿತು? ಯಾವ ಕಾರಣಕ್ಕೋಸ್ಕರವೆಂದು ನಿಮಗೆ ಅನಿಸಿತು? ಇದನ್ನು ಹೇಳಬೇಕು. D.C.ಗಳಿಗೆ ತಹಶೀಲ್ದಾರರುಗಳಿಂದ ಬಂದಂಥವುಗಳನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲವೇ? They are all senior IAS officers. ಈಗ ಅವರಿಗೇನೂ ಕೆಲಸವಿಲ್ಲ. ಎಲ್ಲ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅವೆಲ್ಲ ಅಧಿಕಾರ ವಿಕೇಂದ್ರಿಕರಣವಾದ ಮೇಲೆ ಸುಮ್ಮನೆ busy ಎಂದು ಹೇಳುತ್ತಾರೆಯೇ ಹೊರತು D.C.ಗಳಿಗೆಲ್ಲ ಕೆಲಸ ಕೂಡ ಕಡಿಮೆಯಾಗಿದೆ. ನಾನೂ ಕೂಡ ಕೂಲಂಕುಷವಾಗಿ ಪರಿಶೀಲನೆ ಮಾಡಿ, every department ನವರನ್ನು ಸಹ ಕರೆದು ಚರ್ಚೆ ಮಾಡಿದ್ದೇನೆ. ಅದರಲ್ಲಿ ನಾನು ಗಮನಿಸಿದ್ದೇನೆಂದರೆ, unnecessary ಜಾಗಗಳು, ಉಪಯೋಗ ಇಲ್ಲದಿರುವಂಥ ಜಾಗಗಳು, ಉಪಯುಕ್ತವಿಲ್ಲದಿರುವಂಥ ಜಾಗಗಳು, ಬಿಳಿಯಾನೆಗಳ ತರಹ ಇರತಕ್ಕಂಥ ಜಾಗಗಳು, ಇವುಗಳನ್ನು ರದ್ದು ಮಾಡುವುದಕ್ಕೆ ಮಾತ್ರ ಯಾವುದೇ ಇಲಾಖೆ ಅಧಿಕಾರಿಗಳು ತಯಾರಿಲ್ಲ. ಇದರಿಂದ administration delay ಆಗುತ್ತದೆಯೇ ಹೊರತು speedy disposal of the matters ಸಿಗಲಿಕ್ಕೆ ಸಾಧ್ಯವೇ ಇಲ್ಲ. ಒಂದು case ಅನ್ನು D.C.ತೀರ್ಮಾನ ಮಾಡಿದರೆ ಅದು Divisional Commissioner ಗೆ ಹೋಗುತ್ತದೆ. Divisional Commissioner 2 ವರ್ಷ 3 ವರ್ಷ ಇಟ್ಟುಕೊಳ್ಳುತ್ತಾರೆ. ಇದಕ್ಕೋಸ್ಕರ ಅವುಗಳನ್ನು create ಮಾಡಬೇಕೇ? See, justice delay ಆದರೆ justice denied ಎನ್ನತಕ್ಕಂಥದ್ದು, it is the basic principle. A justice delayed is justice denied ಎಂದು, ಅದನ್ನು ಮಾಡುವುದಕ್ಕೋಸ್ಕರ ಇದನ್ನು ಉತ್ಪತ್ತಿ ಮಾಡುತ್ತೀರಾ? ಇವರಿಗೆ ಬೇಕಾದಷ್ಟು appeal powers ಕೊಟ್ಟಿದ್ದಾರೆ. D.C.ಮಾಡಿದಂಥ ತೀರ್ಮಾನಗಳೆಲ್ಲ appeal ಆಗದೇ

ಇರಬಹುದು. Appealable ಇಲ್ಲದಿರಬಹುದು. ಕೆಲವು ಸರ್ಕಾರಕ್ಕೆ ಬರುತ್ತವೆ. ಕೆಲವು Divisional Commission ಗೆ ಹೋಗುತ್ತವೆ. ಮತ್ತು Divisional Commissioner ಮಾಡಿದಂಥ ಎಲ್ಲಾ ತೀರ್ಮಾನಗಳು ಕೂಡ appealable to Government, Secretary to the Government, Revenue Department. ಈ ಪುರುಷಾರ್ಥಕ್ಕೋಸ್ಕರ ಇದನ್ನು ಮಾಡುತ್ತೀರಾ? Agriculture Department, Health Department, Animal Husbandry, Sericulture, Horticulture, Education, ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿ Joint Director ಎನ್ನುವ ಹುದ್ದೆ ಇದ್ದು, ಇವರಿಗೆ ಕೆಲಸವೇನಿದೆ? What is the work they have? ಜೊತೆಗೆ ಅವರಿಗೊಂದು ಕಾರು, ಅವರಿಗೊಂದು office, ಅವರಿಗೆ ಸಿಬ್ಬಂದಿ, ಹೀಗೆ ಅವರಿಗೆ ಎಷ್ಟು ಹಣ ಖರ್ಚು ಮಾಡಬೇಕು? ಇವೆಲ್ಲವನ್ನು reduce ಮಾಡಬೇಕು, ಕಿತ್ತು ಹಾಕಬೇಕೆಂದು ಮಾಡಿದ್ದೆವು. ಏಕೆಂದರೆ, in order to cut down the wasteful expenditure, Again, ನೀವು wasteful expenditure ಕಡೆಗೆ ಹೋಗುತ್ತಿದ್ದೀರಿ. This is not correct. ಹಾರ್ನಳ್ಳಿ ರಾಮಸ್ವಾಮಿಯವರ report ನಲ್ಲಿ ಸಹ ಇದನ್ನೇ ಹೇಳಿದ್ದಾರೆ. ನಾನು ಸರ್ಕಾರಕ್ಕೆ ಕೊಟ್ಟಿರತಕ್ಕ report ನಲ್ಲಿ ಸಹ ಇದನ್ನೇ ಹೇಳಿದ್ದೇನೆ. ಯಾವುದಾದರೂ ಹುದ್ದೆ ರದ್ದು ಮಾಡಿ ಎಂದು ಹೇಳಿದಾಗ ಅವರು ಯಾವುದನ್ನು ತೆಗೆದುಕೊಂಡು ಬರುತ್ತಾರೆಂದರೆ, Class-4 ಅನ್ನು ಹಿಡಿದುಕೊಂಡು ಬರುತ್ತಾರೆ. ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ, Revenue Department ನಲ್ಲಿ ಈಗಲೂ ಅನೇಕ ಕಡೆ Village Accountant ಗಳಿಲ್ಲ, ಒಬ್ಬೊಬ್ಬ Village Accountant ಗೆ ಎರಡೆರಡು ಪಂಚಾಯತಿ, ಮೂರು ಮೂರು ಪಂಚಾಯತಿ in charge ಕೊಟ್ಟಿರುತ್ತಾರೆ. ನಂತರ, ಗ್ರಾಮ ಪಂಚಾಯತಿ Secretaryಗಳಿಲ್ಲ. Revenue Inspectors ಇಲ್ಲ, ತಹಶೀಲ್ದಾರಗಳು ನೇರವಾಗಿ recruit ಆಗಿಲ್ಲ. ಈ ಕಡೆ ಗಮನಕೊಟ್ಟು administration ಬಿಗಿ ಮಾಡಿ ಎಂದು ಹೇಳಿದರೆ, ಇನ್ನೊಂದಷ್ಟು administration ನಲ್ಲಿ ತುಂಬಿ, ಇನ್ನೊಂದಷ್ಟು ಜನರಿಗೆ ಅಧಿಕಾರ ಕೊಟ್ಟು ಇನ್ನೊಂದಷ್ಟು delay ಮಾಡುವುದಕ್ಕೆ ಏನು ಬೇಕೋ ಅದೆಲ್ಲವನ್ನು ಮಾಡುತ್ತಿದ್ದೀರಿ. This is very bad. And also, unnecessary wasteful expenditure ಜಾಸ್ತಿಯಾಗುತ್ತದೆ. ಸರ್ಕಾರದ excheque ಗೆ wasteful expenditure ಇನ್ನಷ್ಟು ಜಾಸ್ತಿಯಾಗುತ್ತದೆ. ಇದನ್ನು ಮಾಡಲಿಕ್ಕೆ ಮಾತ್ರ ಹೋಗಬೇಡಿ. Divisional Commissioner ಇಲ್ಲದಿದ್ದರೆ ಜಗತ್ತೇನೂ ಹಾಳಾಗುವುದಿಲ್ಲ. ರಾಜ್ಯ ಏನೂ ಹಾಳಾಗುವುದಿಲ್ಲ. ಇನ್ನೊಂದನ್ನು ಸಹ ನಾನು ಸರ್ಕಾರಕ್ಕೆ recommend ಮಾಡಿದ್ದೆ. I don't know, ಅದು ಜಾರಿಯಾಗಿಲ್ಲ. Minister Secretary ಯವರಿಗೆ ಬರೆಯುತ್ತಾರೆ, Secretary ಅವರ ಕೆಳಗಡೆಯವರಿಗೆ

ಬರೆಯುತ್ತಾರೆ, ಅದು Head of the Department ಗೆ ಹೋಗುತ್ತದೆ, ಆ Head of Department ನೇರವಾಗಿ Secretary ಗೆ ಬರೆಯುವುದಿಲ್ಲ, ಅಲ್ಲಿ clerk ನಿಂದ ಪ್ರಾರಂಭವಾಗಿ Section Officer, Under Secretary, Deputy Secretary, Special Secretary ಇವರೆಲ್ಲ ಆ Section Officer ಬರೆದಿರುವ ಮೇಲೆ ರುಜು ಹಾಕುತ್ತಾರೆಯೇ ಹೊರತು file ಮೇಲೆ ಅವರ ಅಪ್ಪನಾಣೆಗೂ ಏನೂ ಬರೆದಿರುವುದಿಲ್ಲ. ನೀವು ಬೇಕಾದರೆ ಎಲ್ಲ files ಅನ್ನು ತೆಗೆಸಿ ನೋಡಿ. I have observed so many files. ಒಂದು file ನಲ್ಲಿ Section Officer ಏನು ಬರೆದಿರುತ್ತಾನೋ ಅದನ್ನೇ repeat ಮಾಡಿ ಮಾಡಿ seen ಎಂದು ಬರೆದಿರುತ್ತಾರೆ ಅಥವಾ ಹಾಗೆಯೇ ಸಹಿ ಹಾಕಿ ಕಳುಹಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಕಂಡಿಕೆ 76 ಅನುಮೋದಿಸಿದೆ, ಕಂಡಿಕೆ 77 ಅನುಮೋದಿಸಿದೆ, ಕಂಡಿಕೆ 78 ಅನುಮೋದಿಸಿದೆ ಎಂದು ಬರೆಯುತ್ತಾರೆ.

ಶ್ರೀ ಹೆಚ್. ಆಂಜನೇಯ :- ಮೊದಲು Case worker. Case worker ಆದಮೇಲೆ Section Officer, ಆಮೇಲೆ Under Secretary, ಆಮೇಲೆ Deputy Secretary, ಆಮೇಲೆ Secretary.

ಶ್ರೀ ಸಿದ್ಧರಾಮಯ್ಯ :- ಯಾವುದೋ ಕಾಲದಲ್ಲಿ ಬ್ರಿಟಿಷ್‌ನವರು ಮತ್ತೊಬ್ಬರನ್ನು ನಂಬುತ್ತಿರಲಿಲ್ಲ. ಅದಕ್ಕೆ ಆ ಕಾಲದಲ್ಲಿ ಒಬ್ಬರ ಮೇಲೆ ಒಬ್ಬರನ್ನಿಟ್ಟಿದ್ದರು. ಸ್ವಾತಂತ್ರ್ಯ ಬರುವುದಕ್ಕೆ ಮುಂಚಿತವಾಗಿ ಅವನು ಇವನನ್ನು ನಂಬುತ್ತಿರಲಿಲ್ಲ, ಇವನು ಅವನನ್ನು ನಂಬುತ್ತಿರಲಿಲ್ಲ, ಅದಕ್ಕೋಸ್ಕರವಾಗಿ ಈ Secretary ಮೇಲೆ ಆ Secretary, ಆ Secretary ಮೇಲೆ ಈ Secretary, ಈ Secretary ಮೇಲೆ ಆ ಆಫೀಸರ್ ಎಂದು ಇಟ್ಟುಕೊಂಡಿದ್ದು. ಮತ್ತೆ ಯಾರಿಗಾದರೂ ಸ್ವತಂತ್ರವಾಗಿ note ಬರೆಯಿರಿ ಎಂದು ಹೇಳಿ ನೋಡೋಣ. File ಮೇಲೆ ಸ್ವತಂತ್ರವಾಗಿ note ತಯಾರು ಮಾಡುವುದಿಲ್ಲ.

ಶ್ರೀ ಆಂಜನಮೂರ್ತಿ :- ಒಬ್ಬ Secretary ಬರೆದಿದ್ದುದರಲ್ಲಿ ಇದನ್ನು ಒಪ್ಪಿಲ್ಲವೆಂದು ಯಾರಾದರೂ ಹೇಳಲಿ, ನೋಡೋಣ.

ಶ್ರೀ ಸಿದ್ಧರಾಮಯ್ಯ :- ಹೇಳುತ್ತಾರೆ. ನಾವೆಲ್ಲ ಒಪ್ಪುತ್ತಿರಲಿಲ್ಲ. Secretary ಹೇಳಿದನ್ನೆಲ್ಲ ನಾನು ಕೇಳುತ್ತಿರಲಿಲ್ಲ. ನಾನು ಸ್ವತಂತ್ರವಾಗಿ ತೀರ್ಮಾನ ಮಾಡಿಕೊಳ್ಳುತ್ತಿದ್ದೆ. It is different thing. ನಾನು ಯಾವಾಗಲೂ ಸಹ Secretary ಬರೆದಿರುವುದು ಸರಿ ಇದ್ದರೆ yes ಎಂದು ಹೇಳುತ್ತಿದ್ದೆ. ಇಲ್ಲದಿದ್ದರೆ ಹೋಗಪ್ಪ ಆಕಡೆ ಎಂದು ಕಳುಹಿಸುತ್ತಿದ್ದೆ. ಅದನ್ನು ನಾನು ಒಪ್ಪಿಕೊಳ್ಳುತ್ತಿರಲಿಲ್ಲ. It is different thing. ಅದು Minister ಗೆ

ಅಧಿಕಾರವಿರುವಂಥದ್ದು, ಸರ್ಕಾರಕ್ಕೆ ಅಧಿಕಾರ ಇರುವಂಥದ್ದು. ಎಲ್ಲ Minister ಗಳು ಅದನ್ನು discharge ಮಾಡುತ್ತಾರೆ, exercise ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ನಾನು, I not going to under estimate any Minister before us. ಅದನ್ನು ಮಾಡುತ್ತಾರೆಂದು ಅಂದುಕೊಂಡಿದ್ದೇನೆ. Because, that power is vested with the Government. No Secretary can over rule the decision of the Minister. Under the Business rules, he has no powers. Secretary ಬೇಕಾದರೆ ಇನ್ನೊಂದು ಸಲ ಪರಿಶೀಲನೆ ಮಾಡಿ ಎಂದು ಹೇಳಬಹುದೇ ಹೊರತು, he can not over rule the decision of the Minister. That is there. ಅದು Business rules ನಲ್ಲಿ ಸ್ಪಷ್ಟವಾಗಿದೆ. ಮತ್ತೆ ಆ Business rules ಗೆ ಸಹ amendment ಆಗಬೇಕು. ಅದರ ಬಗ್ಗೆ ಬೇರೆ ಕಡೆ ಚರ್ಚೆ ಮಾಡೋಣ. ಆ Business rules ಯಾವುದೋ ಕಾಲದಲ್ಲಿ ಮಾಡಿರುವಂಥಾದ್ದು. ಅಪ್ಪ ಹಾಕಿದ ಆಲದಮರಕ್ಕೆ ನೇತು ಹಾಕಿಕೊಂಡು, ನೇತು ಹಾಕಿಕೊಂಡು delay ಆಗುತ್ತಿದೆ. That is to be amended. ಆದ್ದರಿಂದ, ನಾನು ಹೇಳುವುದೇನೆಂದರೆ, ಈ level jumping ಎಂದು ನಾನು ಮಾಡಿದ್ದೆ. ಈ level jumping ಜಾರಿಗೆ ಬರಲೇ ಇಲ್ಲ. ಇವೆಲ್ಲ ಹೋದರೆ DPAR ನಲ್ಲಿ ಕೊಳೆಯುತ್ತಾ ಬಿದ್ದಿರುತ್ತವೆ. ಏಕೆಂದರೆ, no Secretary is in favour of this. ಏಕೆಂದರೆ ಮೇಲ್ಗಡೆಯವರಿಗೆ ಕೆಲಸ ಹಗುರ ಆಗಬೇಕಲ್ಲವೇ? ಅವರಿಗೆ ಏನೂ ಕೆಲಸ ಇರಬಾರದಲ್ಲವೇ? ಆ ಅಧಿಕಾರಿಗಳು ಒಂದು ದಿವಸಕ್ಕೆ ಎಷ್ಟು file ಗಳನ್ನು clear ಮಾಡತ್ತಾರೆ? ಒಂದು ದಿವಸಕ್ಕೆ 2 ಅಥವಾ 3 file ಗಳನ್ನು clear ಮಾಡಿದರೆ ಅದೇ ದೊಡ್ಡದು. ನಾವು ಒಂದೊಂದು ಸಲ ಒಂದು ದಿನಕ್ಕೆ 40,50 files ಅನ್ನು clear ಮಾಡುತ್ತೇವೆ. 100 file ಗಳನ್ನು clear ಮಾಡುತ್ತೇವೆ. ಇವರಿಗೆ 2 ಅಥವಾ 3 ಫೈಲೇ ದೊಡ್ಡದು. ನಾವು ಜನಗಳನ್ನು ನೋಡಬೇಕು, file clear ಮಾಡಬೇಕು, ಕೆಲಸ ಜಾಸ್ತಿ. ಆದರೆ, ಇವರಿಗೇನೂ ಇಲ್ಲ, ಬರೀ ಅದೇ ಕೆಲಸ. ಅದೇ ಕೆಲಸವಾಗಿದ್ದರೂ ಕೂಡ ಅಲ್ಲಿಂದ ತೆಗೆದುಕೊಂಡು ಬಂದು ಓದುತ್ತಾರೋ ಇಲ್ಲವೋ ಗೊತ್ತಿಲ್ಲ. Case worker ಏನು ಬರೆಯುತ್ತಾನೆ ಅಲ್ಲಿಂದ ಇಲ್ಲಿಯವರೆಗೆ ಇರುವ ಅಧಿಕಾರಿಗಳು ಓದುತ್ತಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಆ file ಅಷ್ಟು ಗಾತ್ರ ಆಗಿರುತ್ತದೆ. ಅದೇ ಮಾಡುವುದು. ಆದ್ದರಿಂದ, ನೇರವಾಗಿ Head of the Department ಕೂಡ Senior IAS Officer. ಎಲ್ಲಾ Head of Department ಗಳಿಗೆ ಕೂಡ Senior Scale ನಲ್ಲಿರತಕ್ಕಂಥವರು. Principal Secretary scale ನಲ್ಲಿರತಕ್ಕಂಥವರೆಲ್ಲ ಇದ್ದಾರೆ. ಅವರು ಬರೆದದ್ದನ್ನು ಈ case worker ಏನು scrutiny ಮಾಡುವುದು?

ಶ್ರೀ ಜೆ.ಸಿ. ಮಾಧುಸ್ವಾಮಿ :– ಆಕಸ್ಮಾತ್ ನಾಳೆ ಹೆಚ್ಚು ಕಡಿಮೆಯಾಗಿ, action ತೆಗೆದುಕೊಂಡು, ಅವನೇ suspend ಆಗಲಿ ಎಂದು ಆ ರೀತಿ ಮಾಡುತ್ತಾರೆ. Commissioner, Housing is responsible for keeping account in a private financial organization. ಅವರ ಮೇಲೆ action ತೆಗೆದುಕೊಳ್ಳಿ ಎಂದು Housing Board ವಿಚಾರದಲ್ಲಿ ನೀವೇ ಬರೆದಿರಿ. Suspend ಆಗಿದ್ದು ಯಾರು? ಯಾರೋ ಪ್ರಸನ್ನಯ್ಯ, ಮುನಿರತ್ನಯ್ಯ ಎಂಬುವವರು suspend ಆದರು. ಉದ್ಧಾರವಾಗುವರಾರು? ಇವತ್ತು ಇಲ್ಲಿ ಕುಳಿತಿರುವವರು Hon'ble Chief Secretary. 1 ಕೋಟಿ 67 ಲಕ್ಷ ರೂಪಾಯಿಗಳನ್ನು ಎಲ್ಲಿಯೋ deposit ಮಾಡುವಾಗ Hon'ble Deputy Chief Minister ರವರೆ, ನೀವು ಬರೆದರೂ ಇವತ್ತು ಈ ರಾಜ್ಯದಲ್ಲಿ Chief Secretary ಯಾಗುತ್ತಾರೆ.

ಶ್ರೀ ಸಿದ್ಧರಾಮಯ್ಯ :– ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಯಾವುದೋ ಒಂದು fake finance ಸಂಸ್ಥೆಯಲ್ಲಿ ಹಣ ಇಟ್ಟಿದ್ದರು. ಅದಕ್ಕೆ Housing Board Commissioner ರವರು approval ಮಾಡಿದ್ದರು. ಅದು fake company ಎಂದು ಗೊತ್ತಿದ್ದೂ ಹಣ ಇಟ್ಟಿದ್ದರು. ಅದಕ್ಕೆ ಜವಾಬ್ದಾರರಾರು? ಯಾರು Commissioner ರವರಿದ್ದಾರೆ ಅವರೇ ಜವಾಬ್ದಾರರು. ಯಾರೋ Accounts Officer ಅನ್ನು suspend ಮಾಡಿದರು. ಆಮೇಲೆ, ನಾನು, ಆ Commissioner ಮೇಲೆ disciplinary action ತೆಗೆದುಕೊಳ್ಳಬೇಕು, not against the Officer below the rank of Commissioner, ಅವರ ಕೆಳಗಡೆ ಇರುವವರಲ್ಲವೆಂದು ನಾನು ಬರೆದೆ. ಏಕೆಂದರೆ, ಅವರು file put up ಮಾಡಿದರೆ, ಅದನ್ನು ಬೇಡವೆಂದು Commissioner ರವರು ಹೇಳಬೇಕಾಗಿತ್ತು. ಅದನ್ನು ಅವರು ಮಾಡಲಿಲ್ಲ. ಆದರೆ, ಆ Commissioner ಮೇಲೆ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ, ಅದು DPAR ನಲ್ಲಿ ಹಾಗೆಯೇ ಕೊಳೆಯುತ್ತಾ ಬಿದ್ದಿತು. Now, he is the Chief Secretary to the Government. You see the administration.

ಶ್ರೀ ಜೆ.ಸಿ. ಮಾಧುಸ್ವಾಮಿ :– Warn ಮಾಡಿ, ಆ ಬಗ್ಗೆ ಅವರ C.R.ನಲ್ಲಿ ಹೇಳಿ, Whether he has committed or not, his negligence is not found in this ಎಂದು ಬರೆದು ಇಬ್ಬರನ್ನು jump ಮಾಡಿ ತಂದು ಆ seat ಗೆ ಕೂರಿಸಿರುವುದು. ಈಗ these are all qualifications. ಇಂಥವೆಲ್ಲ ಈಗ ಅರ್ಹತೆಗಳಾಗಿವೆ.

ಶ್ರೀ ಸಿದ್ಧರಾಮಯ್ಯ :- ನಾನು ಬರೆದಿರುವುದು ಇವತ್ತಿಗೂ ಕೂಡ it is on record. ಅದನ್ನು over look ಮಾಡಿ, ನಾನು ಬರೆದದ್ದಕ್ಕೆ ಮೂರು ಕಾಸಿನ ಬೆಲೆ ಇಲ್ಲದ ಹಾಗೆ ಮಾಡಿ DPAR ನವರು ಅದನ್ನು ಹಾಗೆಯೇ ಇಟ್ಟು ಅವರನ್ನು Chief Secretary ಮಾಡಿದರು. ಹೋಗಲಿ ಬಿಡಿ, ಈಗ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. I am quoting an instance. How the Government administration is running, ನೋಡಿ ಎಂದು ಹೇಳುವುದಕ್ಕೆ. ಸಣ್ಣಪುಟ್ಟ, ಜುಜುಬಿಗಳನ್ನು suspend ಮಾಡುವುದು ಮಾಡುತ್ತಾರೆ. ಆದ್ದರಿಂದ ನಾನೇನು ಹೇಳುತ್ತೇನೆಂದರೆ, ಈ ಎಲ್ಲ Divisional Level Officers ಇದ್ದಾರಲ್ಲ, ಯಡಿಯೂರಪ್ಪನವರೇ ನೀವು Finance Minister ಆಗಿದ್ದೀರಿ, ನಾನು ಹಿಂದೆ 1997-98 ನಲ್ಲಿ Finance Minister ಆಗಿದ್ದಾಗ ಒಂದು report ಕೊಟ್ಟಿದ್ದೇನೆ, ಅದನ್ನು ತರಿಸಿ ನೋಡಿ. There is a report. ಅದು ನಾನು submit ಮಾಡಿರುವ report. DPAR ನವರು, ನಾವು ಕುಳಿತುಕೊಂಡು ಎಲ್ಲ ಇಲಾಖೆಯವರನ್ನು ಕರೆದು report ಕೊಟ್ಟಿದ್ದೇವೆ. Carಗಳ ಬಗ್ಗೆ ಹೇಗಿರಬೇಕು, Telephone ಬಗ್ಗೆ ಹೇಗಿರಬೇಕು, D.C.ಗಳು ಹೊರಗಡೆಯಿಂದ ಬೆಂಗಳೂರಿಗೆ ಬಂದರೆ ಅವರಿಗೆ ಯಾವ ತರಹ ಕಾರ್‌ಗೆ ಭತ್ಯೆ ಕೊಡಬೇಕು ಎಂಬ ಬಗ್ಗೆ ಬೇಕಾದಷ್ಟು ಚರ್ಚೆ ಮಾಡಿ ಮಾಡಿದ್ದೇವೆ. ಆಮೇಲೆ, ರಾಮಸ್ವಾಮಿಯವರು ಕೂಡ ಒಂದು report ಕೊಟ್ಟಿದ್ದಾರೆ. ಇವೆಲ್ಲ ಕೊಟ್ಟ ಮೇಲೆಯೂ ಕೂಡ ಆ report ಗಳನ್ನೆಲ್ಲ ಕಸದ ಬುಟ್ಟಿಗೆ ಹಾಕಿಬಿಟ್ಟು ಇನ್ನಷ್ಟು ಸರ್ಕಾರಕ್ಕೆ ಹೊರೆ ಮಾಡಲಿಕ್ಕೆ ಈ Bill ತಂದಿದ್ದೀರಲ್ಲ, Why? Is there any situation to bring back the post of Deputy Commissioner as Regional Commissioner? Where is the necessity? It is going to be another burden on exchequer. ಇದು White elephant. ಎಷ್ಟು ಜನರಿಗೆ ಬೇಕು? ಒಬ್ಬ Joint Director ಗೆ ಒಂದು ಕಾರ್, ಒಂದು Office, ಸಿಬ್ಬಂದಿಗಳು. ಅವೆಲ್ಲ ಏಕೆ ಬೇಕು? Divisional Commissioner ಅವರಿಗೆ ಸಿಬ್ಬಂದಿ. D.C.ಅವರ ಕೈಕೆಳಗೆ ಕೆಲಸ ಮಾಡಬೇಕು. ಒಬ್ಬ District Head Divisional Commissioner ಕೈಕೆಳಗೆ ಕೆಲಸ ಮಾಡಬೇಕು. ಇವೆಲ್ಲ ಏಕೆ ಬೇಕು? ಇವರೆಲ್ಲ ಹೋದಾಗ ಅವರು ಕಾಯ್ದುಕೊಂಡು ನಿಂತಿರಬೇಕು. Supervise ಮಾಡುವುದಕ್ಕೆ power ಕೊಟ್ಟಿದ್ದೀರಲ್ಲ. ನೀವು ಉತ್ತರ ಕರ್ನಾಟಕಕ್ಕೆ ಹೋಗಿ ನೋಡಬೇಕು. ಯಾವುದೇ Guest House ಗೆ ಹೋಗಿ ನೋಡಿ, ಅವರು ನಮಗೆ ಇಡುವುದಿಲ್ಲ, Minister ಗಳಿಗೆ ಇಡುವುದಿಲ್ಲ, ಇಡಬೇಕೆಂದು ನಾನು ಹೇಳುವುದಿಲ್ಲ, ಅಲ್ಲಿ ಎಲ್ಲಿ ನೋಡಿದರೂ ಕೂಡ ದ್ರಾಕ್ಷಿ, ಬಾದಾಮಿ, ಮಾವಿನ ಹಣ್ಣಿನ ಕಾಲವಾಗಿದ್ದರೆ ಮಾವಿನ ಹಣ್ಣು ಇವನ್ನೆಲ್ಲ ತಂದಿಟ್ಟುಬಿಟ್ಟಿರುತ್ತಾರೆ. ನೀವು I.B.ಗಳಲ್ಲಿ ಹೋಗಿ ನೋಡಬೇಕು. ಯಾರ್‍ಯಾರು I.B.ಗೆ ಬಂದಿದ್ದರೆಂದು ಕೇಳಿದರೆ, ಅದೇ ಸಾರ್,

Joint Commissioner, Divisional Commissioner ಬಂದಿದ್ದರು ಸಾರ್, ಅದಕ್ಕೆ ಇವೆಲ್ಲ ತಂದಿಟ್ಟಿದ್ದೇವೆ ಸಾರ್ ಎಂದು ಹೇಳುತ್ತಾರೆ. ಇದಕ್ಕೇ ಸರ್ಕಾರದ ಹಣ ಖರ್ಚಾಗುವುದು? ಬಡಬೋರೇಗೌಡನ ಹಣವನ್ನು ತೆಗೆದುಕೊಂಡು ಹೋಗಿ ಹೀಗೇ ಖರ್ಚು ಮಾಡುವುದು? ಅದಕ್ಕೆ ಇದ್ಯಾವುದಕ್ಕೂ ದಯವಿಟ್ಟು ನೀವು..

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ :– ಉತ್ತರ ಕರ್ನಾಟಕದ ಭಾಗದ ಎಲ್ಲ ಕಡೆ ಬಾದಾಮಿ, ಕಾಜು ಅಂದರೆ ಅದು ನಿಜಾಮರ state ಆಗಿತ್ತು. ಆ Culture ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಯಾರಾದರೂ ಸಚಿವರು, Opposition Leader ರವರು ಬಂದರೆ ಕೋಳಿ ಊಟ ಹಾಕಿಸುತ್ತೇವೆ. ದಮಕಿ ಬಿರಿಯಾನಿ, ಚಿಕನ್ ಇಂಥವೆಲ್ಲ ಮೊದಲಿನಿಂದ ಇದ್ದವು.

ಶ್ರೀ ಸಿದ್ಧರಾಮಯ್ಯ :– ನೀವು ನನಗೆ ದ್ರಾಕ್ಷಿ, ಖರ್ಜೂರ ಮಾತ್ರ ತಂದಿಟ್ಟರಲಿಲ್ಲ. Minister ಆಗಿ ನೀವು ನನಗೆ ಉಪಚಾರ ಮಾಡುವುದು ಬೇರೆ. ನಾವು Colleague ಆಗಿ ಕೋಳಿ ಊಟ ಹಾಕಿಸುವುದು ಬೇರೆ. That is a different thing. ಇದು ನಿಜಾಮರ state ಅಲ್ಲ. ನಾನೇಕೆ ಹೇಳುತ್ತೇನೆಂದರೆ, all these posts, ಎಲ್ಲ Post Office ಗಳು ಇದ್ದ ಹಾಗೆ. ಆಮೇಲೆ, ಆ level jumping ಇದೆಯಲ್ಲ ಅದನ್ನು ಕೂಡಲೇ ಜಾರಿಗೆ ತರಬೇಕು. ನೇರವಾಗಿ Head of the Department Secretary ಗೋ, Additional Secretary ಗೋ ಬರೆಯುವಂಥದ್ದಾದರೂ ಇರಬೇಕು. ಅದು ಬಿಟ್ಟು, ಅವನ್ಯಾರೋ Case worker, Senior Officer ಕಳುಹಿಸಿದಂಥ report ಅನ್ನು scrutiny ಮಾಡುವುದು, ಅವನು scrutiny ಮಾಡಿದ note ಅನ್ನು Principal Secretary to the Government approve ಮಾಡುವುದು. ಅದನ್ನು Minister ಗೆ submit ಮಾಡುವುದು. ಇವೆಲ್ಲ posts ಏಕೆ ಬೇಕು? ನಾನು ಒತ್ತಾಯ ಮಾಡಿ ಹೇಳುತ್ತೇನೆ, ನೀವು Finance Minister ಕೂಡ ಆಗಿದ್ದೀರಿ, ಆ report ತರಿಸಿ ನೋಡಿ. ಹಾರ್‍ನಹಳ್ಳಿ ರಾಮಸ್ವಾಮಿ report ತರಿಸಿ ನೋಡಿ. ಈ Bill ವಾಪಸ್ ತೆಗೆದುಕೊಳ್ಳಿ. ಇದೇನೂ ಅಗತ್ಯವಿಲ್ಲ. ಇದನ್ನು ತರದೇ ಹೋದರೆ, ರಾಜ್ಯದ ಆಡಳಿತ ಹೋಗಿಬಿಡುತ್ತದೆಯೇ? ಜಗದೀಶ್ ಶೆಟ್ಟರ್‌ರವರೆ, ನೀವು ಅಲ್ಲಿ ಒಳಗಡೆ ಹೇಳುತ್ತಿರುವಾಗ ಇದೇನೋ ಬಹಳ urgent ಆಗಿ ತರಬೇಕಾದ Bill ಏನೋ ಅಂದುಕೊಂಡಿದ್ದೆ. ಇದೇನೂ ಅಗತ್ಯವೇ ಇಲ್ಲ. Where is the urgency for this Bill?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಉತ್ತರ ಹೇಳುವಾಗ ಹೇಳುತ್ತೇನೆ. Notification ಹೊರಡಿಸಿದವರು, Cabinet decision ತೆಗೆದುಕೊಳ್ಳುವಾಗ ನೀವು ಉಪಮುಖ್ಯಮಂತ್ರಿಗಳಾಗಿದ್ದಿರಿ, Finance Minister ಆಗಿದ್ದಿರಿ. ಧರ್ಮಸಿಂಗ್‌ರವರು

ಮುಖ್ಯಮಂತ್ರಿಗಳಾಗಿದ್ದರು. ಇದನ್ನು ನೀವೇ ಹೇಳಿದ್ದು. ಅವತ್ತೇ, ನಿಮ್ಮ ಸರ್ಕಾರದಲ್ಲೇ ಇದು ಮಂಡನೆಯಾಗಬೇಕಾಗಿತ್ತು. ಇವತ್ತು ನಾವು ಮಂಡನೆ ಮಾಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಆಯಿತು. I agree. ತಪ್ಪಾಯಿತು.

ಶ್ರೀ ಜಗದೀಶ್ ಶೆಟ್ಟರ್ :– ನಾನು ಉತ್ತರ ಹೇಳುವಾಗ ಹೇಳುತ್ತೇನೆ. ಏಕೆ cause of action ಬಂತು? ಏನು ಕಾರಣ? ಯಾವಾಗ Cabinet decision ನಿರ್ಣಯವಾಯಿತು? ಎಲ್ಲವನ್ನೂ ನಾನು ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಅವತ್ತು Revenue Minister ಆಗಿದ್ದವರು ಇವತ್ತೂ ನಿಮ್ಮ ಜೊತೆ ಇದ್ದಾರಲ್ಲ.

ಶ್ರೀ ಸಿದ್ಧರಾಮಯ್ಯ :– ಬೇಡವೆನ್ನುವ report ನನ್ನದಿದೆ. No, it is not my....

ಶ್ರೀ ಜಗದೀಶ್ ಶೆಟ್ಟರ್ :– Cabinet decision ಇದ್ದರೆ ಜಂಟಿ responsibility ಬರುತ್ತದೆ. You are also party.

ಶ್ರೀ ಸಿದ್ಧರಾಮಯ್ಯ :– Party ಯಾದರೆ ಮಾಡಬೇಕೆಂದು ಎಲ್ಲಿದೆ? ನೀವು ತಪ್ಪನ್ನು ಸರಿಪಡಿಸಬಾರದೆಂದು ಇದೆಯೇ? ಆಯಿತು, ತಪ್ಪಾಗಿದೆ ಎಂದು ಇಟ್ಟುಕೊಳ್ಳಿ,...

ಅಧ್ಯಕ್ಷರು :– ಸಿದ್ಧರಾಮಯ್ಯನವರೆ, ನಿಮಗೆ ತಪ್ಪಾಗಿ ಕಾಣುತ್ತಿದೆ...

ಶ್ರೀ ಸಿದ್ಧರಾಮಯ್ಯ :– ಬೆಂಗಳೂರಿಗೆ Regional Commissioner ಬೇಕೆಂದು ತೀರ್ಮಾನವಾಗಿತ್ತು. ಎಲ್ಲ Divisional Commissioner ಹುದ್ದೆ ತೆಗೆದು, ವಾಪಸ್ Regional Commissioner ಮಾಡಿದ್ದು ಏಕೆ? ನಾಲ್ಕೂ division ಗಳಿಗೆ ತರಬೇಕೆಂದು ತೀರ್ಮಾನವಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ :– ಅದರ ಬಗ್ಗೆ ನಾನು ಹೇಳುತ್ತೇನೆ. 4 Divisional Commissioner ಹುದ್ದೆ ಮಾಡಬೇಕೆಂದು ನಿರ್ಣಯ ತೆಗೆದುಕೊಂಡವರು ನೀವು.

ಶ್ರೀ ಸಿದ್ಧರಾಮಯ್ಯ :– ಹೋಗಲಿ, ನಿಮ್ಮ ಕಾಲದಲ್ಲಿ ನಿಲ್ಲಿಸಿ. ಈಗ ಇದರಲ್ಲಿ Divisional Commissioner final ತೀರ್ಮಾನ ಮಾಡುವ ಅಧಿಕಾರ ಕೊಟ್ಟಿದ್ದೀರಾ? ಹಾಗಾದರೆ, ಅದನ್ನು ಕೊಡಬೇಕಾದರೆ, ನೀವೇನು ಯೋಚನೆ ಮಾಡಿದ್ದೀರಿ? ಎಲ್ಲ Divisional Commissioner ಗಳಿಗೆ final ಅಧಿಕಾರ ಕೊಟ್ಟಿದ್ದೀರಾ? Divisional Commissioners are also Secretary level Officers. ಅವರಿಗೆ ಕೊಟ್ಟಿದ್ದೀರಾ?

ಅವರ ಮೇಲೊಂದು appeal ಇಲ್ಲವೇ? ಅದಕ್ಕೇನು ಹೇಳುತ್ತೀರಿ? Alright, ನಾವೇ ತಪ್ಪು ಮಾಡಿದ್ದೇವೆಂದು ಇಟ್ಟುಕೊಳ್ಳಿ. ಅವರಿಗೆ work ಕಡಿಮೆ ಮಾಡಿ. ಹಾಗಾದರೆ, final ಆಗಿ ತೀರ್ಮಾನ ಮಾಡುವುದಕ್ಕೆ ಎಲ್ಲ ಅಧಿಕಾರ ಅವರಿಗೇ ಕೊಡಿ. ಹಾಗಾದರೆ, ಅದಕ್ಕೆ amendment ತೆಗೆದುಕೊಂಡು ಬನ್ನಿ. ಮತ್ತೆ, Post Office ಮಾಡುವುದೇ? ನಿಮ್ಮ ವಿವೇಚನೆಗೆ ಅದು ಸರಿ ಎಂದು ಅನಿಸಿದರೆ, ಮಾಡಿ. ಅದನ್ನು ಮಾಡುವುದಾದರೆ, ಕನಿಷ್ಟ ಪಕ್ಷ ಈ Divisional Commissioners ಗೆ ಪೂರ್ಣಾಧಿಕಾರ ಕೊಡಿ. ಅಲ್ಲೇ ಇತ್ಯರ್ಥವಾಗುವ ರೀತಿ ಮಾಡಿ. Joint Director ಗಳಿದ್ದಾರಲ್ಲ, ಅವರಿಗೇನು ಕೆಲಸ? Dy.S.P. ಇದ್ದಾರಲ್ಲ, ಅವರಿಗೂ ಏನೂ ಕೆಲಸವಿಲ್ಲ. ಮೊನ್ನೆ ನನಗೆ ಮಾಡಿದರಲ್ಲ, ಅದೇ ಕೆಲಸ. ಅವರಿಗೆ ಇನ್ನೇನೂ ಕೆಲಸವೇ ಇಲ್ಲ. Actually, ಒಬ್ಬ Inspector ಮಾಡುವ ಕೆಲಸದ ಮೇಲೆ ಇವರು ಸುಮ್ಮನೆ ಅವರಿಗೆ interfere ಆಗುವುದು ಬಿಟ್ಟರೆ ಬೇರೆ ಏನೂ ಕೆಲಸವಿರುವುದಿಲ್ಲ. Deputy Director ಗಳ ಮೇಲೆ interfere ಆಗುವುದು ಬಿಟ್ಟರೆ, Joint Director ಗಳಿಗೇನೂ ಕೆಲಸವಿರುವುದಿಲ್ಲ. ಅವರು decision ತೆಗೆದುಕೊಳ್ಳುವುದಕ್ಕೆ ಇವರು ಬಿಡುವುದಿಲ್ಲ. ಏಕೆಂದರೆ, ಇವರು ಎಲ್ಲ ಹಂಚಿಕೊಳ್ಳಬೇಕಲ್ಲ? ಪಾಲು ಹಂಚಿಕೊಳ್ಳತಕ್ಕಂಥ ಕೆಲಸವಾಗುತ್ತದೆ. I am seriously demanding. ಇವೆಲ್ಲ ರದ್ದು ಮಾಡಬೇಕು. ಇದರ ಬಗ್ಗೆಯೆಲ್ಲ ಹಾರ್‍ನಹಳ್ಳಿ ರಾಮಸ್ವಾಮಿಯವರ report ನಲ್ಲಿಯೂ ಇದೆ, ನಾನು ಕೊಟ್ಟಿರುವ report ನಲ್ಲಿಯೂ ಇದೆ, In the interest of smooth administration in the state.

(1–00 ಗಂಟೆ)

ಆಮೇಲೆ development ಆಮೇಲೆ to cut down the wasteful expenditure ಆಮೇಲೆ speedy disposal of the matters. ಮತ್ತೆ ದುಡ್ಡು ಉಳಿಸುವುದು. ಅದನ್ನು ಒಳ್ಳೆಯ ಕೆಲಸಗಳಿಗೆ ಉಪಯೋಗ ಮಾಡುವುದು. ಇದನ್ನು ಮಾಡುವುದು ಬಿಟ್ಟು, ಇಷ್ಟು ಖರ್ಚಾಗುತ್ತದೆ, ನೀವು ಮಾಡಿಬಿಟ್ಟಿದ್ದೀರಿ, ನಾವು ಅದೇ ತಪ್ಪು ಮಾಡಿದ್ದೇವೆಂದು ನೀವು ಅದೇ ತಪ್ಪು ಮಾಡುವುದಕ್ಕೆ ಹೋಗಬೇಡಿ. ನೀವು ಮಾಡಿರುವುದು ಎಲ್ಲಾ ಡೇಟ್ ಕೊಟ್ಟುಬಿಟ್ಟುತ್ತೇನೆಂದು ಹೇಳಿದಿರಿ, ಒಪ್ಪಿಕೊಂಡಿದ್ದೇವೆ ಇನ್ಯಾಕೆ ಡೇಟ್ ಕೊಡುವುದಕ್ಕೆ ಹೋಗುತ್ತೀರಿ? ಹಾಗಾದರೆ ನೀವು ಅವರಿಗೆ ಪೂರ್ಣ ಅಧಿಕಾರ ಕೊಡಿ. Power decentralize ಮಾಡಿ. ಅದು ಏನೂ ಮಾಡದೇ ಇದನ್ನು ತೆಗೆದುಕೊಂಡು ಬಂದರೆ, again ಇನ್ನೊಂದು ಬಿಳಿಯಾನೆಯನ್ನು ಸೃಷ್ಟಿ ಮಾಡಿದ ಹಾಗೆ ಆಗುತ್ತದೆ. ಈ ಬಿಲ್ ತಂದಿರುವುದರ ಜೊತೆಗೆ ನಾನು Finance Minister ಗೆ demand ಮಾಡುತ್ತೇನೆ. ಎಲ್ಲಾ division level office ಗಳನ್ನು ಇನ್ನೊಂದು ಸಾರಿ ಹಾರ್‍ನಳ್ಳಿ ರಾಮಸ್ವಾಮಿ report ತರಿಸಿಕೊಂಡು ಅದರಂತೆ decision ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :- ಮಾನ್ಯ ಅಧ್ಯಕ್ಷರೇ, ಈಗ ನಾವು Revenue Minister bill ತೆಗೆದುಕೊಂಡು ಬಂದರೆ ಟೀಕೆ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಾ learned bureaucrats, executives ಸೇರಿ ಒಂದು bill ತೆಗೆದುಕೊಂಡು ಬಂದಿರುವುದನ್ನು ನಾವು ವಾಪಸ್ ತೆಗೆದುಕೊಳ್ಳಿ ಎಂದರೆ ಅವರ ಗೌರವ ಏನಾಗುತ್ತದೆ? ಎಲ್ಲರೂ ಹೇಳಿದರು, ಅವರೆಲ್ಲ superiors, ಅಂಥ superiors bill ಅನ್ನು ನಾವು reject ಮಾಡಿದರೆ ನಮ್ಮ ಸದನಕ್ಕೆ ಗೌರವ ಇರುತ್ತದೆಯೇ? ಆದುದರಿಂದ, ತಾವು ಇದರಲ್ಲಿ ಕೊಟ್ಟಿದ್ದೀರಿ. Divisional Commissioner shall dispose of all such appeals and other proceedings connected therewith as if they were instituted before it. "Commissioner shall dispose", ಎಷ್ಟು ದಿವಸದಲ್ಲಿ? 15 ದಿವಸದ ಒಳಗಡೆ ಮಾಡುತ್ತಾರೆಯೆ? learned people, more efficiency, ಆಕಾಶದಿಂದ ಬಂದಿರುವವರು. ಒಂದು ವಾರದಲ್ಲಿ ಮಾಡುತ್ತಾರೆಯೆ? 10 ದಿವಸದಲ್ಲಿ ಮಾಡುತ್ತಾರೆಯೆ? ಎಷ್ಟು ದಿವಸದಲ್ಲಿ ಮಾಡುತ್ತಾರೆ? ಇದನ್ನು ತೆಗೆದುಕೊಂಡು ಕುರ್ಚಿ ಮೇಲೆ ಕುಳಿತುಕೊಂಡು ಡಿ.ಸಿ. file ಎಲ್ಲಿದೆ ಎಂದರೆ, D.C ಯವರು Regional Commissioner ಹತ್ತಿರ ಹೋಗಿದ್ದಾರೆ, ಎನ್ನುತ್ತಾರೆ. ನಾವು ಬಂದು ಅವರನ್ನು ನೋಡಬೇಕೆಂದರೆ, ಡೆಲ್ಲಿಗೆ ಹೋಗಿದ್ದಾರೋ, ಬ್ಯಾಂಕಾಕ್ ಹೋಗಿದ್ದಾರೋ, ಫೈಲ್ ತೆಗೆದುಕೊಂಡು ಹೋಗಿದ್ದಾರೋ ಇಲ್ಲವೋ ಎಂದು ಹೇಳುವುದಕ್ಕೆ ಅಲ್ಲಿ ಅಧಿಕಾರಿಗಳೂ ಇರುವುದಿಲ್ಲ. ತಮಗೆ ಗೊತ್ತಿದೆ ಸ್ವಾಮಿ ತಾವು ಹೋಗಿರುವುದು... ಅವರಿಗೆ ಗೊತ್ತಿದ್ದರೆ ತಾನೇ ಅವರು ಬ್ಯಾಂಕಾಕ್ ಗೆ ಹೋಗಿರುವುದು, ಇದು ಒಳ್ಳೆಯ ಕಥೆ. ಇಂಥ ಸ್ಥಿತಿಗೆ ನಾವು ಹೋಗಿ ಈ ಬಿಲ್ ಅನ್ನು ಪಾಸ್ ಮಾಡಿದರೆ, ನಿಜವಾಗಿ ನಮಗೆ ಗೌರವ ಇಲ್ಲ. Earlier Government, Divisional Commissioner cancel ಮಾಡಿದರು. ತಾವು ಅದನ್ನು ತೆಗೆದುಕೊಂಡು ಬರಬೇಕೆಂದು ಹೆಸರು ಚೇಂಜ್ ಮಾಡಿದಿರಿ. ಹೇಗೆ ಮಾಡಿದಿರಿ? ಮಲಗಿಕೊಂಡು ಬೆಡ್‌ಶೀಟ್ ಹಾಕಿಕೊಳ್ಳಿ ಎಂದು ಅವರು ಹೇಳಿದ್ದರು, ನೀವು ಏನು ಹೇಳುತ್ತೀರಿ, ಬೆಡ್‌ಶೀಟ್ ಹಾಕಿಕೊಂಡು ಮಲಗಿಕೊಳ್ಳಿ ಎಂದು ಹೇಳುತ್ತೀರಿ ಅಷ್ಟೆ. ಬೇರೆ ಏನೂ difference ಇಲ್ಲ. ನೀವು ಯೋಚನೆ ಮಾಡಿ; Education Department ನಲ್ಲಿ ಮಾಡಿದಿರಿ, ಸ್ಕೂಲ್ ಟೀಚರ್ಸ್ ಗೆ ಈಗ ನೀವು ಪ್ರಮೋಷನ್ ಕೊಡುವುದನ್ನೇ ನಿಲ್ಲಿಸಿಬಿಟ್ಟಿದ್ದೀರಿ. ಅವರನ್ನು currupt ಮಾಡುವುದಲ್ಲ. ಅವರು 5 ರೂಪಾಯಿ 10 ರೂಪಾಯಿ allowance extra ಕೊಡುತ್ತಾರೆಂದು teacher inspector post ತೆಗೆದರು, ಏಕೆ ಖರ್ಚು ಮಾಡಬೇಕೆಂದು ತೆಗೆದರು. ಅಸಿಸ್ಟೆನ್ಸ್ ಎಜುಕೇಶನ್ ಆಫಿಸರ್ಸ್ ಗೆ ಬಹಳ ಖರ್ಚಾಗುತ್ತೆಂದು ತೆಗೆದುಬಿಟ್ಟು ಬರಿ BEO ಇದ್ದರೆ ಸಾಕು ಎಂದು ಹೇಳಿದಿರಿ. ಸಾಮಾನ್ಯ ಸಂಬಳ ಇಟ್ಟುಕೊಂಡು

ಜೀವನ ಮಾಡುವವನಿಗೆ ಯಾವ post ಬೇಡ BEO ಸಾಕು ಎಂದು ಹೇಳುತ್ತೀರಿ, bureaucrats ರೆಡ್ ಲೈಟ್ ಕಾರ್, ಎಸಿ ರೂಂ, ಎಂಎಲ್ಎ ಗಳ ರೂಂ ನಲ್ಲಿ ಎಸಿ ಇಲ್ಲ. ನಾವು ಕೇಳುವುದೇ ಇಲ್ಲ. ಇಂಥವರಿಗೆ ನೀವು ಇನ್ನೊಂದು Regional Commissioner ಮಾಡುತ್ತೇವೆಂದರೆ, ಜೊತೆಗೆ ಅವರಿಗೆ ಕಷ್ಟವಾಗುವುದಕ್ಕೋಸ್ಕರ Assistant Regional Commissioner ಮಾಡಿ. ಅವರಿಗೆ ಸಹಾಯ ಮಾಡುವುದಕ್ಕೆ ಅದಕ್ಕೂ Regional Commissioner supervise ಮಾಡುವುದಕ್ಕೂ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಡಿವೈಡ್ ಮಾಡಿ North Regional Commissioner, South Regional Commissioner ಮಾಡಿ. ನೋಡಲ್ ಆಫೀಸರ್ಸ್ ತರಹ ನೋಡುವುದು. ಅವರನ್ನು ನೋಡುವುದಕ್ಕೆ ಒಂದು ಚೀಫ್ ಕಮೀಷನರ್ ಮಾಡಿ. ಆಗ Executive ಗಳ ಕೆಲಸವೇ ಇರುವುದಿಲ್ಲ. See, we are having finger to write. But, they are having golden fingers. ಮುಟ್ಟುವುದೇ ಇಲ್ಲ ಸಾರ್, ಒಂದು initial ಅಷ್ಟೆ. ಆ initial ಗೋಸ್ಕರ ನಾವು ಆರು ತಿಂಗಳುಗಳ ಕಾಲ ಕಾಯುತ್ತಿರಬೇಕು. ಜಸ್ಟ್ ಒಂದು ಪೆನ್ ತೆಗೆದುಕೊಂಡು ಒಂದು ಇನ್ಸಿಯಲ್, ಅದು ಎ ಹಾಕುತ್ತಾರೋ, ಬಿ ಹಾಕುತ್ತಾರೋ ನಮಗೆ ಗೊತ್ತಿಲ್ಲ. ಸಾರ್ ಫೈಲ್ ಹೋಗಿದೆ. ಉದಾಹರಣೆ ತೆಗೆದುಕೊಂಡು ಹೇಳುತ್ತೇನೆ. HUD department ನಲ್ಲಿ ಒಂದು report direct ಕಳುಹಿಸಿದ್ದಾರೆ. ಆ ರಿಪೋರ್ಟ್ ನಲ್ಲಿ ತಪ್ಪಾಗಿದೆ ಎಂದು ಹೇಳಿದ ತಕ್ಷಣ, ಕಾರಿಜೆಂಡರ್ ಕಳುಹಿಸುತ್ತೇವೆ ಎಂದರು ಹೇಳಿ ಒಂದು ತಿಂಗಳಾಗಿದೆ ಸ್ವಾಮಿ ಇನ್ನೂ ಕಾರಿಜೆಂಡರ್ ಕಳುಹಿಸಿದ್ದಾರೆಯೇ? ಕಳುಹಿಸಿದ್ದಾರೋ ಇಲ್ಲವೋ ಎಂದು ಕೇಳುವುದಕ್ಕೆ ಹೋಗಿದ್ದೆ HUD joint Commissioner, Principal Secretary ಹತ್ತಿರ meeting ನಲ್ಲಿ ಇದ್ದಾರೆಂದು ಹೇಳಿದರು. wait ಮಾಡಿ ಎಂದರು, ನಾನು wait ಮಾಡಿದೆ ಒನ್ ಅವರ್, ಒನ್ ಅಂಡ್ ಆಫ್‌ನವರ್ ಆಯಿತು, ಒಂದು ನಿಮಿಷ ಹೇಳಿ ಹೋಗೋಣ ಎಂದು ಒಂದು ಚೀಟಿ ಕಳುಹಿಸಿದೆವು. ಚೀಟಿ ತೆಗೆದುಕೊಂಡು ಎರಡು ಅವರ್ ಆದರೂ ಬರಲಿಲ್ಲ. ನಾನು Minister ಗೆ ಫೋನ್ ಮಾಡಿ ಸಾರ್ ಈ ತರಹ ಕ್ಲ್ಯಾರಿಫಿಕೇಶನ್ ಗೆ ಎರಡು ಗಂಟೆಯಿಂದ ಒಬ್ಬ ಎಂಎಲ್ಎ ತನ್ನ ಸಾವಿರಾರು ಕೆಲಸಗಳನ್ನು ಬಿಟ್ಟು ಕಾಯಬೇಕೆಂದರೆ, it is shame on my part here. just clarification. ಏನು can you able to attend public? ನಮಗೆ ಎಷ್ಟು ನೋವಾಗುತ್ತಿದೆಯೆಂದರೆ, you just note it. I am not ಹೆಬ್ಬೆಟ್. I have also studied, have some education. ಕೇವಲ ಒಂದು information ಕೇಳಿದರೆ two hours, ಅವನು ಪಿ.ಎಸ್.ಬರೆಯುತ್ತಾನೆ, ಶಾಸಕರು ಬಂದು ಕಾಯುತ್ತಿದ್ದಾರೆ ಇದರ ಬಗ್ಗೆ ಏನಾಗಿದೆ ಎಂದರೆ, reply ಕೊಟ್ಟಿಲ್ಲ. ಇಂಥವರಿಗೆ ನೀವು Regional Commissioner

ಆಗಿ ಕೂಡಿಸಿಬಿಟ್ಟರೆ, ಸಾಮಾನ್ಯ ಒಬ್ಬ ಬಡವನು ಹೋಗಿ ಆ Regional Commissioner ನೋಡುವುದಕ್ಕೆ ಆಗುತ್ತದೆಯೆ? Regional Commissioner office ಅಲ್ಲಿ ಇದೆ ಹೋಗಿ ನೋಡಿ ಎಂದರೆ, ಅವನು ನೋಡುವುದಕ್ಕಾಗುತ್ತದೆಯೆ? ಸಾಧ್ಯವೇ ಇಲ್ಲ. What for this Regional Commissioner? One man show. Deputy Commissionerಗೆ ಕೊಡಿ. Deputy Commissioner ಕೆಲಸ ಮಾಡಬೇಕು. ಅವರು ಏನು ಹೇಳುತ್ತಾರೆ, Deputy Commissioner ಇಡೀ ಜಿಲ್ಲೆಯನ್ನು ನೋಡಬೇಕು. ನೋಡುವುದಕ್ಕೇ ನಿಮಗೆ typist, steno, peon, ಎಲ್ಲಾ ಕೊಟ್ಟಿರುವುದು. ನಾವು 36–40 departments ನ್ನು ನೋಡುವುದಿಲ್ಲವೇ ಯೋಚನೆ ಮಾಡಿ ಸಾರ್. ನಾವು ನಿಮ್ಮನ್ನು ಟೀಕೆ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲರೂ ಅಧಿಕಾರಿಗಳು ಏನೇನು ಮಾಡಿದ್ದಾರೆಂದು ಹೇಳಿದ್ದಾರೆ. You have that power. You are a Minister. Take him to task. ಮಾಡುತ್ತೀರಾ? ಚೆಲುವರಾಯ ಸ್ವಾಮಿಯವರೆ ತಮಗೆ ಗೊತ್ತಿದೆ. ಈ ಅಧಿಕಾರಿಗಳು ಹೇಗೆ ಎಂದರೆ, ನಮ್ಮ KGF ನಲ್ಲಿ ARTO ಒಂದೇ ಒಂದು ARTO, ಎಲ್ಲಾ ಕೆಲಸ ಅವನೇ ಮಾಡಬೇಕು. Peon ಕೆಲಸ, break inspector ಕೆಲಸ ಎಲ್ಲಾ ಅವನು ಮಾಡಬೇಕು. ನೀವು ವಿಚಾರಣೆ ಮಾಡಿಕೊಳ್ಳಿ. ನಾನೂ ಕೇಳಿಲ್ಲ. ನನಗೆ ಅವಶ್ಯಕತೆಯಿಲ್ಲ, ಯಾವನಾದರೂ ಸಾಯಿಲಿ, ಎಲ್ಲಿಯಾದರೂ ಹೋಗಲಿ, ಹಾಳಾಗಲಿ, ನನಗೇನು? ಎಷ್ಟು ಮಾಡಿದರೂ ನಾವು we can go down? ಇದೆಲ್ಲಾ ಸೇರಿ ಈ ಅಧಿಕಾರಿಗಳನ್ನು ಹಾಗೆಯೇ ಮೇಲೆ ತೆಗೆದುಕೊಂಡರೆ ಆಮೇಲೆ ನಾವು ನೋಡುವುದಕ್ಕೆ ಆಗುವುದಿಲ್ಲ ಸ್ವಾಮಿ ಅವರು ಇನ್ನೂ ದೂರ ಹೋಗಿಬಿಡುತ್ತಾರೆ. ತಾವೇ, ಶಾಸಕರು ಬಂದಿದ್ದಾರೆ ಡಿಸಿ ಯವರೇ ಒಂದು clarification ಮಾಡಬೇಕೆಂದರೆ, ನಿಮಗೆ reverse reply ಕೊಡುತ್ತಾರೆ. I have sent it to Regional Commissioner. ಆ Regional Commissioner ಗೆ ಮತ್ತೆ ಫೋನು ಮಾಡಬೇಕು. ನೀವು ಮಂತ್ರಿ ಸ್ಥಾನದಲ್ಲಿ ಇದ್ದರೆ, ಅವರು he is in tour. ಮತ್ತೆ ನಿಮ್ಮ ಗತಿ? ನಮಗೆ ಏನು reply ಕೊಡುತ್ತೀರಿ, "ರಾಜೇಂದ್ರನ್‌ರವರೆ, ನೀವು ಏನು ಮಾಡಿ ಎಂದರೆ, ಅವರು ಟೂರ್‌ಗೆ ಹೋಗಿದ್ದಾರೆ ಬಂದ ಮೇಲೆ," ಎಂದು ಹೇಳುತ್ತೀರಿ. ಇವರು ಯಾವಾಗ ಟೂರ್‌ನಿಂದ ಬರುವುದು ಎಂದು ಕೇಳುತ್ತೀರಾ? Can you question him? No. ಆದರೆ ಜನ ನಿಮ್ಮನ್ನು question ಮಾಡುತ್ತಾರೆ, ನಾವು ನಿಮ್ಮನ್ನು question ಮಾಡುತ್ತೇವೆ. ಮಂತ್ರಿಗಳು ಟೂರ್ ಹೋದರೆ ಯಾವಾಗ ಬರುತ್ತಾರೆನ್ನುವ ಭಯ ನಿಮ್ಮ ಪಿಎಸ್ ಇಟ್ಟುಕೊಂಡು, ಶಾಸಕರು ನಾಳೆ ಸದನಗೊಳಗಡೆ ಮಾತನಾಡುತ್ತಾರೆಂದು ಅವರು ನಮಗೆ ಉತ್ತರ ಕೊಡುತ್ತಾರೆ. ಅವರು ಆಫೀಸಿನಲ್ಲಿ ಇರುವ ಕ್ಲರ್ಕ್‌ಗೆ ನಮ್ಮನ್ನು ಏನಾದರೂ ಕೇಳುತ್ತಾರೆ ಸ್ವಲ್ಪ ನೋಡಿಕೊಂಡು

ಇರು ಎಂದು ಜಾರಿ ಕೊಳ್ಳುತ್ತಾರೆ. ನಾವು ಹೋಗಿ ಸಾರ್ ಇದು ಏನಾಯಿತು ಎಂದು ಕೇಳಿದರೆ ಅವರು no idea, ಇಂಥ ಅಧಿಕಾರಿಗಳು. ನಮಗೆ ಬರುವ ಕೋಪ criminal case ನಮ್ಮ ಮೇಲೆ ಬುಕ್ ಮಾಡಿಕೊಳ್ಳಲಿ ಎಂದು ಡಿಸೈಡ್ ಮಾಡಿಬಿಟ್ಟರೆ ನಿಮ್ಮ ಆಫೀಸನಲ್ಲಿ ಒಬ್ಬನನ್ನು ಕೂರಿಸುವುದಿಲ್ಲ. ಅಂಥ ಸ್ಥಿತಿಗೆ ನಾವು ಬಂದಿದ್ದೇವೆ. ನಿಜವಾಗಲೂ ನಾವು ಜನರ ಹತ್ತಿರ ನಮಸ್ಕಾರ ಹೇಳಿ ಹೇಳಿ ಚಪ್ಪಲಿ, ಷೂ, ಹರಿದು ಓಟು ತೆಗೆದುಕೊಂಡು ಬಂದು ಇಲ್ಲಿ ಕುಳಿತುಕೊಂಡರೆ, ಇಲ್ಲಿ M.S.Building ಗೆ ಹೋಗಿ ನೋಡುವುದಕ್ಕೆ ಎಷ್ಟು ಷೂಗಳು ಹೋಗಿವೆಯೋ ಗೊತ್ತಿಲ್ಲ. ನನಗೆ ಬಹಳ ನೋವಾಗಿದೆ. ಇಂಥವರಿಗೆ Regional Commissoner post ಅವಶ್ಯಕತೆನೇ ಇಲ್ಲ. This is a criminal waste. If you give this Regional Commissioner they use extra constitutional power. ಅವರು ಯೂಸ್ ಮಾಡೇ ಮಾಡುತ್ತಾರೆ. ಅದರಿಂದ ಜನಕ್ಕೆ ಏನೂ ಅನುಕೂಲವಾಗುವುದಿಲ್ಲ. ಆದ್ದರಿಂದ ಅಧಿಕಾರವನ್ನು ನಿಮ್ಮ ಕೈಯಲ್ಲಿಟ್ಟುಕೊಳ್ಳಿ, ನಾವು ಬಂದು ಸಾರ್ ಈ ರೀತಿ ಸಾಮಾನ್ಯ ಬಡವನಿಗೆ ನ್ಯಾಯ ಬೇಕೆಂದರೆ ತಾವು ಸಹಿ ಮಾಡಿ "it is ordered" ಎಂದು ಕೊಡಿ. ಅದಕ್ಕೆ ತಾನೇ ಜನ ನಿಮಗೆ ಪವರ್ ಕೊಟ್ಟಿರುವುದು. ಮಂತ್ರಿ ಎಂದರೆ ಏನು ಸಾರ್? You are equivalent to God. ಅಯ್ಯೋ ನಮ್ಮ ಮಂತ್ರಿ ಬಂದಿದ್ದಾರೆ, ನಾನು ಹೋಗಿ ಕೇಳುತ್ತೇನೆ ನನಗೆ ಜಸ್ಟೀಸ್ ಸಿಗುತ್ತದೆಂದರೆ, ಅಲ್ಲಿ order pass ಮಾಡಿ. ನೀವು ಮಾಡುವುದೇ ಇಲ್ಲ. ನೀವು ಜನರ ಮುಂದೆ ಕಮೀಷನರ್‌ಗೆ ಹೇಳುತ್ತೇನೆ, Regional Commissioner ಗೆ ಹೇಳುತ್ತೇನೆ ಎಂದು ಹೇಳಿಕೊಂಡು ಹೋದರೆ, ಅವರು ನಿಮ್ಮನ್ನು ಕೈಬಿಟ್ಟು ಅವರನ್ನು ದೇವರೆನ್ನುತ್ತಾರೆ. next ಚುನಾವಣೆ ಬಂದರೆ ಅಯ್ಯೋ ಬಿಡ್ರೀ ಕಮೀಷನರ್ ಇದ್ದಾರೆಂದು ಹೇಳುತ್ತಾರೆ. ಈ ಕಮೀಷನರ್ ಎಲೆಕ್ಷನ್ ಟೈಂ.ನಲ್ಲಿ, emergency, ಇದರಲ್ಲಿ ಕೆಲಸ ಮಾಡುವುದು ನೋಡಬೇಕು ಸ್ವಾಮಿ. ಅದೇ ಕಮೀಷನರ್ ನಾವು ಹೋಗಿ ಫೈಲ್ ಕೊಟ್ಟರೆ ಕೆಲಸ ಮಾಡುವುದಿಲ್ಲ. ಎಲೆಕ್ಷನ್ ಟೈಂನಲ್ಲಿ no no very serious. Nothing doing, ಬಿಡುವುದೇ ಇಲ್ಲ, ಜಗದೀಶ್ ಶೆಟ್ಟರ್ ರವರಿಗೆ TB ಬರಬಾರದು ಸಾರ್. ಪಾಪ ಅವರಿಗೆ ಏಕೆ TB ಬರಬೇಕು? ಸಾರಿ..Travelers bunglow ನಲ್ಲಿ ಬರಬಾರದು. He is a well physic man. ಅಲ್ಲ ಸಾರ್ IB ಎಂದು ಹೇಳಿ ಸಾರ್. ಟಿ.ಬಿ. ಬರಬಾರದೆಂದು ತಾವು ಹೇಳುತ್ತಿದ್ದೀರಿ. ಟಿ.ಬಿ. ಬದಲು ತಾವು ಟ್ರಾವಲರ್ಸ್ ಬಂಗಲೆ ಎಂದು ಅಥವಾ ಅದನ್ನು ನೀವು ಐ.ಬಿ. ಎಂದು ಹೇಳಿ. ಟಿ.ಬಿ ಬರಬಾರದು ಎಂದು ಹೇಳಿದರೆ ಹೇಗೆ? He is well Physic man. ನಾನು ಹೇಳಿರುವ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ನಿಮಗೆ ಟಿ.ಬಿ. ಬರಬಾರದು ಮತ್ತೆ ಏನೂ ಕೂಡ ಬರಬಾರದು ಮತ್ತೆ ಏನೂ ಕೂಡ ಆಗಬಾರದು, ತಾವು ಚೆನ್ನಾಗಿರಬೇಕು ಮತ್ತೆ

ಒಳ್ಳೆಯ ಅನುಕೂಲ ಕೂಡ ಆಗಬೇಕು. ತಾವು ಇದನ್ನು prestige ಆಗಿ ತೆಗೆದುಕೊಳ್ಳಬಾರದು. ನಾವೆಲ್ಲರೂ ಮಾತನಾಡಿದರೂ ಕೂಡ ತಾವು don't take as prestige. Think over it. See what is the other alternative. Better benefit to the people, it should reach immediately to the people. ಅದನ್ನು ತಾವು ಮನಸ್ಸಿನಲ್ಲಿಟ್ಟುಕೊಂಡು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಈಗ ತೆಗೆದುಕೊಂಡು ಬಂದಿರತಕ್ಕಂಥ ಬಿಲ್‌ಗೆ ನಿಜವಾಗಲೂ ಕೂಡ I appeal not to do this. Thank you. Thank you very much.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಧೇಯಕವನ್ನು ಮೊದಲು ತರುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆ ಬಿಲ್‌ಗಿಂಥ ಈ ಬಿಲ್‌ಗೆ ಮೊದಲ ಆದ್ಯತೆ ಏಕೆ ಕೊಟ್ಟರೆಂದು ನನಗೆ ಅರ್ಥವಾಗುತ್ತಿಲ್ಲ. ಅದರ ಅಗತ್ಯ ಇವತ್ತು ಇತ್ತು. ಅದೂ ಸಹ ಅಜೆಂಡಾದಲ್ಲಿ ಇದೆ, ಮೊದಲ ಆದ್ಯತೆ ಅದಕ್ಕೆ ಬರಬೇಕಾಗಿತ್ತು. ಇವತ್ತು ಸದರಿ ಬಿಲ್ ಬಗ್ಗೆ ಈಗಾಗಲೇ ಮಾತನಾಡಿದವರೆಲ್ಲರೂ ಕೂಡ ಇದು ಬೇಡವೆಂದು ಚರ್ಚೆ ಮಾಡಿದ್ದಾರೆ. ಮತ್ತೆ ಇದರ ಬಗ್ಗೆ ಯಾರೂ ಕೂಡ clause by clause ಚರ್ಚೆ ಮಾಡುವುದಕ್ಕೆ ಹೋಗಿಲ್ಲ. ಇದು ಬೇಡವೆಂದು ಎಲ್ಲರೂ ಕೂಡ ಚರ್ಚೆ ಮಾಡಿದ್ದಾರೆ. ಕಾರಣವೇನೆಂದರೆ, ಮೊದಲು Divisional Commissioner ಇದ್ದದನ್ನು Regional Commissioner ಎಂದು ಹೆಸರನ್ನು ಬದಲಾವಣೆ ಮಾಡಿ ಪುನಃ ತಂದಿದ್ದಾರಷ್ಟೆ. ಇದು ಏಕೆ ಬೇಡವೆನ್ನುವುದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಪ್ರಥಮವಾಗಿ ಮಾನ್ಯ ರಾಮಸ್ವಾಮಿ ಸಮಿತಿ ಕೊಟ್ಟಿರುವ ವರದಿಯ ಬಗ್ಗೆ ಚರ್ಚೆಯನ್ನು ಮಾಡಿ, ಆನಂತರ ನೀವು ಇದನ್ನು ತೆಗೆದುಕೊಂಡು ಬನ್ನಿ, ಆಗ ನಿಮಗೆ ಗೊತ್ತಾಗುತ್ತದೆ. ಇದು ಏಕೆ ಬೇಡವೆನ್ನುವುದರ ಬಗ್ಗೆ ಅನಂತರ ಚರ್ಚೆ ಮಾಡೋಣ. ಆಮೇಲೆ ಇದು ಬೇಡವೆಂದು ನಿಮಗೆ ಸಮಾಧಾನವಾಗುತ್ತದೆಂದು ನಾನು ಭಾವಿಸುತ್ತೇನೆ. ರಾಮಸ್ವಾಮಿ ಕಮಿಟಿಯಲ್ಲಿ ಇದರ ಬಗ್ಗೆ ಬಹಳ ಚೆನ್ನಾಗಿ ಬರೆದಿದ್ದಾರೆ. ಈ ಲೆವೆಲ್ ಜಂಪಿಂಗ್ ಬಗ್ಗೆ ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಹೇಳಿದ್ದಾರೆ. ಇವತ್ತಿನ ದಿವಸ ಲೆವೆಲ್ ಜಂಪಿಂಗ್‌ನ ಅಗತ್ಯವಿದೆ. ಏಕೆಂದರೆ, ಈ ಕಡತ ಪ್ರತಿಯೊಂದು ಕಡೆ ಅಂದರೆ, ತಹಶೀಲ್ದಾರರಿಂದ ಎ.ಸಿ.ಮತ್ತೆ ಎ.ಸಿಯಿಂದ ಡಿ.ಸಿ., ಡಿ.ಸಿ ಯಿಂದ ಸೆಕ್ಷನ್ ಆಫೀಸರ್ ನೋಡಿಕೊಂಡು ಬರುತ್ತದೆ. ಪ್ರತಿಯೊಂದು ಕಡತ ಕೂಡ ಮೇಲಿನ ಕಛೇರಿಗೆ ಹೋದಾಗ ಅದು ಸೆಕ್ಷನ್ ಆಫೀಸರ್‌ನ ಮೂಲಕ ಪ್ರಾರಂಭವಾಗುತ್ತದೆ. ಅದು ಸೆಕ್ಷನ್ ಆಫೀಸರ್‌ನಿಂದ ಪ್ರಾರಂಭವಾಗಿ, ಪ್ರಿನ್ಸಿಪಲ್ ಸೆಕ್ರೆಟರಿಯವರಿಂದ ಮಂತ್ರಿಯವರಿಗೆ ಹೋಗುವಂತಹ ವ್ಯವಸ್ಥೆ ಇದೆ. ಆದ್ದರಿಂದ ಅಲ್ಲಿ ಡೆಲಿಗೇಷನ್ ಆಫ್ ಪವರ್‌ನ್ನು ಕೊಟ್ಟು

ಲೆವೆಲ್ ಜಂಪಿಂಗ್ ಮಾಡಿದರೆ ಸ್ವಲ್ಪ ಜನರ ಕಷ್ಟ ಕಡಿಮೆಯಾಗುತ್ತದೆ. ಒಂದು ಕಡತ ಕೊನೆಗೆ ಹೋಗಿ ಸಹಿಯಾಗಿ ವಾಪಸ್ಸು ಬರುವಾಗ ಕೊನೆಯಪಕ್ಷ ಆಗ ಅದು ಒಂದು ಆದೇಶಕ್ಕಾದರೂ ನೇರವಾಗಿ ಕೆಳಮಟ್ಟಕ್ಕೆ ಹೋಗಬೇಕಾಗುತ್ತದೆ. ಆದರೆ, ಇದು ಆ ರೀತಿಯಾಗುವುದಿಲ್ಲ. ಪ್ರತಿಯೊಂದು ಹಂತದಲ್ಲೂ ಪುನಃ ಕಡತಗಳು ಹೋಗಬೇಕಾಗುತ್ತದೆ. ಇದು ಹೋಗುವಾಗ ಏನು ಸಮಸ್ಯೆಗಳು ಇವೆಯೋ, ಅದು ಬರುವಾಗ ಅದೇ ಸಮಸ್ಯೆ ಇರುತ್ತದೆ. ಅದು ಪ್ರತಿಯೊಂದು ಟೇಬಲ್‌ಗಳಿಗೂ ಹೋಗಬೇಕು. ಪ್ರತಿಯೊಂದು ಟೇಬಲ್‌ನಲ್ಲಿ ಏನಾಗುತ್ತದೆಂದು ನಾನು ಹೇಳುವಂತಹ ಅವಶ್ಯಕತೆ ಇಲ್ಲ. ಕಛೇರಿಗೆ ಹೋಗತಕ್ಕಂಥ ಪ್ರತಿಯೊಬ್ಬ ಜನರಿಗೆ ಅಲ್ಲಿ ಏನಾಗುತ್ತದೆಂದು ಗೊತ್ತಿದೆ. ಈಗಾಗಲೇ ಅಧಿಕಾರಿಗಳ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದಾರೆ. ಆದ್ದರಿಂದ ನಾನು ಪುನಃ ಆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತಿನ ದಿವಸ ಕೆಳ ಹಂತದಲ್ಲಿ ಹೆಚ್ಚು ಅಧಿಕಾರಿಗಳ ಅವಶ್ಯಕತೆ ಇದೆ. ತಹಶೀಲ್ದಾರ್‌ಗಳ ಸಂಖ್ಯೆ ಹೆಚ್ಚಿಲ್ಲ, ಅಲ್ಲಿ ಈಗ ಹೆಚ್ಚಿನವರು ರಿಟೈರ್‌ಮೆಂಟ್ ಏಜ್‌ನವರೆ ಇದ್ದಾರೆ. ಅವರು ಯಾವುದರ ಬಗ್ಗೆ ಕೂಡ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಶಿರಸ್ತೇದಾರರಾಗಿದ್ದವರು ಇನ್‌ಚಾರ್ಜ್ ತಹಶೀಲ್ದಾರರಾಗಿದ್ದು, ಅನಂತರ ಶಿರಸ್ತೇದಾರರಾಗಿಯೇ ರಿಟೈರ್ಡ್ ಆಗುತ್ತಾರೆ. If I am right Mr.Jagadish Shettar? ಶಿರಸ್ತೇದಾರರಾಗಿರುವವರು ಸುಮಾರು ಏಳೆಂಟು ವರ್ಷಗಳ ಕಾಲ ತಹಶೀಲ್ದಾರರುಗಳಾಗಿ ಕೆಲಸವನ್ನು ಮಾಡಿದ್ದಾರೆ. ಆದರೆ, ಅವರು ಶಿರಸ್ತೇದಾರರಾಗಿಯೇ ನಿವೃತ್ತಿಯಾಗುತ್ತಾರೆ. ತಹಶೀಲ್ದಾರರಾಗಿ ನಿವೃತ್ತಿಯಾಗುತ್ತಿದ್ದಾರೆಂದು ನಾವು ಹೇಳುತ್ತಿದ್ದೇವೆ. But, he is actually retiring as Siresthedar.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅವರುಗಳು ಇನ್‌ಚಾರ್ಜ್ ತಹಶೀಲ್ದಾರರಾಗಿಯೇ ಇರುತ್ತಾರೆ. ಅವರಿಗೇನಾದರೂ ಪ್ರಮೋಷನ್ನಾದರೂ ಕೊಡಿ. ಇಲ್ಲವಾದರೆ direct recruitment ಆದರೂ ಮಾಡಿ. ನಮ್ಮಲ್ಲಿ ಈಗ ತಾಲ್ಲೂಕು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿ identify ಮಾಡಿ Special Tahsildar ಕೊಟ್ಟಿದ್ದೀರಿ. ಉದಾಹರಣೆಗೆ ಹೇಳುವುದಾದರೆ, ಬೈಂದೂರು, ಬ್ರಹ್ಮಾವರ, ಮೂಡುಬಿದರೆಗೆ ಕೊಟ್ಟಿದ್ದೀರಿ. ಆದರೆ, ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಆದರೆ ಈಗ ನೀವು ಪುನಃ Regional Commissioner Office ಮಾಡಿ, ಇಲ್ಲಿಂದ ನೀವು staff ನ್ನು draw ಮಾಡುತ್ತೀರಿ. ಅಂದರೆ, ತಾಲ್ಲೂಕು ಆಫೀಸ್, ಡಿ.ಸಿ. ಆಫೀಸ್ ಕಡೆಯಿಂದೆಲ್ಲಾ ಆಫೀಸರ್‌ಗಳನ್ನು draw ಮಾಡಿ Regional Commissioner office ಗೆ ಅವರುಗಳನ್ನು ಹಾಕಿ ಇಲ್ಲಿರುವ ಸಮಸ್ಯೆಯನ್ನು ನೀವು ಮತ್ತೆ ಜಾಸ್ತಿ ಮಾಡುತ್ತೀರಿ. ನಮ್ಮಲ್ಲಿ ಈಗಾಗಲೇ ಸಮಸ್ಯೆಗಳು ಇವೆ. ನಮ್ಮಲ್ಲಿರುವ

ಯಾವುದೇ ಕಛೇರಿಯಲ್ಲಿ ಸರಿಯಾದ strength ಇಲ್ಲ. ಈ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅಲ್ಲಿ ಯಾವುದೇ ಸಮಸ್ಯೆ ಇಲ್ಲವೆಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ, ನಮ್ಮಲ್ಲಿ ಸಮಸ್ಯೆಗಳು ಬಹಳಷ್ಟು ಇದೆ. ಆದ್ದರಿಂದ, ಅಲ್ಲಿಂದ staff ನ್ನು draw ಮಾಡಿ ಪುನಃ ಕೊಡುವುದಕ್ಕಿಂತ ಅಲ್ಲಿಗೆ ನೀವು ಪುನಃ strength ಮಾಡಿ. Regional Commissioner ಅಂತಿಮ ತೀರ್ಮಾನ ತೆಗೆದುಕೊಳ್ಳುವಂತಹ ಅಧಿಕಾರ ಇಲ್ಲ. ಮತ್ತೆ Divisional Commissioner ಗೆ ಕೂಡ ಇಲ್ಲ. ಆದ್ದರಿಂದ, ಅದೇ ಪವರ್‌ನ್ನು ನಿಮ್ಮ Secretariat ನಲ್ಲಿ ಕುಳಿತಿರುವ officer ಗೆ ಪವರ್ಸ್‌ನ್ನು ಕೊಡಿ. ಇವೆಲ್ಲ ಪವರ್ಸ್ ಅನ್ನು ಅವರಿಗೆ ಹಂಚಿಕೆ ಮಾಡಿದರೆ ಆ ಸಮಸ್ಯೆ ಪರಿಹಾರವಾಗುತ್ತದೆ. ಇವತ್ತು ನಾನು ಉದಾಹರಣೆಯಾಗಿ ಉಡುಪಿ ಜಿಲ್ಲೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಉಡುಪಿ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ. ಇಡೀ ಜಿಲ್ಲೆಯ ಸಬ್ ಡಿವಿಜನ್‌ಗೆ ಒಬ್ಬರು Assistant Commissioner ಮತ್ತೆ ಅದಕ್ಕೆ ಒಬ್ಬರು ಡಿ.ಸಿ. ಒಬ್ಬ ಎಸ್.ಪಿ. ಮತ್ತೆ ಒಬ್ಬರು ಎಎಸ್‌ಪಿ, ಒಬ್ಬರು ಡಿಎಸ್‌ಪಿ ಇದ್ದಾರೆ. ಅಲ್ಲಿ ಒಬ್ಬ ಎಎಸ್‌ಪಿ ಏತಕ್ಕೆಂದರೆ major portion ಇದೆ ಎಂದು ಅಂದರೆ, ಅದು 2 ತಾಲ್ಲೂಕುಗಳಾದ ಕುಂದಾಪುರದಲ್ಲಿ ಎರಡು ಕ್ಷೇತ್ರಕ್ಕೆ, ಉಡುಪಿಯಲ್ಲಿ 3 ಕ್ಷೇತ್ರಕ್ಕೆ ಸೇರಿ ಅದಕ್ಕೆ ಒಬ್ಬ ಎಎಸ್‌ಪಿ. ಆದರೆ, ಕಾರ್ಕಳ ತಾಲ್ಲೂಕಿಗೆ ಒಂದು ಎಂಎಲ್ಎ ಏರಿಯಾ ಅದಕ್ಕೆ ಒಬ್ಬ ಡಿಎಸ್‌ಪಿ. ಇದನ್ನು ಸರಿಪಡಿಸುವುದಕ್ಕೆ ಇನ್ನೂ ಹೋಗಿರುವುದಿಲ್ಲ. ಆದರೆ, ನೀವು ನೇರವಾಗಿ Regional Commissioner ಗೆ ಹೋಗುತ್ತಿದ್ದೀರಿ. ಇದರ ಬಗ್ಗೆ ನೀವ್ಯಾರೂ ಆಲೋಚನೆಯನ್ನು ಮಾಡಲಿಲ್ಲ. ಕೆಳ ಹಂತದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳದೇ ಮೇಲಿನ ಹಂತದಲ್ಲಿ ಯಾರಿಗೋ ನೀವು ಪೋಸ್ಟಿಂಗ್ಸ್ ಕೊಡತಕ್ಕಂಥದರ ಬಗ್ಗೆ ಮಾತನಾಡುತ್ತಿದ್ದೀರಿ. Just accommodate some officers, ನೀವು ಜನರ ಸಮಸ್ಯೆಯನ್ನು ಅರ್ಥಮಾಡಿಕೊಂಡಿದ್ದರೆ ಕೆಳಹಂತದಲ್ಲಿ ಪೋಸ್ಟ್‌ಗಳನ್ನು ತುಂಬುತ್ತಿದ್ದೀರಿ. ಆದರೆ, ಮೇಲಿನ ಹಂತದಲ್ಲಿ ತುಂಬುವುದಕ್ಕೆ ಹೋಗುತ್ತಿರಲಿಲ್ಲ. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಎ.ಸಿ.ಯಿಂದ ಫೈಲ್ ಡಿ.ಸಿ.ಯವರಿಗೆ ಬರುತ್ತದೆ. ನಮ್ಮ ಉಡುಪಿ ತಾಲ್ಲೂಕಿಗೆ, ಕುಂದಾಪುರಕ್ಕೆ ಮತ್ತು ಕಾರ್ಕಳಕ್ಕೆ ಸೇರಿ ಒಬ್ಬರು ತಹಶೀಲ್ದಾರ್ ಕೊಟ್ಟಿದ್ದಾರೆ. ಮತ್ತೆ ಒಬ್ಬರು ಎ.ಸಿ. ಮತ್ತು ಒಬ್ಬರು ಡಿ.ಸಿ. ಕೊಟ್ಟಿದ್ದಾರೆ. ಅದಕ್ಕಿಂತ ಒಬ್ಬರೇ ಡಿ.ಸಿ.ಯವರು ಇಲ್ಲಿಗೆ ಸಾಕಲ್ಲವೇ? ಎ.ಸಿ.ಯವರ ಹತ್ತಿರ ಹೋಗುವ ಅಗತ್ಯವಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ :– ಒಬ್ಬ ಡಿ.ಸಿ. ಡೆವೆಲಪ್‌ಮೆಂಟ್ ಕೆಲಸದ ಜೊತೆಗೆ excise, Food, Law & Order ಅನ್ನು ನೋಡುತ್ತಿದ್ದರು. ಆದರೆ, ಎಲ್ಲಾ ಇಲಾಖೆ

ಈಗ ಬೇರೆ ಬೇರೆ ಮಾಡಿದ್ದೇವೆ. ಅಂದರೆ, Excise ಗೆ ಡಿ.ಸಿ.ಯವರು ಬಂದಿದ್ದಾರೆ. ಮತ್ತೆ Food ಗೆ ಬಂದಿದ್ದಾರೆ. ಡಿ.ಸಿ.ಯವರಿಗೆ ಏನು ಕೆಲಸವೆಂದು ನನಗೆ ಅರ್ಥವಾಗುತ್ತಿಲ್ಲ. ಸಿಆರ್‌ಎಫ್ ಕೆಲಸವನ್ನು ತೆಗೆದುಬಿಟ್ಟರೆ ಅವರಿಗೆ ಬೇರೇನೂ ಕೆಲಸವೇ ಇರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಉಪಾಧ್ಯಕ್ಷರೆ, ನಾನು ಸಿಆರ್‌ಎಫ್ ಬಗ್ಗೆ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ 2 ವರ್ಷದ ಕೆಳಗಡೆ ಸಿಆರ್‌ಎಫ್ ಯೋಜನೆಯಲ್ಲಿ ಆಗಿರುವ ಕೆಲಸವನ್ನು ಇವತ್ತಿನ ದಿವಸ ಇನ್‌ಸ್ಪೆಕ್ಷನ್ ಮಾಡಿದ್ದಾರೆ. ಇದರ ಬಿಲ್‌ನ್ನು ಇದುವರೆಗೂ ಮಾಡಿರುವುದಿಲ್ಲ. ಕಳಪೆ ಕಾಮಗಾರಿ ಎಂದು ಆ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ. ಇಂಜಿನಿಯರಿಂಗ್ ಡಿವಿಜನ್‌ರವರು ಮಾಡಿರತಕ್ಕಂಥ ಕೆಲಸವನ್ನು ರೆವಿನ್ಯೂ ಆಫೀಸರ್ ಹೇಗೆ ಇನ್‌ಸ್ಪೆಕ್ಷನ್ ಮಾಡುತ್ತಾರೆ? ಮತ್ತೆ ಇದಕ್ಕೆ ಆದೇಶವಾದರೂ ಹೇಗೆ ಕೊಡುವುದಕ್ಕೆ ಆಗುತ್ತದೆ? ನೀವು ಬೇರೆಯವರನ್ನು ಕಳುಹಿಸಿ ಇನ್‌ಸ್ಪೆಕ್ಷನ್ ಮಾಡಿಸಿ. ಆದರೆ, ಡೆಪ್ಯುಟಿ ಕಮಿಷನರ್ ಇನ್‌ಸ್ಪೆಕ್ಷನ್ ಮಾಡಿ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡತಕ್ಕಂಥ ಪರಿಸ್ಥಿತಿಗೆ ಬಂದರೆ ಹೇಗೆ? ಮತ್ತೆ ಎಕ್ಸೈಜ್ ಮತ್ತು ಎಂಡೋಮೆಂಟ್ ಇಲಾಖೆಯ ಫೈಲ್ ಕೂಡ ಡೆಪ್ಯುಟಿ ಕಮಿಷನರ್‌ರವರಿಗೆ ಬರಬೇಕಾಗುತ್ತದೆ. ಆದ್ದರಿಂದ, ರಿಜನಲ್ ಕಮಿಷನರ್ ತೆಗೆದು ಎಲ್ಲಾ ಅಧಿಕಾರವನ್ನು ಇವರಿಗೆ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಅವರಿಗೆ ಪರ್ಸೆಂಟೇಜ್ ಕೊಟ್ಟರೆ ಎಲ್ಲ ಕೆಲಸವನ್ನು ಜನರಿಂದ ಮಾಡಿಸುತ್ತಾರೆ. ಪರ್ಸೆಂಟೇಜ್ ಕೊಡದಿದ್ದರೆ ಏನು ಮಾಡುತ್ತಾರೆಂದರೆ, ನೀವು ಮಿಷಿನರಿಗಳ ಮೂಲಕ ಕೆಲಸ ಮಾಡಿದ್ದೀರೆಂದು ಶೋಕಾಸ್ ನೋಟಿಸ್ ತೆಗೆದುಕೊಳ್ಳಿ ಎಂದು ಕೊಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಮ್ಮಲ್ಲಿ ಇಂಜಿನಿಯರ್ ಒಬ್ಬರನ್ನು ಸಸ್ಪೆಂಡ್ ಮಾಡಿದರು. ಅದು ಏಕೆ ಎಂದು ನನಗೆ ಗೊತ್ತಿಲ್ಲ. 2 ವರ್ಷಗಳ ಹಿಂದೆ ಮಾಡಿರತಕ್ಕಂಥ ಕೆಲಸವನ್ನು ಇವತ್ತು ಇನ್‌ಸ್ಪೆಕ್ಷನ್ ಮಾಡಿ ಕಳಪೆ ಕಾಮಗಾರಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಆ ಕೆಲಸ ತುಂಬಾ ಚೆನ್ನಾಗಿದೆ ಎಂದು ಇಡೀ ಊರಿನವರು ಹೇಳುತ್ತಿರುವಾಗ ಅದು ಕಳಪೆ ಕೆಲಸವೆಂದು ಜಿಲ್ಲಾಧಿಕಾರಿಯವರು ಹೇಳುತ್ತಿರುವುದು ನಿಜಕ್ಕೂ ಕೂಡ ವಿಚಿತ್ರವಾದಂಥಾದ್ದಾಗಿದೆ. ಆದ್ದರಿಂದ, ಅಲ್ಲಿರುವ ಅಧಿಕಾರಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಧೈರ್ಯದಿಂದ ಕಂಟ್ರೋಲ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇದೊಂದು ಸಮಸ್ಯೆಯಾಗುತ್ತಾ ಹೋಗುತ್ತದೆ. ಮತ್ತೆ ನಮ್ಮಲ್ಲಿ Interpretation of law ಆಗುತ್ತಿದೆ. ಇದರ ಬಗ್ಗೆ ನಾನು ಮೊನ್ನೆದಿವಸ ಎರಡು ಉದಾಹರಣೆಗಳನ್ನು ಸಹ ಕೊಟ್ಟಿದ್ದೇನೆ. ಅದೇನೆಂದರೆ, ಮರಗಳನ್ನು ಕಡಿಯುವುದಕ್ಕೆ ಅರ್ಜಿಯನ್ನು ಕೊಡುವುದಕ್ಕೆ ಹೋಗತಕ್ಕಂಥ

ಜನರಿಗೆ ಏನು ಹೇಳುತ್ತಾರೆಂದರೆ, Forest Act ಪ್ರಕಾರ owner ship certificate ಅನ್ನು ಕೊಡಬೇಕೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ. ಆದರೆ, ಕೊಡಬೇಡಿ ಎಂದು ಜಿಲ್ಲಾಧಿಕಾರಿಗಳು ಎಲ್ಲರಿಗೂ ಪತ್ರ ಬರೆಯುತ್ತಾರೆ. ಅವರಿಗೆ ಏನು ಅಧಿಕಾರ ಇದೆ? Can his Circular over write a Government order or Rules? ಇದನ್ನು ಮಾಡುವುದಕ್ಕೆ ಆಗುವುದಿಲ್ಲ, ಇದನ್ನು ಮಾಡಿದರೆ ನಾವು ಕೋರ್ಟ್‌ಗೆ ಹೋಗತಕ್ಕಂಥ ಪರಿಸ್ಥಿತಿ ಬರಬಹುದು. ದಯವಿಟ್ಟು ಇದನ್ನು ತಾವು ಜಿಲ್ಲಾಧಿಕಾರಿಯವರಿಗೆ ಹೇಳಬೇಕು. ನಾನು ಮೊನ್ನೆ ದಿವಸ ನಮ್ಮ ಜೊತೆ ಮಾತನಾಡಿದಾಗ ಅವರಿಗೆ ಹೇಳುತ್ತೇನೆಂದು ತಾವು ಹೇಳಿದ್ದೀರಿ. ಆದರೆ, ಇದುವರೆಗೂ ತಾವು ಹೇಳಿಲ್ಲ. ಈಗ ಮರ ಮೆಚುರ್ ಆದಾಗ ಅದನ್ನು ಕಡಿಯಬೇಕೋ ಅಥವಾ ಬೇಡವೊ? ಕಡಿಯುವುದಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕೊ ಅಥವಾ ಬೇಡವೊ? ಇದು ಒಂದು ಕಡೆಯಾದಲ್ಲಿ ಮತ್ತೊಂದು ಕಡೆ Fragmentation Act. ನಮ್ಮಲ್ಲಿ Fragmentation Act repeal ಆಗಿದೆ. repeal ಆದರೂ ಸಹ ಇವತ್ತು ಜಿಲ್ಲಾಧಿಕಾರಿಗಳು ಇನ್ನೊಂದು ಸುತ್ತೋಲೆಯನ್ನು ಕಳುಹಿಸಿದ್ದಾರಂತೆ. ಕನ್ವರ್ಷನ್ ಆಗದೇ ಸೇಲ್, ರಿಜಿಸ್ಟ್ರೇಶನ್ ಮಾಡುವುದಕ್ಕೆ ಪರ್ಮಿಷನ್‌ಗೆ ಅವಕಾಶ ಇಲ್ಲ ಎನ್ನತಕ್ಕಂಥದು ಯಾವ ನ್ಯಾಯ? ಅಂದರೆ, ಅವರಿಗೆ ಇಲ್ಲದೇ ಇರತಕ್ಕಂಥ ಅಧಿಕಾರವನ್ನು ತೆಗೆದುಕೊಳ್ಳತಕ್ಕಂಥದು ಆಗಿದೆ. ಆದ್ದರಿಂದ ಅವರಿಗೆ ಹೆಚ್ಚು ಅಧಿಕಾರ ಕೊಟ್ಟು, ಅವರಿಗೆ ಇರತಕ್ಕಂಥ ಅಧಿಕಾರವನ್ನು ಮಾತ್ರ ಜಾರಿಗೆ ತರತಕ್ಕಂಥ ಪರಿಸ್ಥಿತಿಗೆ ಅವರನ್ನು ತೆಗೆದುಕೊಂಡು ಹೋಗಿ. ಮತ್ತೆ ಅವರಿಗೆ ಇಲ್ಲದೇ ಇರತಕ್ಕಂಥ ಅಧಿಕಾರವನ್ನು ಕೈಗೆ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣ ಮಾಡದ ಹಾಗೆ ತಾವು ನೋಡಬೇಕೆಂದು ಹೇಳುತ್ತೇನೆ. ಮತ್ತೆ ಎ.ಸಿ ಮತ್ತು ಡಿ.ಸಿ.ಗಳ ಅಧಿಕಾರ ವ್ಯಾಪ್ತಿಯನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಈಗ ಕಾರ್ಕಳಕ್ಕೆ ಒಂದು ಡಿವೈಎಸ್‌ಪಿ ಇರುವುದಕ್ಕಿಂಥ ಅವರ ಏರಿಯಾವನ್ನು ಸ್ವಲ್ಪ split ಮಾಡಿ. ಏರಿಯಾವನ್ನು ಸ್ವಲ್ಪ split ಮಾಡಿ ಒಂದೇ Asst.Commissioner, one Deputy Commissioner ಯಾಕೆ? ಬೇರೆ ಬರಲಿ ಜಿಲ್ಲಾಧಿಕಾರಿ. ಈ ಸಮಸ್ಯೆ ಪರಿಹಾರ ಮಾಡುವುದು ಬಿಟ್ಟು ನೇರವಾಗಿ Regional Commissioner ಗೆ ಯಾಕೆ ಹೋಗುತ್ತೀರಿ ನೀವು. ಆ ಹುದ್ದೆ ಅಗತ್ಯವಿಲ್ಲ. ಎಲ್ಲರೂ ಅದರ ಬಗ್ಗೆ ಮಾತನಾಡಿದ್ದಾರೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ದಯವಿಟ್ಟು ತೀರ್ಮಾನ ತೆಗೆದುಕೊಳ್ಳಿ. ನಾವ್ಯಾರೂ clause by clause ಚರ್ಚೆ ಮಾಡಿಲ್ಲ. ನೀವಿದನ್ನು ವಾಪಸ್ ತೆಗೆದುಕೊಳ್ಳಬೇಕು. ಪ್ರಥಮವಾಗಿ ರಾಮಸ್ವಾಮಿ ವರದಿಯನ್ನು ಚರ್ಚೆ ಮಾಡೋಣ. ಅನಂತರ ಇದು ಬೇಕೋ ಬೇಡವೋ ತೀರ್ಮಾನಿಸೋಣ.

ಶ್ರೀ ಹೆಚ್.ಡಿ. ಬಸವರಾಜ್ :- ಅಧ್ಯಕ್ಷರೇ ತಮ್ಮಲ್ಲಿ ಒಂದು ಮನವಿ. ಬೆಳಿಗ್ಗೆಯಿಂದ ವಿಧೇಯಕದ ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಸ್ವಾಗತ ಮಾಡುತ್ತೇನೆ. ಆದರೆ ಇಲ್ಲಿ

ನನಗೆ ಅನ್ನಿಸಿದ್ದು ಏನೆಂದರೆ ಸಮಯವನ್ನು ನಿಗದಿ ಮಾಡಿ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಒಂದೇ ವಿಧೇಯಕವನ್ನು ಎಲ್ಲರೂ ಚರ್ಚೆ ಮಾಡುತ್ತಾ ಕೂತುಕೊಂಡರೆ ಎಷ್ಟು ವಿಧೇಯಕಗಳನ್ನು ನಾವು ಮಂಡನೆ ಮಾಡಲು ಆಗುತ್ತದೆ? ಇನ್ನೂ ಎಷ್ಟೊಂದು ವಿಧೇಯಕಗಳು ಬರಬೇಕಾಗಿದೆ. ಅದರ ಬಗ್ಗೆಯೂ ನಾವು ಚರ್ಚೆ ಮಾಡಬೇಕಾಗಿದೆ. ಇನ್ನೂ ಪ್ರಶ್ನೋತ್ತರ. ನಿಯಮಗಳ ಪಾಲನೆಯಾಗಬೇಕೆಂದು ಪ್ರತಿ ಸಾರಿಯೂ ಹೇಳುತ್ತೇವೆ. ಆದರೆ ಪ್ರಶ್ನೋತ್ತರವನ್ನು ಬದಿಗೊತ್ತುತ್ತಿದ್ದೇವೆ ಅಂದರೆ ಅದನ್ನು ಯಾವಾಗ ಕೈಗೆತ್ತಿಕೊಳ್ಳುವಿರಿ? ಪ್ರಶ್ನೋತ್ತರದಲ್ಲಿ ತಾಲ್ಲೂಕಿನ ಸ್ಥಳೀಯ ಸಮಸ್ಯೆಗಳು ಬೇಕಾದಷ್ಟಿರುತ್ತವೆ, ಅವುಗಳ ಕಡೆ ನಾವು ಗಮನಹರಿಸುವುದು ಬೇಡವ?

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವಿಲ್ಲಿ ಮಾತನಾಡಿರುವವರು 11.30 ಕ್ಕೆ ಸಭೆ ಸೇರಿದರೂ 10 ಗಂಟೆಗೆ ಬಂದು ಕೂತಿದ್ದೆವು. ರಾತ್ರಿ 9 ಗಂಟೆವರೆಗೂ ಕೂತುಕೊಳ್ಳುತ್ತೇವೆ. ಕೃಪೆ ಮಾಡಿ ತಾವು ಆ ಕೆಲಸವನ್ನೂ ಮಾಡಿಬಿಟ್ಟರೆ ಬಹಳ ಸಂತೋಷಪಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :- ಅಧ್ಯಕ್ಷರೇ ನಾವು ಈ ಸದನದ ಮೂಲಕ ಬಹಳ ಜವಾಬ್ದಾರಿಯುತ ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಈಗಿಲ್ಲಿ ವಿಭಾಗಾಧಿಕಾರಿ ಹುದ್ದೆ ಪುನರ್ ಸ್ಥಾಪನೆಗೆ ಬಂದಿರುವ ಬಿಲ್ ಬಗ್ಗೆ ಏನು ಚರ್ಚಿಸುತ್ತಿದ್ದೇವೆ ಇದರ ಬಗ್ಗೆ ನಾವೇ ಸ್ವಲ್ಪ ಯೋಚನೆ ಮಾಡಬೇಕು. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ರದ್ದು ಮಾಡಿದ್ದೆವು, ಹಾರನಹಳ್ಳಿ ರಾಮಸ್ವಾಮಿ ವರದಿ ಕೊಟ್ಟಿದ್ದನ್ನು ವಿರೋಧ ಪಕ್ಷದಲ್ಲಿದ್ದ ನಾವೆಲ್ಲರೂ ಸ್ವಾಗತ ಮಾಡಿದೆವು. ಆಡಳಿತ ವೆಚ್ಚ ನಿಯಂತ್ರಣ ಮಾಡಲು ಮತ್ತು ಕೆಲಸಕಾರ್ಯಗಳು ತ್ವರಿತವಾಗಿ ನಡೆಯಲು ವಿಭಾಗಾಧಿಕಾರಿ ಹುದ್ದೆ ರದ್ದು ಮಾಡಿದರೆ ಒಳ್ಳೆಯದು ಅಂತ ಆ ಕಡೆ ಕೂತಿದ್ದ ನಾವೆಲ್ಲರೂ ಮಾತನಾಡಿದ್ದೇವೆ. ಆದರೆ ಧರಂಸಿಂಗರು ಮುಖ್ಯಮಂತ್ರಿಯಾದಾಗ ವಿಭಾಗಾಧಿಕಾರಿ ಹುದ್ದೆ 2005 ರಲ್ಲಿ ಸ್ಥಾಪನೆಯಾಗಿ ಇವತ್ತು ಅವರಿಗೆ ಅಧಿಕಾರ ಕೊಡುವ ಕುರಿತೂ ಚರ್ಚಿಸುತ್ತಿದ್ದೇವೆ. ಈ ಸದನ ಒಂದು ಸಲ ರದ್ದು ಮಾಡುವುದು, ಇನ್ನೊಂದು ಸಲ ಸ್ಥಾಪಿಸುವುದು, ಇದೆಷ್ಟರಮಟ್ಟಿಗೆ ಈ ಸದನಕ್ಕೆ ಶೋಭೆ ತರುತ್ತದೆಂದು ತಾವೇ ಯೋಚಿಸಬೇಕಾಗಿದೆ. ನಾವೂ ಅಗತ್ಯತೆ ಮತ್ತು ಕಾಲದ ಪರಿವರ್ತನೆಯಗನುಗುಣವಾಗಿ ಸ್ಪಂದಿಸಲೇಬೇಕಾಗುತ್ತದೆ. ರದ್ದಾಗಿರುವ ಕೆಲವು ಅಗತ್ಯವೆನಿಸಿದರೆ ಮಾಡಲೇಬೇಕು. ಆದರೆ ನನ್ನ ಮೂಲಭೂತ ಪ್ರಶ್ನೆ, ನಾವು ವಿಭಾಗಾಧಿಕಾರಿ ಹುದ್ದೆ ಸ್ಥಾಪಿಸಿ ಅವರಿಗೆ ಅಧಿಕಾರ ಕೊಡುತ್ತಿರುವ ಹಿನ್ನಲೆ ನಮ್ಮ ಡೀಸಿಗಳೆಲ್ಲ ಅಸಮರ್ಥರಾಗುತ್ತಿದ್ದಾರ? Revenue is mother of all depts. ಆದರೆ ಇವತ್ತು ತಹಸೀಲ್ದಾರ್ ಕತೆ ನಮಗೆಲ್ಲ ತಿಳಿದಿದೆ. ಅವರೇಜ್ ತಹಸೀಲ್ದಾರ್ ಏಜ್ 56-57ಕ್ಕೆ ಹೋಗಿ ಮುಟ್ಟಿದೆ. ಈಗ ನೇಮಕವಾಗುತ್ತಿರುವ ವಿಚಾರ ಬೇರೆ. ತಹಸೀಲ್ದಾರ್

ಅಸಿಸ್ಟೆಂಟ್ ಕಮೀಶನರ್ ಗಳು ಹೇಗೆ ಜನರ ಭಾವನೆಗಳಿಗೆ ಸ್ಪಂದಿಸುವುದಕ್ಕೆ ಬದಲು ಕೇವಲ ಕಾನೂನು ಒಂದನ್ನೇ ಅಸ್ತ್ರ ಮಾಡಿಕೊಂಡು ತಾವೇನೋ ದೊಡ್ಡ ಸಾಧನೆ ಮಾಡುತ್ತಿದ್ದೇವೆ ಎಂಬ ಭ್ರಮೆಗೆ ಒಳಗಾಗುತ್ತಿರುವುದನ್ನು ನೋಡುತ್ತಿದ್ದೇವೆ. ನಾವು ವಿಭಾಗಾಧಿಕಾರಿ ಹುದ್ದೆ ಸ್ಥಾಪಿಸುವುದರಿಂದ ಇದನ್ನೆಲ್ಲ ನಿಯಂತ್ರಿಸಲು ಸಾಧ್ಯವೇ? ಅಥವಾ ಒಂದು ಪ್ರಬುದ್ಧತೆ ಜಾಗ್ರತೆಗೊಳಿಸಲು ಸಾಧ್ಯವೇ ಎಂಬುದು ಬಹಳ ಮುಖ್ಯ. ನಾನೇ ನಮ್ಮ ಜಿಲ್ಲಾಧಿಕಾರಿಗಳನ್ನು ನೋಡಿದೆ. 70 ರಿಂದ 80 ಸಮಿತಿಗೆ ಅವರು ಅಧ್ಯಕ್ಷರು. ಅಬ್ಬಾ ಇವರದು ಏನೇನು ಕೆಲಸಗಳು ಅನ್ನಿಸುತ್ತದೆ. ಪರಿಣಾಮವಾಗಿ ಯಾವುದೂ ಇತ್ಯರ್ಥವಾಗದೇ ನೆನೆಗುದಿಗೆ ಬಿದ್ದಿವೆ. ನನ್ನ ಕ್ಷೇತ್ರದ ಒಂದು 30 ಹಳ್ಳಿ, ಅತಿವೃಷ್ಟಿ ಬಂದಾಗ 60ರ ದಶಕದಲ್ಲಿ ಅವರೆಲ್ಲ ಮುಳುಗಿಹೋಗುತ್ತಾರೆಂದು ಪುನರ್ವಸತಿ ಮಾಡಿಕೊಟ್ಟೆವು. ಇವತ್ತಿನ ತನಕ ಅವರಿಗೆ Record of Right ಮಾಡಿಕೊಡಲು ಆಗಲಿಲ್ಲ. ಅವಾಗೆಲ್ಲ AC DC DVC ಗಳೆಲ್ಲ ಇರಲಿಲ್ಲವ? ನಾನು ಸತತ 3ನೇ ಬಾರಿ ಶಾಸಕನಾಗಿ ನಿರಂತರವಾಗಿ ಬೆನ್ನತ್ತು ಕೊಂಡಿದ್ದೇನೆ, ತಹಸೀಲ್ದಾರ್ ಏಸಿಗೆ ಕಳಿಸಿದ್ದೇನೆ ಅಂತಾರೆ, ಏಸಿ ಕೇಳಿದರೆ ಡಿಸಿ ಹತ್ತಿರ ಮಾತನಾಡುತ್ತೇನೆ ಅಂತಾರೆ, ಡಿಸಿ ಕೇಳಿದರೆ ಏಸಿಯವರಿಗೆ ಹೇಳಿದ್ದೇನೆ ಅಂತಾರೆ. ಇಷ್ಟೆಲ್ಲ ವ್ಯವಸ್ಥೆ ಇದೆ, ಜನರ ಕಷ್ಟ ದೂರಾಗಿದೆಯೇನು ಹಾಗಾದರೆ? ದೂರಾಗಿಲ್ಲ. ಯಾವ ಡಿಸಿಗಳು ಎಷ್ಟು ನಿರ್ಣಯ ಕೊಟ್ಟಿದ್ದಾರೆ ಅವುಗಳ ವಿರುದ್ಧ ಎಷ್ಟು ಅಪೀಲ್ ಬಂದಿವೆ ಎಂಬುದರ ಸ್ಟಡಿಯಾಗಬೇಕು. ಹಿಂದೆ ವಿಭಾಗಾಧಿಕಾರಿಗಳಿಗೆ ಎಷ್ಟು ಅಪೀಲ್ ಹೋಗುತ್ತಿತ್ತು ಈಗ ಸರ್ಕಾರಕ್ಕೆ ಎಷ್ಟು ಬರುತ್ತಿವೆ ಎಂಬ ಮಾಹಿತಿ ಸಿಕ್ಕಿದರೆ ಒಳ್ಳೆಯದು. ಈಗ 2005ರಲ್ಲಿ ವಿಭಾಗಾಧಿಕಾರಿ ಹುದ್ದೆ ಸ್ಥಾಪಿಸಿಕೊಂಡು ಅವರಿಗೆ ಅಧಿಕಾರ ಕೊಡುವ ಮಟ್ಟಕ್ಕೆ ಬಹಳ ಮುಂದೆ ಹೋಗಿಬಿಟ್ಟಿದ್ದೇವೆ. ಆದರೆ ಈ ಮೂಲಭೂತ ಸಂಗತಿಗಳು ವಿಷದವಾಗಬೇಕು. ಈ ವಿಭಾಗಾಧಿಕಾರಿಗಳು ಹೆಚ್ಚು ಜಿಲ್ಲಾ ಪ್ರವಾಸ ಮಾಡಬೇಕು. ಇವರು ಹಾಗೆ ಎಷ್ಟು ಪ್ರವಾಸ ಮಾಡಿದರು ಎಂದು ರಿವ್ಯೂ ಆಗಬೇಕು ಅದಕೊಂದು ಟಾರ್ಗೆಟ್ ಫಿಕ್ಸಾಗಬೇಕು, ಅವರು ಯಾವ್ಯಾವುದಕ್ಕೆ ಸ್ಪಂದಿಸಬೇಕು ಎಂಬುದೆಲ್ಲ ಇದ್ದರೂ ಅವರು ಹೇಗೆ ಸ್ಪಂದಿಸುತ್ತಿದ್ದಾರೆ ಎಂದು ನೋಡಬೇಕು. ನಾವು ಉತ್ತರ ಕನ್ನಡ ಜಿಲ್ಲೆಯವರು ಬೆಳಗಾವಿಗೆ ಹೋಗಬೇಕು ಆದರೆ ನಮಗೆ ಬೆಳಗಾವಿಗೆ ಹೋಗುವುದೂ ಒಂದೇ ಬೆಂಗಳೂರಿಗೆ ಬರುವುದೂ ಒಂದೇ. ಬದಲಿಗೆ ವಿಭಾಗಾಧಿಕಾರಿಗಳೇ ನಮ್ಮ ಜಿಲ್ಲೆಗೆ ಬಂದು dispose ಮಾಡಲು ಸಾಧ್ಯವಾದರೆ ಅದು ಹೆಚ್ಚು ಜನತೆಗೆ ಅನುಕೂಲವಾಗುತ್ತದೆ. ಜನರ ಮನೆ ಬಾಗಲಿಗೇ ಆಡಳಿತವನ್ನು ಕೊಂಡೊಯ್ಯುತ್ತೇವೆ ಅಂತ ನಾವು ಹೇಳಿದರೂ ಪರೋಕ್ಷವಾಗಿ ಅಧಿಕಾರವನ್ನೆಲ್ಲ ಒಂದು ಕಡೆ ಕೇಂದ್ರೀಕರಿಸುತ್ತಿದ್ದೇವೇನೋ, ಎಂದು ನನಗನಿಸುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದರ ಜತೆಗೆ ಅವರಿಗೆ ಅಧಿಕಾರ ನೋಡಿದ್ದೀರ? ನಿಮ್ಮ ಊರನಲ್ಲಿ ಒಂದು ಕೇಸೇನಾದರೂ ರಿಜಿಸ್ಟರಾದರೆ ವಿಭಾಗಾಧಿಕಾರಿಗಳನ್ನು ನೋಡಿ dispose ಮಾಡಬೇಕಾಗಿರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ :- ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ನಿಶ್ಚಿತ ಸುಧಾರಣೆಗೆ ಇವೆಲ್ಲ ಕಾರಣವಾಗಬೇಕು. ಇದನ್ನು ಮಾಡುವ ಬಗ್ಗೆ ಸರ್ಕಾರ ಚಿಂತಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :- ಮಾನ್ಯ ಅಧ್ಯಕ್ಷರೇ, ಈಗ ಡಿವಿಷನಲ್ ಕಮಿಷನರ್ ವಿಷಯದ್ದೇನಾಗಿದೆಯೆಂದರೆ ಇದೊಂದು head weight, ತಲೆಭಾರವಾಗಿದೆ, ಕೆಳಹಂತದಲ್ಲಿರುವ ಎಲ್ಲಾ ಅಧಿಕಾರಿಗಳು ಒಪ್ಪುವಂಥ ವಿಷಯ. ನಮ್ಮ ಬೆಳಗಾಂ ಡಿವಿಷನಲ್‌ನಲ್ಲಿ ಮೊದಲು ಡಿವಿಷನಲ್ ಕಮಿಷನರ್ ಎಂದು ಇದ್ದರು, ಈಗ ರೀಜನಲ್ ಕಮಿಷನರ್ ಎನ್ನುತ್ತಾರೆ ಅಷ್ಟೇ ಬದಲಾವಣೆಯನ್ನು ಬಿಟ್ಟರೆ ಅನಾವಶ್ಯಕವಾದ ಪೋಸ್ಟ್ ಇದು, ಯಾವ ರೀತಿಯಾಗಿ ಆಗತ್ತಿದೆಯೆಂದರೆ ನಮ್ಮ ಹಿರೇಕೆರೂರು ತಾಲ್ಲೂಕಿನದು ಒಂದು ಮುರಾರ್ಜಿ ಶಾಲೆಯ ವಿಷಯದಲ್ಲಿ ನಾವು 10 ಎಕರೆ ಭೂಮಿಯನ್ನು ಶಿಕ್ಷಣ ಇಲಾಖೆಗೆ ಕೊಡಬೇಕೆಂದು ಹೇಳಿ ಪ್ರಸ್ತಾವನೆಯನ್ನು ಕಳುಹಿಸಿದೆವು. ಜಿಲ್ಲಾಧಿಕಾರಿಗಳ ಕಛೇರಿಯಿಂದ 20.12.2006 ಕ್ಕೆ ರೀಜನಲ್ ಕಮಿಷನರ್‌ಗೆ ಕಳುಹಿಸಿದರು, ಫೆಬ್ರವರಿ ತಿಂಗಳಲ್ಲಿ ರೀಜನಲ್ ಕಮಿಷನರ್‌ರವರನ್ನು ನಾನು phone ಮೂಲಕ contact ಮಾಡಿದೆ, ಆಗ ಅವರು ಇದನ್ನು ತಕ್ಷಣ ಕಳುಹಿಸಿಕೊಡುತ್ತೇವೆಂದು ಹೇಳಿದರು. ಪುನಃ ಎರಡು ದಿವಸಗಳ ನಂತರ ಅವರನ್ನು contact ಮಾಡಿದಾಗ outward number ಕೊಟ್ಟರು, ಸರ್ಕಾರಕ್ಕೆ ಕಳುಹಿಸಿದ್ದೇವೆಂದು. ಮತ್ತೆ ಅದು ವಾಪಸ್ ಹಿರೇಕೆರೂರಿಗೆ ಹೋಗುವಷ್ಟರಲ್ಲಿ ಆ ಅರ್ಜಿ ವಾಪಸ್ ತಾಲ್ಲೂಕು ಕಛೇರಿಗೆ ಬಂದಿದೆ, ಈ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಅದನ್ನು ವಾಪಸ್ ಕಳುಹಿಸುತ್ತಾರೆ. ಅದು ಯಾವ ರೀತಿಯೆಂದರೆ ಅದರ ಮೇಲೆ 8-10 ಕ್ವೈರಿಗಳನ್ನು ಹಾಕಿ ವಾಪಸ್ಸು ಕಳುಹಿಸಿದರು. ಒಬ್ಬ ರೀಜನಲ್ ಕಮಿಷನರ್ ಜವಾಬ್ದಾರಿಯ ಸ್ಥಾನದಲ್ಲಿದ್ದುಕೊಂಡು ಈ ರೀತಿ ಸುಳ್ಳು ವರದಿಗಳನ್ನು ಕೊಡುವುದು ಮತ್ತು ಈ ರೀತಿ careless ಆಗಿ ಯಾರೋ ಒಬ್ಬ steno, clerk ಬರೆದದ್ದನ್ನು ಇವರು ಸಮಂಜಸವಾಗಿ ಕೊಡದೇ ಅಲ್ಲೇ ಜಿಲ್ಲಾಧಿಕಾರಿಗಳ ಕಛೇರಿ, ತಾಲ್ಲೂಕು ಕಛೇರಿಗೆ ಓಡಾಡಿಕೊಂಡು ಇದುವರೆಗೆ ಕೂಡ ಅದು ಸರ್ಕಾರದ ಮಟ್ಟಕ್ಕೆ ಬಂದಿಲ್ಲ. ಇವತ್ತು ರೀಜನಲ್ ಕಮಿಷನರ್ ಅವಶ್ಯಕತೆ ಎಷ್ಟಿದೆ ಎಂದರೆ ಅದರ ಮೇಲೆ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ, ಈ ವಿಷಯವನ್ನು ನಾವು ಈಗಾಗಲೇ ಜಾಮ್‌ದಾರ್‌ರವರ ಗಮನಕ್ಕೆ, ನಮ್ಮ ಪಿಟಿಷನ್ ಕಮಿಟಿಯ ಗಮನಕ್ಕೂ ತಂದಿದ್ದೇವೆ, ಅದರ ಬಗ್ಗೆ ಇದುವರೆಗೆ ಯಾವುದೇ ಕ್ರಮ ಕೂಡ ಜರುಗಿಸಲಿಲ್ಲ. ಇದು

ರೀಜನಲ್ ಕಮಿಷನರ್ ಹುದ್ದೆ ಬಗ್ಗೆ ಒಂದು, ಎರಡನೆಯದು ಈ ಅಸಿಸ್ಟೆಂಟ್ ಕಮಿಷನರ್ ಮತ್ತು ತಹಸೀಲ್ದಾರ್‌ಗೆ ಪಾಣಿ ಏನು ಬಂದಿದೆ, ಪಾಣಿ ನಾವು computerized ಮಾಡುತ್ತಿದ್ದೇವೆ. ಇಲ್ಲಿ ಯಾರೋ ಒಬ್ಬ ಜಿ.ದುಗ್ಗಪ್ಪ ಎಂದಿದ್ದರೆ ದುಗ್ಗಪ್ಪ.ಜಿ ಎಂದು ಇತ್ತು ಎಂದು ಹೇಳಿದರೆ, ಬದಲಾವಣೆ ಮಾಡಬೇಕೆಂದು ಹೇಳಿದರೆ ಇವತ್ತು ಅಸಿಸ್ಟೆಂಟ್ ಕಮಿಷನರ್ ಆಫೀಸ್‌ಗೆ ಹೋಗಬೇಕು ಅದು. ಒಬ್ಬ ಸಾಮಾನ್ಯ ರೈತ ತಾಲ್ಲೂಕು ಕಛೇರಿಯಲ್ಲಿ ಪಾಣಿಯನ್ನು ಬದಲಾವಣೆ ಮಾಡಬೇಕು, ಒಂದಕ್ಷರ ಹೆಚ್ಚು ಕಡಿಮೆ ಆಗಿದ್ದರೆ ಆ ಅಕ್ಷರವನ್ನು ಬದಲಾವಣೆ ಮಾಡಲಿಕ್ಕೆ ಅಸಿಸ್ಟೆಂಟ್ ಕಮಿಷನರ್‌ರವರ ಹತ್ತಿರ ಪ್ರತಿಸಾರಿ ಹೋಗಬೇಕಾಗುತ್ತದೆ, ಇದರಿಂದ ಸಾಮಾನ್ಯ ಮನುಷ್ಯನ ಮೇಲೆ ಹೆಚ್ಚು ಒತ್ತಡ ಆಗುವುದರಿಂದ ಈ ತರಹದ ಬದಲಾವಣೆಗಳು ಈ ಕಂಪ್ಯೂಟರ್ ವ್ಯವಸ್ಥೆಯಲ್ಲಿ ಏನಿದೆ, ಈ ವ್ಯವಸ್ಥೆಯನ್ನು ಬದಲಾವಣೆ ಮಾಡಲಿಕ್ಕೆ ತಾಲ್ಲೂಕು ಕಛೇರಿಗೆ ಅಧಿಕಾರ ಕೊಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :- ಮಾನ್ಯ ಅಧ್ಯಕ್ಷರೇ, ಇವತ್ತು ಈ ರೀಜನಲ್ ಕಮಿಷನರ್ ಹುದ್ದೆ ಎಷ್ಟು ಅಗತ್ಯವಿದೆ ಎನ್ನುವುದನ್ನು ಎರಡೂ ಪಕ್ಷದವರು ರೂಲಿಂಗ್ ಪಾರ್ಟಿಯವರು, ವಿರೋಧ ಪಕ್ಷದ ಬೆಂಚ್‌ನವರು ಬಹಳ ಜನ ಮಾತನಾಡಿದ್ದಾರೆ. ಅಗತ್ಯವಿಲ್ಲವೆಂದು ಹೇಳಿದ್ದಾರೆ. ನಾನು ಒಂದು ವಿಷಯ ಹೇಳಲಿಚ್ಛಿಸುತ್ತೇನೆ. ಒಂದು ಜಾತಿ ಸರ್ಟಿಫಿಕೇಟ್ ಬೇಕಾದರೆ ನಾನು ಆಗಲೇ ಅದನ್ನೇ ಹೇಳಿದ್ದು, ನಾನು ಮಂತ್ರಿಯಿದ್ದೆ. ಅವತ್ತಿನ ರೆವಿನ್ಯೂ ಮಿನಿಸ್ಟರ್ ಈಗಲೂ ನಿಮ್ಮ ಜೊತೆಯಲ್ಲಿದ್ದಾರೆಂದು. ಆ ಸೆಕ್ರೆಟರಿಯವರನ್ನು ನೀವು ಹಾಗೆ ಇಟ್ಟುಕೊಂಡಿದ್ದೀರಿ ಎಂದು.

ಶ್ರೀ ಎನ್. ಚೆಲುವರಾಯಸ್ವಾಮಿ :- ಕ್ಯಾಬಿನೆಟ್‌ನಲ್ಲಿದ್ದಾಗ ಇದನ್ನು ನೀವೇ introduce ಮಾಡಿದ್ದು, ಈಗ ನೀವೇ ವಿರೋಧ ಮಾಡುತ್ತಿದ್ದೀರಿ ಇದೇನು?

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಹೇಳಿಬಿಡುತ್ತೇನೆ, ಇವತ್ತು ಒಂದು ಜಾತಿ ಸರ್ಟಿಫಿಕೇಟ್ ಬೇಕಾದರೆ ಮೊದಲನೆಯದಾಗಿ ವಿಲೇಜ್ ಅಕೌಂಟೆಂಟ್ ಹತ್ತಿರ ಅರ್ಜಿಯನ್ನು ಕೊಟ್ಟು ಬರೆಸಿಕೊಳ್ಳಬೇಕು. ವಿಲೇಜ್ ಅಕೌಂಟೆಂಟ್‌ನಿಂದ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಹೋಗಬೇಕು. ಡೆಪ್ಯುಟಿ ತಹಸೀಲ್ದಾರ್‌ಗೆ ಹೋಗಬೇಕು, ಆಮೇಲೆ ತಹಸೀಲ್ದಾರ್‌ರಿಂದ ಈ ಜಾತಿ ಸರ್ಟಿಫಿಕೇಟ್ ಪಡೆಯಬೇಕು. ಜಗದೀಶ್ ಶೆಟ್ಟರೇ, ಏಕೆಂದರೆ ಯಾವ ಹಂತದಲ್ಲಿ ಸಾಮಾನ್ಯ ಮನುಷ್ಯನಿಗೆ ಅಗತ್ಯವಿರುವುದನ್ನು ಪೂರೈಸಬೇಕು ಸರ್ಕಾರ ಅಥವಾ ಯಾವುದೇ ಇಲಾಖೆ, ಇವತ್ತು ಜಾತಿ ಸರ್ಟಿಫಿಕೇಟ್ ಅನ್ನು ವಿಲೇಜ್ ಅಕೌಂಟೆಂಟ್ ಬರೆದದ್ದನ್ನೇ ತಹಸೀಲ್ದಾರ್ ಸೈನ್ ಮಾಡುವುದು. ಇದನ್ನು ನಾವು ಅಲ್ಲಿ ಬರೆದು 5

ಜಾಗದಲ್ಲಿ ಹೋಗಿ ಬರಬೇಕು. ಒಂದು solvency ತೆಗೆದುಕೊಳ್ಳಬೇಕಾದರೆ village accountant ಬರೆದದ್ದನ್ನು ಒಂದು ಲಕ್ಷ ರೂಪಾಯಿಗಳ solvency ಬೇಕು ಅಂದರೆ ಜಿಲ್ಲಾಧಿಕಾರಿಗಳವರೆಗೆ ಟೇಬಲ್ ಟೇಬಲ್‌ವರೆಗೂ ಹೋಗಬೇಕು, ಇದು ಈ ರೀತಿಯ ಹಂತಗಳನ್ನು ಆ level jumping ಎಂದು ಆಗಲೇ ಏನು ಹೇಳಿದರು ಅದು ರಾಮಸ್ವಾಮಿಯವರ ಚಿಂತನೆಯಾಗಿತ್ತು. ಇದರ ಜೊತೆಗೆ ಇವತ್ತು ನಮ್ಮ ಬಜೆಟ್ಟಿನಲ್ಲಿ ಮೊನ್ನೆ ತಾನೇ ಮಾನ್ಯ ಉಪಮುಖ್ಯಮಂತ್ರಿಗಳು ಮಂಡಿಸಿದ್ದಾರೆ. 63.5% ಕೇವಲ ಸಂಬಳ ಸಾರಿಗೆಗೆ ಹೋಗುತ್ತಿದೆ. ನಾವು ಯಾವ ಡೆವಲಪ್ಮೆಂಟ್‌ಗೋಸ್ಕರ ಹಣವನ್ನು ಇಡಬೇಕಾಗಿದೆ, ಅದು ಇಂಥದ್ದಕ್ಕೆ ಹೆಚ್ಚಿನ ಆದ್ಯತೆಗಳನ್ನು ಕೊಡುವುದು ನ್ಯಾಯವೇ? ಅದಕ್ಕೆ ನೀವೇನು ಇವತ್ತು ರೀಜನಲ್ ಕಮಿಷನರ್, ಡಿವಿಷನಲ್ ಕಮಿಷನರ್ ಎಂದು ಏನು ಹೇಳುತ್ತಿದ್ದೀರಿ, ಇಂಥ ಅಗತ್ಯತೆಗಳ ಬಗ್ಗೆ ಇವರೆಲ್ಲಾ ಹೇಳಿದ್ದಾರೆ, ಪುನಃ ನಾನು ಅದನ್ನೇ ಒತ್ತಿ ಒತ್ತಿ ಹೇಳಲಿಕ್ಕೆ ಇಚ್ಛೆಪಡುವುದಿಲ್ಲ, ಇವತ್ತು 69% ರೈತರು ಹಳ್ಳಿಗಾಡಿನಲ್ಲಿದ್ದಾರೆ ಇವರಿಗೆ ಡಿವಿಷನಲ್ ಕಮಿಷನರ್, ಡೆಪ್ಯುಟಿ ಕಮಿಷನರ್‌ಗಳ ಅಷ್ಟು ಅಗತ್ಯ ಕಡಿಮೆ, ಅವರಿಗೆ ಬೇಕಾಗಿರುವುದು ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್, ಸರ್ವೆ ಆಫೀಸ್, ಪಂಚಾಯಿತಿ ಸೆಕ್ರೆಟರಿ ಆಮೇಲೆ ನಮ್ಮ agriculture, Horticulture, A.O., Animal husbandry Officers, Doctors ಇಷ್ಟು ಕೊಟ್ಟು ಅವರಿಗೆ ಇದನ್ನು strengthen ಮಾಡುವುದನ್ನು ಬಿಟ್ಟು ನೀವೆಲ್ಲೋ ಡಿವಿಜನಲ್ ಕಮಿಷನರ್ ಮಾಡಿ ಇಲ್ಲಿನ ಯಾವ grass root level ನಲ್ಲಿ ಇವತ್ತು 69% ಬದುಕುತ್ತಿದ್ದಾರೋ ಅವರ ಬಗ್ಗೆ ಚಿಂತನೆ ಮಾಡುವುದನ್ನು ಬಿಟ್ಟು ಯಾರೋ ಅಧಿಕಾರಿಗಳು ಬರೆದಿದ್ದಾರೆಂದು ಹೇಳಿ ನಿಮ್ಮಂಥವರು ಕೂಡ ಈ ಭಾಗದಲ್ಲಿದ್ದಾಗ ಏನು ಸ್ವಾಗತ ಮಾಡಿದ್ದೀರಿ ಹಾರನಹಳ್ಳಿ ರಾಮಸ್ವಾಮಿಯವರ ವರದಿಯನ್ನು. ಇವತ್ತು ನೀವು ಮಂತ್ರಿಗಳಾಗಿರಬಹುದು, ಹಿಂದಿನ ಸರ್ಕಾರ ಮಾಡಿದೆ, ನಾವು ಆಗ ಇದ್ದೆವು ಎಂದು ಹೇಳಬಹುದು, ನಮ್ಮದು ತಪ್ಪು ಆಗಿರಬಹುದು ನಾನು ಇಲ್ಲವೆಂದು ಹೇಳುವುದಿಲ್ಲ, ಆದರೆ ಅವತ್ತು ನೀವು ಅದನ್ನು ಸ್ವಾಗತ ಮಾಡಿದವರು ಇವತ್ತು ಇದನ್ನು ತರಲಿಕ್ಕೆ ಹೊರಟಿದ್ದೀರಿ. ಇದನ್ನು ಸ್ವಲ್ಪ ಕೂಲಂಕುಷವಾಗಿ ಯೋಚನೆ ಮಾಡಲಿಲ್ಲವೆನ್ನುವಂಥಾದ್ದು ಇವತ್ತು ಒಂದು ಪಂಚಾಯಿತಿ ಲೆವೆಲ್‌ನಲ್ಲಿಯೂ ಕೂಡ ಗ್ರಾಮ ಪಂಚಾಯಿತಿ...,

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಈಗಾಗಲೇ ಬಹಳಷ್ಟು ಜನ ಬಿಲ್ ಮೇಲೆ ಮಾತನಾಡಿದ್ದಾರೆ. ಈಗ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾದಾಗ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದಲ್ಲಿ Administrative Reforms Committee constitute ಮಾಡಿದರು. ಹಾರನಹಳ್ಳಿ

ರಾಮಸ್ವಾಮಿಯವರು ಈ ರಾಜ್ಯದ ಒಬ್ಬ ಹಿರಿಯರಿದ್ದಾರೆ, ಅನುಭವಿಗಳಿದ್ದಾರೆ, ಅವರು ಒಂದು ವರದಿಯನ್ನು ಕೊಟ್ಟರು, ಏನೆಂದರೆ ಎಲ್ಲಾ ಕಡೆ ಬಹಳ economy measure ತರಬೇಕು ಬಹಳಷ್ಟು ಹುದ್ದೆಗಳಾಗಿವೆ, ಸರಿಪಡಿಸಬೇಕು ಎಂದು he had taken decision. ಇವತ್ತು ರಾಜ್ಯದ ದೃಷ್ಟಿಯಿಂದ, economy measure ದೃಷ್ಟಿಯಿಂದ ಆಯಿತು. ಈಗೇನು ಹೇಳುತ್ತಾರೆ, Regional Commissioner ನಿಮ್ಮ ಕಾಲದಲ್ಲಿ ಆಯಿತು. ನೀವು ಕಂದಾಯ ಮಂತ್ರಿಗಳಾಗಿ 14 ತಿಂಗಳು ಆಯಿತು. ರಾಜ್ಯಕ್ಕೆ ಬಹಳಷ್ಟು ವಿಷಯಗಳು ಕೂಡ ಹೇಳಿದ್ದೀರಿ. ಇವತ್ತು Regional Commissioner ಮಾತಕ್ಕಂಥ ರೀತಿಯಲ್ಲಿ substitute ಮಾಡತಕ್ಕಂಥದ್ದು, Divisional Commissioner ಮಾಡಿ, Divisional Commissioner ಕೊಟ್ಟಂಥ powers ಮತ್ತೆ ಕೊಡಬೇಕೆಂದು ಎಲ್ಲಿರುತ್ತದೆಂದರೆ ಅದು methodical ಆಗಿ correct ಆಗಿ ನೀವು ಅದಕ್ಕೆ mind apply ಮಾಡಿ, as a revenue minister ಈಗಾಗಲೇ ರಮೇಶ್ ಕುಮಾರ್ ಹೇಳಿದರು, ವಿರೋಧಪಕ್ಷದ ನಾಯಕರಾಗಿ, ಪಕ್ಷದ ಅಧ್ಯಕ್ಷರಾಗಿ ತಾವು ಕೆಲಸ ಮಾಡಿದ್ದೀರಿ, ಇವತ್ತು ಇರತಕ್ಕಂಥ ವಿಷಯಗಳ ಬಗ್ಗೆ think ಮಾಡಿ bill ವಾಪಸ್ ತೆಗೆದುಕೊಂಡು ಇದಕ್ಕೆ ಸರಿಯಾದ ರೀತಿಯಲ್ಲಿಲ್ಲ, ಅವರ ಕಾಲದಲ್ಲೇ ಆಗಿದೆ, ಧರಂಸಿಂಗ್ ಕಾಲದಲ್ಲಿ ಆಗಿದೆಯೆಂದರೆ ನಾವೇನು ಅಪರಾಧ ಮಾಡಿದ್ದೇವೆ. We have constituted the Committee and implemented. Economy measures ದೃಷ್ಟಿಯಿಂದ ಮಾಡಿದ್ದೇವೆ. ಅದಕ್ಕೆ ನೀವು ಪರ್ಯಾಯವಾಗಿ ಇವತ್ತು ಎಲ್ಲಾ ಹಿರಿಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅವರ ಅನುಭವದ ಹಿನ್ನೆಲೆಯಲ್ಲಿ ಯಾವ ರೀತಿಯಾಗಿ ಕಾರ್ಯವೈಖರಿ ಇವತ್ತಿನ ದಿವಸ ಇದೆ, bureaucrats ಯಾವ ರೀತಿ ಕೆಲಸ ಮಾಡುತ್ತಾರೆ ಎಲ್ಲಾ ಹೇಳಿದ್ದಾರೆ. ಅದಕ್ಕೆ ನಾವು ಪ್ರೆಸ್ಟೀಜ್ ಮೇಲೆ ನಾವು ಮಾಡಿದ್ದೇವೆ, ಮಾಡಿದ ಮೇಲೆ ಇವತ್ತಿನ ದಿವಸ economy measures ತರತಕ್ಕಂಥ ರೀತಿಯಲ್ಲಿ ಇವತ್ತು ಹಾರನಹಳ್ಳಿ ರಾಮಸ್ವಾಮಿಯವರ ರಿಪೋರ್ಟ್ ಏನು ಸರ್ಕಾರದ ಮುಂದೆ ಇದೆ. ಸರಿಯಾದ ರೀತಿಯಲ್ಲಿ ವಿಚಾರ ಮಾಡಿ ಅದಕ್ಕೆ ಬಿಲ್ ವಾಪಸ್ಸು ತೆಗೆದುಕೊಂಡು ಮಂಡಿಸಿದರೆ ಸರಿಹೋಗುತ್ತದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ :- ಸಚಿವರು ಅದಕ್ಕೆ ಉತ್ತರ ಕೊಟ್ಟರೆ ನಾನು ಕುಳಿತುಕೊಂಡೇ ಬಿಡುತ್ತೇನೆ. ಅಧ್ಯಕ್ಷರೇ, ಮೊನ್ನೆ ನನ್ನ ಕ್ಷೇತ್ರದಲ್ಲಿ ಒಬ್ಬ ಎಸ್.ಸಿ. ಜನಾಂಗದವರು ಜಮೀನು ಮಾರಿ ಪಾಪ ಅವರಿಗೇನೋ ತೊಂದರೆಯಿದೆಯೆಂದು ಹೇಳಿ ಅದರ ಪರ್ಮಿಷನ್ ಕೇಳಿದರು. ನಾನು ಇದು ಜಿಲ್ಲಾಧಿಕಾರಿಗಳೇ ಕೊಡಬೇಕೇ ಎಂದು ಕೇಳಿದ್ದಕ್ಕೆ ಇಲ್ಲ, ಸರ್ಕಾರವೇ ಕೊಡಬೇಕೆಂದು ಹೇಳಿದರು, ಅದರ ಹಂತವನ್ನು ನಾನು ಕೇಳಿದಾಗ ಸುಮಾರು 13ನೇ ಹಂತಕ್ಕೆ ಬರಬೇಕು ಆ ಫೈಲ್ ಅಪ್ರೂವ್ ಆಗಿ ಈಚೆಗೆ ಬರಬೇಕಾದರೆ. ಇವತ್ತು

ಇಷ್ಟು ಸಾಮಾನ್ಯ ಮನುಷ್ಯರಿಗೆ ಕಷ್ಟ ಕೊಡುವಂಥ ಈ ವ್ಯವಸ್ಥೆಯಲ್ಲಿ ಇನ್ನಷ್ಟು ಕಡಿಮೆ ಮಾಡಿ ಬೇಗನೇ ಅವತ್ತಿನದು ಅವತ್ತೆ ಕೊಡುವಂಥ ಕೆಲಸ ಮಾಡೋದು ಬಿಟ್ಟು ಇವತ್ತೇನು ಈ ರೀಜನಲ್ ಕಮಿಷನರ್, ಇನ್ನೊಂದು ಅಸಿಸ್ಟೆಂಟ್ ಕಮಿಷನರ್ ಅನ್ನು ಈ ರೀತಿಯ ಪೋಸ್ಟ್‌ಗಳನ್ನು ಮಾಡುವ ಔಚಿತ್ಯವಾದರೂ ಇದೆಯೇ? ಒಂದೊಂದು ಸಾರಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು, ನನಗೆ ಈಗ ಜ್ಞಾಪಕ ಬರುತ್ತದೆ, ಅಜೀಜ್ ಸೇಠ್‌ರವರು Transport Minister ಇದ್ದರು, ಒಂದು ಸಾರಿ ಕೋಲಾರಕ್ಕೆ ಬಂದಾಗ ಅಲ್ಲಿನ Deputy Commissioner ಗೆ ಯಾವುದೋ ರೆವಿನ್ಯೂ ವಿಷಯಕ್ಕೆ ಕೇಳಿದರು. ಆಗ ನಾವೆಲ್ಲಾ youngsters, ಅದಕ್ಕೆ ಅವರು ಇಲ್ಲ ಸರ್ ಅದು ನಿಮ್ಮ ಖಾತೆಗೆ ಸಂಬಂಧಪಟ್ಟಿದ್ದಲ್ಲ ಎಂದು ಹೇಳಿದರು, ಅದಕ್ಕೆ ಅಜೀಜ್ ಸೇಠ್ ಏನು ಹೇಳಿದರು ಅಂದರೆ "I am the Government, do whatever I say". ಆ ಕಾಲದಲ್ಲಿ ನಡೆಸಿದ್ದಂಥ ಪರಿಸ್ಥಿತಿ ಈ ರೀತಿ ಇತ್ತು, ನಾನು ಮಂತ್ರಿಯಾಗಿದ್ದೆ, ಪರಿಸ್ಥಿತಿಗಳು ಹೇಗಿವೆ ಎಂದರೆ ಯಾವ ಅಧಿಕಾರಿಗಳು ಹೇಳಿದೆ ಹಾಗೆ ನಾವೆಲ್ಲಾ ಇವತ್ತು ಈ ಅಧಿಕಾರಿಗಳು ಒಂದು ಸಾರಿ ಸೆಲೆಕ್ಷನ್ ಆಗಿಬಿಟ್ಟರೆ 35 ವರ್ಷ ರಿಟೈರ್ಡ್ ಆಗುವವರೆಗೆ ಅವರಿಗೇನೂ ಇಲ್ಲ, ಆದರೆ ನಿಮಗೂ ನನಗೂ ಪ್ರತಿ 5 ವರ್ಷಕ್ಕೊಮ್ಮೆ ಪರೀಕ್ಷೆ ಇದೆ. ಇಲ್ಲಿರುವ 224 ಜನಗಳಿಗೂ ಪರೀಕ್ಷೆ ಇದೆ. 5 ವರ್ಷಕ್ಕೆ ಒಂದು ಸಾರಿ ನಾವು ಆ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ತೇರ್ಗಡೆಯಾದರೆ ನಾವು ಈ ಮನೆಗೆ ಬರುತ್ತೇವೆ. Fail ಆದರೆ ನಮ್ಮನ್ನು ದೂರ ಹಾಕುತ್ತಾರೆ. ನಮ್ಮ ವ್ಯವಸ್ಥೆ ಈ ಪರಿಸ್ಥಿತಿಯಲ್ಲಿರುವಾಗ ನೀವು ಯಾವುದೋ ಒಬ್ಬ ಅಧಿಕಾರಿ ಇವತ್ತು ಅವರ ಅಧಿಕಾರಕ್ಕೆ ನೀವು ಒಳಪಡುವುದಾದರೆ ಹೇಗೆ? ಅದಕ್ಕೆ ನೀವು ಒಳಗಾಗಬಾರದು. ನಾನು ಇನ್ನೂ ಹೆಚ್ಚಿಗೆ ಮಾತನಾಡುವುದಿದೆ, ಇವತ್ತು ಎಲ್ಲಾ ಇಲಾಖೆಗಳು Agriculture, Animal Husbandry, ಮತ್ತು Horticulture, ಸಹಕಾರಗಳಲ್ಲೆಲ್ಲೂ ಯಾವ Technocrats ಇರಬೇಕಾಗಿತ್ತೋ ಅಲ್ಲಿ ಎಲ್ಲಾ I.A.S. officers, ಏನು ಸ್ವಾಮಿ ಇವರು ಕಟ್ಟಿ ಕಡಿದು ಹಾಕುವುದು? ಇವರೇನು ಆಕಾಶದಿಂದ ಇಳಿದಿದ್ದಾರೆಯೇ? ಇವರ ತಾಯಿ ನೀರನ್ನು ಬಿಟ್ಟು ಆಕಾಶದಿಂದ ಹುಟ್ಟಿದ್ದರೆ ಹೇಳಲಿ. ಇವರೇ ಬುದ್ಧಿವಂತರು, ಬೇರೆ ಯಾರೂ ಬುದ್ಧಿವಂತರಿಲ್ಲ. ಆದರೆ Technocrats, ಡಾ॥ ಮರೀಗೌಡರು ಇದ್ದರು. Horticulture Department ನಲ್ಲಿ, ಇವತ್ತು ಇಡೀ ರಾಜ್ಯ ಮರೀಗೌಡರನ್ನು ನೆನೆಸಿಕೊಳ್ಳುತ್ತದೆ. ಏಕೆ? ಮರೀಗೌಡರು ಮಾಡಿದಂತಹ ಕೆಲಸದಿಂದ. ಅವರಾದ ಮೇಲೆ IAS officers ಮಾಡಿದ್ದಾದರೂ ಏನು? ಏಕೆ ಇವರು ಅವರ ಹೆಸರನ್ನು ತೆಗೆದುಕೊಳ್ಳಲಿಲ್ಲ. ಇವನ್ನು ನಾವು ಯೋಚನೆ ಮಾಡಬೇಕು ಚರ್ಚೆ ಮಾಡಬೇಕು. ಇದನ್ನು ಬಿಟ್ಟು ತಾವು ಯಾವುದೋ ಅಧಿಕಾರಿ ಹೇಳಿದರು ಅಂದರೆ ಹೇಗೆ? ಇವತ್ತು ನಾವು Regional Commissioner

ಮಾಡಿಬಿಟ್ಟರೆ, ಇದನ್ನು ಮಾಡುವುದರಿಂದ ಸಾಮಾನ್ಯ ಮನುಷ್ಯ ಪ್ರತಿಯೊಂದು ಟೇಬಲ್‌ಗೆ ಹೋಗಿ ತಿರುಗಾಡುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದ್ದರಿಂದ ಇದನ್ನು ತಾವು ಒಂದು prestige ಎಂದು ತೆಗೆದುಕೊಳ್ಳದೇ ಇವತ್ತು ನಾವೆಲ್ಲಾ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಎಲ್ಲರೂ ಹೇಳುತ್ತಿರುವುದರಿಂದ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು :– ಈಗ ಬಹಳ ಸಮಯವಾಯಿತು, ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ,....

ಉಪಾಧ್ಯಕ್ಷರು :– ಲೇಟಾಯಿತು, ಉತ್ತರ ಹೇಳಲಿ.

ಶ್ರೀ ಎಸ್.ಎಸ್. ಪಾಟೀಲ್ :– ಹಿಂದೆ ಸಹಕಾರ ಬಿಲ್ ಮೇಲೆ 3 ದಿವಸಗಳ ಕಾಲ ಚರ್ಚೆಯಾಗಿದೆ.

ಉಪಾಧ್ಯಕ್ಷರು :– ಚರ್ಚೆಯಾಗಿದೆ. ಸಮಯವಿಲ್ಲ. ಇನ್ನೂ ಬೇರೆ ಬಿಲ್‌ಗಳು ಇವೆ, ಆಗ ತಾವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರ್ಗಿ) :– ನಾನು 5 ನಿಮಿಷ ಮಾತನಾಡುತ್ತೇನೆ. ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಮಾನ್ಯ ಜಗದೀಶ ಶೆಟ್ಟರಿಗೆ ನೆನಪು ಮಾಡುತ್ತೇನೆ. 1995–96 ರಲ್ಲಿ ನಮ್ಮ ರಾಜ್ಯದ plan size ಕೇವಲ 3758 ಕೋಟಿ. ಇವತ್ತು 17 ಸಾವಿರ ಕೋಟಿಗೆ ಹೋಗಿದ್ದೇವೆ. ಅವತ್ತಿನ ಪರಿಸ್ಥಿತಿ ಏನಿತ್ತು ಎಂದು ತಮಗೆ ಗೊತ್ತಿದೆ. ನೌಕರರಿಗೆ ಪಗಾರ ಕೊಡುವುದಕ್ಕೆ ಹಣವಿಲ್ಲದಂತಹ ಸ್ಥಿತಿಯಲ್ಲಿ ನಾವು ಅಧಿಕಾರಕ್ಕೆ ಬಂದಿದ್ದು. ಮಾನ್ಯ ಜೆ.ಹೆಚ್. ಪಟೇಲರು ಮತ್ತು ಮಾನ್ಯ ದೇವೇಗೌಡರು ಅಧಿಕಾರಕ್ಕೆ ಬಂದಾಗ. ಆಗ ಒಬ್ಬರು Finance Commissioner ಇದ್ದರು ಅವರು ಹೇಳುತ್ತಿದ್ದರು. ಶ್ರೀ ಭಟ್ ಅಂತ. ಅವರಿಗೆ ನಾವು ಆಡಿಟರ್ಸ್ ಇಲ್ಲ. ಡೆಪ್ಯುಟಿ ಆಡಿಟರ್ಸ್ ಇಲ್ಲ. ಅಂದಾಗ ಅವರು ನನಗೆ ಹೇಳಿದರು, ಪಾಟೀಲರೇ, ಸುಮಾರು 20 ಸಾವಿರ ನೌಕರರ ಹುದ್ದೆಗಳು ಖಾಲಿ ಇವೆ. ಅದೇ ಹಣದಲ್ಲಿ ನಿಮ್ಮ ಪ್ಲಾನ್‌ಗೆ ಬರುತ್ತದೆ. ಹೆಚ್ಚು ಕಡಿಮೆ ತುಂಬುವುದು ಬೇಡವೆಂದು ವಿಚಾರ ಮಾಡಿ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಸುಮಾರು 20 ಸಾವಿರ ಹುದ್ದೆಗಳನ್ನು ಕ್ಯಾನ್ಸಲ್ ಮಾಡಬೇಕು ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ಬೇರೆ ಬೇರೆ ಹುದ್ದೆಗಳನ್ನು ರದ್ದು ಮಾಡಬೇಕೆಂದು ಹೇಳಿ ಹಾರ್‍ನಹಳ್ಳಿ ರಾಮಸ್ವಾಮಿಯವರ ವರದಿಯಲ್ಲಿ ಡಿಟೇಲ್ ಆಗಿ ಹೇಳಿದ್ದಾರೆ. ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಗ್ರಾಮ ಸೇವಕರನ್ನು ಹೆಚ್ಚು

ಮಾಡಬೇಕು, ವಿಲೇಜ್ ಅಕೌಂಟೆಂಟ್ಸ್ ಹೆಚ್ಚು ಮಾಡಬೇಕು. ಆ ಕಾರಣದಿಂದ ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ. ಹಿರಿಯರೆಲ್ಲಾ ಮಾತನಾಡಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಬಹಳ ಅವಶ್ಯಕತೆಯಿದ್ದಂತಹ ಪೋಸ್ಟ್ ಗ್ರಾಮ ಸಹಾಯಕ, ಅವರನ್ನು ಖಾಯಂ ಮಾಡಿ ಎಂದು ನಾನು ಒಂದು ಅರ್ಜಿ ಕೊಟ್ಟರೆ, ಆ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಹಾಕಿದ್ದಕ್ಕೆ ಉತ್ತರ ಕೊಟ್ಟಿರಿ, ಬಹಳ ಅವಶ್ಯಕತೆಯಿದೆಯೆಂದು ಹೇಳುತ್ತಾರೆ, ಆದರೆ ಕಾಯ್ದೆಯಲ್ಲಿ ಅವಕಾಶವಿಲ್ಲ, ಹಣಕಾಸಿನ ತೊಂದರೆಯಿದೆ ಅದಕ್ಕೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ ನೀವೇ ಹೇಳುತ್ತೀರಿ, ಇದನ್ನು ಮಾಡುವುದರಿಂದ 2 ಕೋಟಿ 62 ಲಕ್ಷ ರೂಪಾಯಿ ಹೆಚ್ಚುವರಿಯಾಗಿ ಖರ್ಚು ಬರುತ್ತದೆಂದು ಹೇಳುತ್ತೀರಿ, ಸಾಮಾನ್ಯವಾಗಿ 10–15 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಖರ್ಚು ಬರುತ್ತದೆ. ಅವಶ್ಯಕತೆಯಿಲ್ಲದ ಪೋಸ್ಟ್ ತುಂಬಿಕೊಳ್ಳುವುದಕ್ಕೆ ಹಣಕಾಸಿನ ತೊಂದರೆಯಿಲ್ಲ. ಅವಶ್ಯಕತೆಯಿರುವ ಪೋಸ್ಟ್‌ಗಳನ್ನು ತುಂಬಲು ಹಣದ ಕೊರತೆ ಎಂದು ಹೇಳುತ್ತೀರಿ. ನನಗೆ ಉತ್ತರ ಕೊಟ್ಟಿದ್ದೀರಿ. ಇದು ಇವತ್ತಿನ ಪರಿಸ್ಥಿತಿ. ಅದಕ್ಕೆ ಇದನ್ನು ತಾವು ಬಹಳ prestige issue ಆಗಿ ಮಾಡಿಕೊಳ್ಳಬೇಡಿ ಮುಂದೆ ಒಂದು ಕಾಲಕ್ಕೆ ಬಹಳ ಕಷ್ಟವಾಗುತ್ತದೆ. ಆ ಕಾರಣದಿಂದ ಪಂಚಾಯ್ತಿಗೆ ಇವರು ಕಂಡೀಷನ್ಸ್ ಹಾಕುತ್ತಾರೆ. 30% ಆಡಳಿತ ವೆಚ್ಚವಿರಬೇಕು, 70% ಅಭಿವೃದ್ಧಿಗೆ ಇಡಬೇಕೆಂದು, ಈ ಕಾರಣದಿಂದ ಇದು ಅವಶ್ಯಕತೆಯಿಲ್ಲ. ಎಲ್ಲಾ ಭಾಗದ ಸದಸ್ಯರು ಕೂಡ ವಿರೋಧ ಮಾಡಿದ್ದಾರೆ. ಆದ್ದರಿಂದ prestige ಮಾಡದೇ ವಾಪಸ್ ಪಡೆದುಕೊಳ್ಳಿ, ಬಹಳ ತೊಂದರೆಯಾಗುತ್ತದೆಂದು ಹೇಳಿದ್ದೀರಿ, ಏನೇನು ತೊಂದರೆಯಾಗುತ್ತದೆಂದು ಹೇಳಿ, ಜನರಿಗೆ ಬಹಳ ಅನುಕೂಲವಾಗಿದೆ. ನಿಜವಾಗಿ ಹೇಳಬೇಕೆಂದರೆ ಗ್ರಾಮ, ಗ್ರಾಮದಿಂದ ತಾಲ್ಲೂಕು, ತಾಲ್ಲೂಕಿನಿಂದ ಜಿಲ್ಲೆ, ಜಿಲ್ಲೆಯಿಂದ ರಾಜ್ಯ, ಆದ್ದರಿಂದ ಗ್ರಾಮೀಣಾಭಿ ವೃದ್ಧಿಯಲ್ಲಿಯೂ ಅದೇ ರೀತಿ ಇದೆ. ಈಗ ವ್ಯವಸ್ಥೆಯನ್ನು ತೆಗೆದರೆ ಜನರಿಗೆ ತೊಂದರೆಯಾಗುತ್ತದೆ. ಆ ಕಾರಣದಿಂದ ಇದನ್ನು ಮಾಡುವ ಅವಶ್ಯಕತೆಯಿಲ್ಲ. ದಯವಿಟ್ಟು ಇದನ್ನು ಹಿಂದಕ್ಕೆ ಪಡೆಯಿರಿ. ಮತ್ತೊಂದು ಸಲ ತಾವು ವಿಚಾರ ಮಾಡಿ. ಯಾವ್ಯಾವುದು ತೆಗೆಯಬೇಕೋ ಅದನ್ನು ತೆಗೆಯಿರಿ. ಇದರಿಂದ ಕೋಟಿಗಟ್ಟಲೆ ಹಣ ಉಳಿಯುತ್ತದೆ. ಅಭಿವೃದ್ಧಿಯಾಗುತ್ತದೆ. ಒಳ್ಳೆಯ ಕೆಲಸ ಮಾಡಲಿಕ್ಕಾಗುತ್ತದೆ, ತಾವು ವಿಚಾರ ಮಾಡಿ. ಹಿಂದೆ ಒಂದು ಕಾಲದಲ್ಲಿ ನೌಕರರಿಗೆ ಪಗಾರ ಕೊಡಲಿಕ್ಕೆ ತೊಂದರೆಯಿತ್ತು. 1995 ರಲ್ಲಿ ಕೇವಲ ಮೂರು ಸಾವಿರ ಕೋಟಿ ಪ್ಲಾನ್ ಸೈಜ್ ಇತ್ತು. ಇವತ್ತು ಹಣಕಾಸಿನ ಪರಿಸ್ಥಿತಿ ಸುಧಾರಿಸಿದೆ, ಈ ಕಾರಣದಿಂದ ಇನ್ನೂ ಹೆಚ್ಚಿನ ಅಭಿವೃದ್ಧಿ ನಮ್ಮ ರೈತರಿಗಾಗುತ್ತದೆ. ಇವತ್ತು ನಮ್ಮಲ್ಲಿ ರಸ್ತೆಗಳು ಸರಿಯಾಗಿಲ್ಲ. ಪರಿಸ್ಥಿತಿ ಬಹಳ ಕಷ್ಟವಿದೆ, ಇಂಥ ಸ್ಥಿತಿಯಲ್ಲಿ ತಾವು ಸುಮ್ಮನೆ ಏಕೆ

ಹೊರೆ ಮಾಡಿಕೊಳ್ಳುತ್ತೀರಿ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :- ಮಾನ್ಯ ಅಧ್ಯಕ್ಷರೆ, ಆಡಳಿತಾತ್ಮಕ ಸುಧಾರಣೆಯ ದೃಷ್ಟಿಯಿಂದ ಕೆಲವು ಹುದ್ದೆಗಳನ್ನು ರದ್ದು ಮಾಡಬೇಕೆಂದು ವರದಿ ಬಂದಿದೆ, ಆ ಬಗ್ಗೆ ಸಾಕಷ್ಟು ಚರ್ಚೆಗಳು ಸಹ ಸದನದಲ್ಲಿ ಆಗಿವೆ. ಬರೇ ಆಡಳಿತಾತ್ಮಕ ವೆಚ್ಚವನ್ನು ತಪ್ಪಿಸಿಕೊಳ್ಳಬೇಕೆನ್ನುವ ಒಂದೇ ದೃಷ್ಟಿಯಲ್ಲ, ವಿವಿಧ ಹಂತಗಳು ಏನಿದ್ದವೋ ಅವುಗಳನ್ನು ಕಡಿಮೆ ಮಾಡಿ ಅನಗತ್ಯ ವಿಳಂಬವನ್ನು ತಪ್ಪಿಸುವಂಥಾದ್ದು ಆ ಒಂದು ಚರ್ಚೆಯ ಉದ್ದೇಶವಾಗಿತ್ತು. ಆ ದಿಕ್ಕಿನಲ್ಲಿ ಸರ್ಕಾರ ಮರುಪರಿಶೀಲನೆ ಮಾಡಿದರೆ ಸೂಕ್ತವೆಂದು ಅನ್ನಿಸುತ್ತದೆ. ಡಿಲಿಗೇಷನ್ ಆಫ್ ಪವರ್ಸ್ ಏನಿದೆ, ರೀಜನಲ್ ಕಮಿಷನರ್ ಎಂದು ಏನು ಮಾಡಿದ್ದಾರೆ, ಹಿಂದೆ ಡಿವಿಷನಲ್ ಕಮಿಷನರ್ ಎಂದು ಇದ್ದರು, ಅದನ್ನು ತೆಗೆದು ರೂಲ್ಸ್ ಮೂಲಕ ಆ ಪವರ್ಸ್ ಅನ್ನು ಅವರಿಗೆ ವಹಿಸಿ ಎಂದು ನನ್ನ ಸಲಹೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಬಿಲ್ಲಿನ ಬಗ್ಗೆ ಬಹಳಷ್ಟು ಜನ ಸದಸ್ಯರು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಪಕ್ಷದ ನಾಯಕರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾಧುಸ್ವಾಮಿಯವರು, ಶ್ರೀನಿವಾಸಗೌಡರು, ಎಸ್.ಎಸ್. ಪಾಟೀಲ್‌ರು, ಜಯಪ್ರಕಾಶ್ ಹೆಗ್ಡೆಯವರು, ರಾಜೇಂದ್ರನ್‌ರವರು, ಶ್ರೀರಾಮರೆಡ್ಡಿಯವರು, ಶ್ರೀ ರಮೇಶ್‌ಕುಮಾರ್‌ರವರು, ಶ್ರೀ ರಾಮಸ್ವಾಮಿಯವರು, ವಿಶ್ವೇಶ್ವರ ಹೆಗಡೆಯವರು ಇನ್ನೂ ಹಲವಾರು ಜನ ಇವತ್ತು ಈ ವಿಷಯದ ಬಗ್ಗೆ ಸಾಕಷ್ಟು ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದಾರೆ. ಇದರ ಬಗ್ಗೆ ವಿರೋಧವನ್ನು ಸಹ ಮಾಡಿದ್ದಾರೆ. ರೀಜನಲ್ ಕಮಿಷನರ್ ಹುದ್ದೆಗಳು ಏನಿವೆ, ನಾಲ್ಕು ಹುದ್ದೆಗಳನ್ನು ನಾವು ಸೃಷ್ಟಿ ಮಾಡಿದ್ದೇವೆ, ಆ ಹುದ್ದೆಗಳ ಅವಶ್ಯಕತೆ ಇಲ್ಲವೆನ್ನುವಂಥ ಅಭಿಪ್ರಾಯವನ್ನು ನಮ್ಮ ಶಾಸಕರು ವ್ಯಕ್ತಪಡಿಸಿದ್ದಾರೆ. ಇವತ್ತು ಒಂದು ಆಡಳಿತ ವ್ಯವಸ್ಥೆಯಲ್ಲಿ ಯಾವುದು ಸರಿ, ಯಾವುದು ತಪ್ಪು ಎನ್ನುವಂಥಾದ್ದು ಸರ್ಕಾರದಲ್ಲಿರುವಂಥ ನಾವು ಚಿಂತನೆ ಮಾಡಿದಾಗ ಈ ರೀಜನಲ್ ಕಮಿಷನರ್ ಹುದ್ದೆ ಅವಶ್ಯಕತೆ ಇದೆಯೆನ್ನುವಂಥಾದ್ದು ನಮ್ಮ ಗಮನಕ್ಕೆ ಬಂದಿದೆ. ಹೀಗಾಗಿ ಹಿಂದಿನ ಸರ್ಕಾರ ಮಾನ್ಯ ಧರ್ಮಸಿಂಗ್‌ರವರು ಈಗ ಹೇಳಿದರು, ನಾನು ಮುಖ್ಯಮಂತ್ರಿಯಾಗಿದ್ದಾಗ ಅವರ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ, ಅದಕ್ಕೆ ಕಾರಣ ಸಹ ಕೊಟ್ಟಿದ್ದಾರೆ. ಡಿವಿಜಲ್ ಕಮಿಷನರ್ ಹುದ್ದೆಗಳನ್ನು ರದ್ದುಗೊಳಿಸಿದ್ದರಿಂದ ಆಡಳಿತದಲ್ಲಿ ಈ ಕೆಳಕಂಡ ಪರಿಣಾಮಗಳು ಉಂಟಾಗಿರುತ್ತವೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಆಡಳಿತಾತ್ಮಕ ನಿಯಂತ್ರಣ ಆಗ

ಕ್ಯಾಬಿನೆಟ್‌ನಲ್ಲಿ ಚರ್ಚೆಯಾದಂಥ ಸಂದರ್ಭದಲ್ಲಿ ಅವರು ಅವತ್ತು ಏನೊಂದು ನೋಟಿಫಿಕೇಷನ್ ಹೊರಡಿಸಿದ್ದರು, ಈ ರೀಜನಲ್ ಕಮಿಷನರ್, ಮೊದಲು ಡಿವಿಷನಲ್ ಕಮಿಷನರ್ ಎಂದು ಇದ್ದರು. ಹೊಸ ಜಿಲ್ಲೆಗಳ ಸ್ಥಾಪನೆಯಾದ ಮೇಲೆ ಮೊದಲು ವಿಭಾಗೀಯ ಅಂತ ಇದ್ದುದನ್ನು ಪ್ರದೇಶಿಕ ಆಯುಕ್ತ ಅನ್ನುವ ಹುದ್ದೆ ಬದಲಾಯಿಸಬೇಕೆಂದು, ಎಸ್.ಎಸ್. ಪಾಟೀಲ್‌ರು ಹೇಳಿದ ಹಾರನಹಳ್ಳಿ ರಾಮಸ್ವಾಮಿಯವರ ವರದಿ ಅದನ್ನು ನಾನೂ ಓದಿದ್ದೇನೆ. ಕೆಲವೊಂದು ಅನವಶ್ಯಕ ಹುದ್ದೆಗಳೇನಿವೆ ಸರ್ಕಾರದ ಮೇಲೆ ಆರ್ಥಿಕವಾಗಿ ಭಾರ ಹಾಕುತ್ತೇವೆ ಅಂತಹ ಹುದ್ದೆಗಳನ್ನು ರದ್ದು ಮಾಡಬೇಕು, ಇಲ್ಲ ಅಂತ ನಾನು ಹೇಳುವುದಿಲ್ಲ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಿದ್ದಾಗ ನಾನೇ ಪ್ರತಿಪಕ್ಷದ ನಾಯಕನಾಗಿದ್ದೆ. ಅವತ್ತು ಹಾರನಹಳ್ಳಿ ರಾಮಸ್ವಾಮಿ ಆಯೋಗದ ನೇಮಕವಾಯಿತು. ನಾವು ಅವತ್ತು ಸ್ವಾಗತ ಮಾಡಿದ್ದೆವು. ರಾಮಸ್ವಾಮಿಯವರು ವರದಿ ಕೊಟ್ಟರು. ಅದರಲ್ಲಿ ಯಾವ್ಯಾವ ಹುದ್ದೆಗಳು ಸರ್ಕಾರಕ್ಕೆ ಭಾರವಾಗುತ್ತವೆ ಅವನ್ನು ರದ್ದು ಮಾಡಿರಿ ಅಂತ ನಾವೂ ಹೇಳಿದೆವು, ಇಲ್ಲ ಅನ್ನುವುದಿಲ್ಲ. ಆದರೆ ಎಷ್ಟೆಲ್ಲ ಅನುಷ್ಠಾನವಾಗಿದೆ ಎಂಬುದನ್ನು ನಾವೆಲ್ಲ ಚಿಂತನೆ ಮಾಡಬೇಕು. ನಂಜುಂಡಪ್ಪ ವರದಿ ನಮ್ಮ ಮುಂದಿದೆ. ಆ ವರದಿ ಅನುಷ್ಠಾನ ಮಾಡುವಾಗ ಹೆಚ್ಚುವರಿ ಅನುದಾನ ಕೊಡಬೇಕೆಂದು ಅವರು ಸಲಹೆ ಕೊಟ್ಟಿದ್ದನ್ನು ಯಡಿಯೂರಪ್ಪನವರು ತಮ್ಮ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ಕೊಟ್ಟಿದ್ದಾರೆ. ಅನುಷ್ಠಾನ ಅಂದರೆ ಅದು. ಆದರೆ ರಾಮಸ್ವಾಮಿಯವರ ವರದಿ ಎಷ್ಟು ಅನುಷ್ಠಾನವಾಯಿತು ಎಂದು ಚಿಂತಿಸೋಣ. ಹಾಗಾಗಿ ಆಯೋಗಗಳು ಬರುತ್ತವೆ ವರದಿ ಕೊಡುತ್ತವೆ, ಅವನ್ನು ಎಷ್ಟು ಅನುಷ್ಠಾನ ಮಾಡಲಾಯಿತೆಂಬುದು ಚಿಂತನೆ ಮಾಡೋಣ. ಇವತ್ತು ಕೇಂದ್ರ ಸರ್ಕಾರವೂ ಆಡಳಿತ ವೆಚ್ಚ ತಗ್ಗಿಸುವ ಬಗ್ಗೆ ಚಿಂತಿಸುತ್ತಿದ್ದು ಇದರ ಬಗ್ಗೆ ವರದಿ ಕೊಡಲು ವೀರಪ್ಪ ಮೊಯ್ಲಿ ಆಯೋಗವನ್ನು ನೇಮಿಸಿದೆ. ಹಾರನಹಳ್ಳಿ ರಾಮಸ್ವಾಮಿ ವರದಿಯನ್ನೂ ಸಮಗ್ರವಾಗಿ ಕೂಲಂಕೂಷವಾಗಿ ಚಿಂತನೆ ಮಾಡೋಣ. ಇವತ್ತು ಒಂದು ಒಳ್ಳೆಯ ಸಂಗತಿ ಅಂದರೆ ಎಲ್ಲ ಹಿರಿಕಿರಿಯ ಸದಸ್ಯರೂ ನಾಡಿನ ಆಡಳಿತ ವ್ಯವಸ್ಥೆ ಹೇಗಿದೆ ಎಂದ ಚಿತ್ರಣ ಕೊಟ್ಟಿದ್ದಾರೆ. ನಾವು ಅಲ್ಲಿರಬಹುದು, ಇಲ್ಲಿರಬಹುದು, ನಾವೂನೂ ಜನಪ್ರತಿನಿಧಿಗಳೇ. ಆದರೆ ದಿನ ನಿತ್ಯ ಒಬ್ಬ ಗ್ರಾಮಲೆಕ್ಕಿಗನಿಂದ ಒಬ್ಬ ಶಿರಸ್ತೇದಾರನಿಂದ ಒಬ್ಬ ತಹಸೀಲ್ದಾರ್ ಜಿಲ್ಲಾಧಿಕಾರಿಗಳಿಂದ ಏನೇನು ತೊಂದರೆಗಳಾಗುತ್ತಿದೆ ಎಂದು ಮನಬಿಚ್ಚಿ ಇಲ್ಲಿ ಹೇಳಿದ್ದೀರಿ. ಅದನ್ನು ನಾನೂ ಒಪ್ಪುತ್ತೇನೆ. ಎಲ್ಲ ಸರಿಯಾಗಿದೆ ಅನ್ನುವ ವ್ಯವಸ್ಥೆಯೊಳಗೆ ನಾವಿಲ್ಲ. ಈ ವ್ಯವಸ್ಥೆ ಕಳೆದ ಹಲವಾರು ವರ್ಷಗಳಿಂದ ಬಂದಿರುವುದು. ಅದನ್ನು ಹೇಗೆ ಸುಧಾರಣೆ ಮಾಡಬೇಕು ಎಂಬುದನ್ನು ನಾವೆಲ್ಲರೂ ಕೂಡಿ ವಿಚಾರ ಮಾಡಬೇಕಾಗಿದೆ. ಇವತ್ತು ಕಡತ ಎಲ್ಲಿಂದ ಬರುತ್ತವೆ, ಹೇಗೆ ವಾಪಸ್ ಬರುತ್ತವೆ, ಒಬ್ಬ ಅಧಿಕಾರಿ ಮನಸ್ಸು ಮಾಡಿದರೆ 6

ತಿಂಗಳಾದರೂ ಆ ಕಡತಕ್ಕೆ ವಿರೋಧ ಮಾಡಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ನಾವು ಏನು ಮಾಡಬೇಕಾಗಿದೆ ಎಂದು ವಿಚಾರ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ತಾವುಗಳು ಹಲವಾರು ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ. ಭೂಮಿ ಯೋಜನೆ ಅಂತ ತಂದರು, ಮಾನ್ಯ ಸೋಮಶೇಖರ್ ಕಂದಾಯ ಸಚಿವರಾಗಿದ್ದಾಗ. ಗ್ರಾಮಲೆಕ್ಕಿಗರಲ್ಲಿ ಮೊದಲು ಪಹಣಿ ಪತ್ರಿಕೆಗಾಗಿ ಉತಾರಗಳ ಪ್ರತಿಗಳನ್ನು ತೆಗೆದುಕೊಳ್ಳುತ್ತಿದ್ದೆವು. ಆ ಪ್ರತಿ ಕೊಡಲು ಆ ತಲಾಟಿ ಒಂದು ತಿಂಗಳು ಎರಡು ತಿಂಗಳು ಸತಾಯಿಸುತ್ತಿದ್ದ. ಕಡೆಗೆ ಅವನಿಗಿಷ್ಟು ಹಣ ಕೊಟ್ಟರೆ ಪ್ರತಿ ಕೊಡುತ್ತಿದ್ದ. ಈ ತರಹದ ಲಂಚದ ಕುರಿತೇ **'ತಲಾಟಿ ಮಾಡಿದ ಗಲಾಟೆ'** ಅಂತ ನಾಟಕವೊಂದು ಬಂತು. ಅಂದರೆ ಒಬ್ಬ ತಲಾಟಿ ಮನಸ್ಸು ಮಾಡಿದರೆ ಎಷ್ಟು ಗಲಾಟೆ ಮಾಡಬಹುದು ಅಂತ, ಆಸ್ತಿ ವ್ಯವಹಾರದಲ್ಲಿ ಯಾವ ರೀತಿ ಜಗಳ ಹಚ್ಚಬಹುದು ಅಂತ. ಇದೆಲ್ಲ ನಮಗೆ ಗೊತ್ತಿರುವಂಥದೇ. ಇದನ್ನು ತಪ್ಪಿಸಲೆಂದೇ ಭೂಮಿ ಅಂತ ಯೋಜನೆ ಬಂತು. ಪಹಣಿಪತ್ರಿಕೆಗಳನ್ನು ಕಂಪ್ಯೂಟರ್ ಮೂಲಕ ಕೊಡುವ ವ್ಯವಸ್ಥೆ. ಆಗ ಗ್ರಾಮ ಲೆಕ್ಕಿಗನ ಪಾತ್ರ ಹೋಯಿತು. ಅದನ್ನು ನಮ್ಮ ಈ ಸರ್ಕಾರ ಬಂದ ಮೇಲೆ 800 ಹೋಬಳಿ ಕೇಂದ್ರಗಳಿಗೆ ವಿಸ್ತರಣೆ ಮಾಡಿದ್ದೇವೆ. ಹಾಗೇನೆ ಜಾತಿಪತ್ರ ತಹಸೀಲ್ದಾರ್ ಕಛೇರಿಗೆ ಹೋದರೆ ಸಿಗುವುದಿಲ್ಲ ಅಂತ ತಾವು ಹೇಳಿದಿರಿ. ಜನನ ಪತ್ರ, ಆದಾಯಪತ್ರಗಳೂ ಸಿಗುವುದಿಲ್ಲ. ಅದಕ್ಕಾಗಿ ನೆಮ್ಮದಿ ಯೋಜನೆಯಲ್ಲಿ ಇವೆಲ್ಲವನ್ನೂ ಅಳವಡಿಕೆ ಮಾಡುತ್ತಿದ್ದೇವೆ. ಒಬ್ಬ ಜನಸಾಮಾನ್ಯನಿಗೆ ತಕ್ಷಣವೇ ಇವೆಲ್ಲ ಕಂಪ್ಯೂಟರ್ ಮೂಲಕ ಸಿಗುವ ವ್ಯವಸ್ಥೆ. ಹೀಗೆ ಹಂತಹಂತವಾಗಿ ಇದನ್ನು ಹೇಗೆ ಸುಧಾರಣೆ ಮಾಡಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಕೆಳಗಿನ ಹಂತದಲ್ಲಿ ಏನು ಭ್ರಷ್ಟಾಚಾರವಿದೆ, ಜನರಿಗೆ ಏನು ತೊಂದರೆಯಾಗುತ್ತದೆ ಅದನ್ನು ಸರಿಪಡಿಸಲು ನಾವು ಚಿಂತನೆ ಮಾಡುತ್ತಿದ್ದೇವೆ. ಇದು ಕೇವಲ ಸರ್ಕಾರದಿಂದಲೇ ಆಗುವುದಿಲ್ಲ. ಎಲ್ಲರೂ ಕೂಡಿ ಮಾಡಬೇಕಾಗಿದೆ. ಅದೇ ತಹಸೀಲ್ದಾರ, ಅದೇ ಗ್ರಾಮಲೆಕ್ಕಿಗ ಅಧಿಕಾರಿಗಳಿರುತ್ತಾರೆ, ಅಂಥ ವ್ಯವಸ್ಥೆಯಲ್ಲಿ ನಾವು ಹೋಗುತ್ತಿದ್ದೇವೆ. ಇವತ್ತು ವಿಭಾಗೀಯ ಆಯುಕ್ತರ ಪ್ರಶ್ನೆ ಯಾಕೆ ಬಂತು? ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಿದ್ದಾಗ ಈ ಒಂದು ಅಧಿಸೂಚನೆಯಲ್ಲಿ clear cut ಆಗಿ ಹೇಳಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಆಡಳಿತಾತ್ಮಕ ನಿಯಂತ್ರಣವು ಹತೋಟಿ ತಪ್ಪುತ್ತಿದ್ದು ಅಪಾಯಕಾರಿ ಹಂತ ತಲುಪಿದೆ. ಮಾನ್ಯ ರಮೇಶ್‌ಕುಮಾರ್ ಕೇಳಿದರು, cause of action ಏನು ಅಂತ, ಇದೇ cause of action ವಿಭಾಗ ಮಟ್ಟದಲ್ಲಿ ನಿಯಂತ್ರಣಾಧಿಕಾರಿಗಳಾಗಿದ್ದ ವಿಭಾಗಾಧಿಕಾರಿಗಳು ವಿವಿಧ ನಿಯಮ ಅಧಿನಿಯಮಗಳಲ್ಲಿ ನ್ಯಾಯಿಕ ಸ್ವರೂಪದ ಪ್ರಾಧಿಕಾರಿಗಳಾಗಿದ್ದರು. ಈಗ ಈ ಕಾರ್ಯಗಳು ವಿಶೇಷವಾಗಿ ಬಾಧಿತವಾಗಿದ್ದು ಅತಿ ಹೆಚ್ಚಿನ ಪ್ರಕರಣಗಳು ಬಾಕಿ ಉಳಿದಿವೆ. 2005 ರ

ಆಗಸ್ಟನಲ್ಲಿ ಈ ಅಭಿಪ್ರಾಯಕ್ಕೆ ಆ ಸರ್ಕಾರ ಬಂತು. ವಿಭಾಗಾಧಿಕಾರಿಗಳು ಈ ಹಿಂದೆ ಸಂವಿಧಾನಾತ್ಮಕವಾಗಿ ಮೇಲ್ಮನವಿ ಮತ್ತು ಪುನರ್ಪರಿಶೀಲನೆ ನಿಯಮದಡಿ ಅಧಿಕಾರವನ್ನು ಚಲಾಯಿಸುತ್ತಿದ್ದರು.

ಶ್ರೀ ಜಯಪ್ರಕಾಶ್ ಹೆಗ್ಡೆ :– ಅಪೀಲು ಅವಕಾಶ ಇವರಿಗಿಟ್ಟಿದ್ದೀರಲ್ಲ, ಜಿಲ್ಲಾಧಿಕಾರಿ ಕಡತ ಕ್ಲಿಯರ್ ಮಾಡಿದ ಮೇಲೆ ತಾನೆ ವಿಭಾಗಾಧಿಕಾರಿಗೆ ಹೋಗುವುದು. ಜಿಲ್ಲಾಧಿಕಾರಿ ಮುಂದೆ ಎಷ್ಟು ಕಡತ ಪೆಂಡಿಂಗ್ ಇದೆ ಅದನ್ನು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇದೆಲ್ಲ ಹುನ್ನಾರ, ಆ ಆಫೀಸ್‌ನ್ನು ರದ್ದು ಮಾಡಿದಾಗ ಅವರ ಅಧಿಕಾರವನ್ನು ಯಾಕೆ ಡೆಲಿಗೇಟ್ ಮಾಡಲಿಲ್ಲ?

ಶ್ರೀ ಜಗದೀಶ್‌ಶೆಟ್ಟರ್ :– ಶ್ರೀ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಿದ್ದಾಗ delegation of powers ಮಾಡಿದ್ದರು, ಆದರೆ ಅವರಿಂದ effective rule ಆಗಲಿಲ್ಲ. ಸಾರ್ವಜನಿಕರಿಗೆ ತೊಂದರೆಗುವುದು ತಪ್ಪಿಲಿಲ್ಲ. Appeals and Revisions ಹಾಗೆ ನೆನೆಗುದಿಗೆ ಬಿದ್ದವು. ಜಿಲ್ಲಾಧಿಕಾರಿಯ ಆರ್ಡರ್‌ನ್ನು ನೇರವಾಗಿ KAT ಯಲ್ಲಿ ಅಪೀಲ್ ಮಾಡುವಂಥದು, ಹೀಗಾಗಿ ಮತ್ತೆ ಅಲ್ಲಿ ಅಂತರ ಬೆಳೆಯಲು ಚಾಲೂ ಆಯಿತು. ಹತ್ತಾರು ಸಾವಿರ ಕೇಸ್ ಪೆಂಡಿಂಗ್ ಬಿದ್ದವು. ಅದರಿಂದ ಸಾರ್ವಜನಿಕ ತೊಂದರೆ ಚಾಲೂ ಆಯಿತು. ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನವಾಗಿದೆಯೇ ಎಂದು ನೋಡುವುದು ತಪ್ಪಿತು. ಇವನ್ನೆಲ್ಲ ಸಮಾಲೋಚನೆ ಮಾಡಿಕೊಂಡು ಅವತ್ತು ಧರ್ಮಸಿಂಗ್‌ರು ಮುಖ್ಯಮಂತ್ರಿ, ಮಲ್ಲಿಕಾರ್ಜುನ ಖರ್ಗೆ ಸಂಪುಟಸಚಿವರು, ಸಿದ್ಧರಾಮಯ್ಯ ಉಪಮುಖ್ಯಮಂತ್ರಿಗಳು, ಶ್ರೀನಿವಾಸಗೌಡರು ಸಂಪುಟಸಚಿವರು. ಇವರೆಲ್ಲ ಅನುಭವಿಗಳೇ. ನಾವು ಕಂದಾಯ ಮಂತ್ರಿಯಾಗಿ ಕೇವಲ ಒಂದು ವರ್ಷದ ಅನುಭವ. ಧರ್ಮಸಿಂಗ್ ಖರ್ಗೆಯವರದು 20–30 ವರ್ಷದ ಸನುಭವ. ಅದರ ಹಿನ್ನೆಲೆಯಲ್ಲಿ ಈ ಹುದ್ದೆ ರದ್ದುಪಡಿಸಿದವರೇ ಅವರು. ಆಮೇಲೆ ಅನ್ನಿಸಿತು, ಎಲ್ಲ ಹುದ್ದೆ ರದ್ದು ಮಾಡಿದ್ದು ಸರಿಯಾಗಲಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ಸ್ವಲ್ಪ ತೊಂದರೆಯಾಗುತ್ತಿದೆ ಅದಕ್ಕಾಗಿ ಈ ಹುದ್ದೆಗಳನ್ನು ಮತ್ತೆ creat ಮಾಡಬೇಕೆಂದು ಆ ಅನುಭವೀ ಸಚಿವರು, ಅನುಭವೀ ಸರ್ಕಾರ ಅವತ್ತು ನಿರ್ಣಯ ತಗೊಂಡಿತು. ಇವರೇ ಆ ಕಡೆಗೆ ಹೋದಾಗ ಇದನ್ನು ವಿರೋಧ ಮಾಡಬೇಕು ಅಂತಿಲ್ಲ, ಈ ಕಡೆ ಇದ್ದಾಗ support ಮಾಡುವುದು. ಅದಕ್ಕಾಗೇ ಖರ್ಗೆಯವರು ಬಹಳ ಅನುಭವವಿರುವುದರಿಂದ ಬಹಳ ಸೂಕ್ಷ್ಮವಾಗಿ ಹೇಳಿದರು. ಅಪೀಲಿಗೆ ಮತ್ತೆ ಅವಕಾಶವಿಲ್ಲ, ಅವರಿಗೇ ಪೂರ್ಣ ಅಧಿಕಾರ ಕೊಟ್ಟು ಬಿಡಿ ಅಂದರು. ಒಳ್ಳೆಯ ಸಲಹೆ ಅದು. ಅಂದರೆ ಒಂದಾದ ಮೇಲೆ ಒಂದು ಅಂತ ಲೆವೆಲ್ಸ್ ಇರುವುದೆಲ್ಲ ತಪ್ಪಬೇಕು ಎಂಬ ಸಲಹೆ

ಖರ್ಗೆಯವರದು. ಯಾಕೆಂದರೆ ಯಾವ ಹಿನ್ನೆಲೆಯಲ್ಲಿ ಈ ನಿರ್ಣಯ ತಗೊಳುತ್ತಿದ್ದೇವೆ ಅಂತ. ಒಂದು ಸಲ A.C.,D.C. ಯಿಂದ Regional commissioner ಗೆ ಹೋದ ಮೇಲೆ ಅದೇ ಅಂತಿಮ ಅಂತ ಸಲಹೆ ಅವರದು, ಅದು ಉತ್ತಮ ಸಲಹೆ, ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ನಾಳೆ ಆ ಅಧಿಕಾರ ಕೊಡುವುದನ್ನೂ ವಿಚಾರ ಮಾಡಬಹುದು. ಖರ್ಗೆಯವರು ಹೇಳಿದರು, ಭೂಸುಧಾರಣೆ ಕಾಯಿದೆ ಪ್ರಕಾರ Land Tribunals order is final. ಹಿಂದೆ 94 ರಲ್ಲಿ ಜನತಾದಳ ಸರ್ಕಾರವಿದ್ದಾಗ ಅದಕ್ಕೂ ಮುಂಚೆ ಕಾಂಗ್ರೆಸ್ ಸರ್ಕಾರವಿದ್ದಾಗ 1989–94 ಸಮಯದಲ್ಲಿ, ನಾನು ವಕೀಲನಾಗಿ ಕೆಲಸ ಮಾಡುತ್ತಿದ್ದೆ. Land Reforms Appellate Tribunal ಅಂತ ಮಾಡಿದರು.

(2:00 ಗಂಟೆ)

1989–94 period ನಲ್ಲಿ Land Tribunal ನಲ್ಲಿ ಏನು ನಿರ್ಣಯಗಳಾಗುತ್ತವೆ, ಆಗ ಅದೇ ಅಂತಿಮ ಎನ್ನುವುದಾಗಿತ್ತು. ಆಗ ಅದರ ಮೇಲೆ ಒಂದು ಅಪೀಲು ಮಾಡಬೇಕೆಂಬ ಒಂದು provision ಮಾಡಿದರು. 1989 ನಲ್ಲಿ ಅವತ್ತಿನ ಸರ್ಕಾರ ಮಾಡಿತ್ತು. ಆಗ ನನಗೆ ಗೊತ್ತಿದೆ. ಆ Appellate Tribunal ಮುಂದೆ ನಾನು ಹೋಗಿ practice ಮಾಡಿದ್ದೇನೆ. ಮೊದಲು Land Tribunal ಗೆ Final authority ಎಂದು ಇತ್ತು. ಆದರೆ, ಮುಂದೆ ಸರ್ಕಾರದಲ್ಲಿ ಒಂದು ಚಿಂತನೆ ನಡೆಯಿತು. Land Tribunal ನಲ್ಲಿ case dispose ಆದ ಮೇಲೆ ಅಲ್ಲಿ ಕೆಲವರಿಗೆ ಅನ್ಯಾಯವಾಗುತ್ತಿದೆಯೆಂದು ತಿಳಿದು ಬಂದಾಗ,. . . tenants ಗೆ ಅನ್ಯಾಯವಾಗುತ್ತಿದೆ, ಮತ್ತೊಬ್ಬರಿಗೆ ಅನ್ಯಾಯವಾಗುತ್ತಿದೆ ಎಂಬ ಕೂಗು ಕೇಳಿ ಬಂದಾಗ, ಅಲ್ಲಿದ್ದಂತಹ ಒಬ್ಬ ಬಡ tenant ನಾಳೆ High Court ಗೆ ಹೋಗಿ ಅಪೀಲು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ದೃಷ್ಟಿಕೋನದಿಂದ ಅವತ್ತಿನ ಸರ್ಕಾರ ಒಂದು ಪ್ರಾಮಾಣಿಕ ಚಿಂತನೆ ಮಾಡಿ Karnataka Land Reforms Appellate Tribunal ಎಂದು ರಚನೆ ಮಾಡಿತು. District level ನಲ್ಲಿ Appellate Authority ಎಂದು ಮಾಡಿದರು. ಅಲ್ಲಿ ನಾನು ಸಾಕಷ್ಟು ಕೇಸುಗಳನ್ನು ನಡೆಸಿದೆ. ಆಮೇಲೆ ಅದು ಪ್ರ್ಯಾಕ್ಟಿಕಲ್ ಆಗಲಿಲ್ಲ. ಮತ್ತು ಅಲ್ಲಿ ಏನು ನಿರ್ಣಯ ಕೊಟ್ಟರು, ನಿರ್ಣಯ ಕೊಟ್ಟ ಮೇಲೆ ಮತ್ತೆ again High Court Writ Petition ಹೋದರು. ಅದು ಮತ್ತೆ third round ಚಾಲೂ ಆಯಿತು. ಹೀಗಾಗಿ, ಸರ್ಕಾರದವರು ಮತ್ತೆ ವಿಚಾರ ಮಾಡಿದರು. ಇದು ಸರಿಯಲ್ಲ, ಅದಕ್ಕೋಸ್ಕರ, ಇದು ಬೇಡ, ಪ್ರಯೋಜನವಾಗುತ್ತಿಲ್ಲವೆಂದು ಮತ್ತೆ ಅದನ್ನು ರದ್ದುಗೊಳಿಸಿದರು. Land Tribunal ಕೊಡುವ ತೀರ್ಮಾನವೇ ಅಂತಿ. ಮತ್ತೆ ಯಾರಿಗಾದರೂ ಅನ್ಯಾಯವಾಗಿದ್ದರೆ, Writ Petition ಮುಖಾಂತರ ಹೈಕೋರ್ಟ್‌ಗೆ ಹೋಗುವಂಥಾದ್ದು

ಚಾಲೂ ಆಯಿತು. ಅಂದರೆ, ಇವತ್ತು Land Tribunal ನಲ್ಲಿ ಯಾವ ಕೇಸ್ ತೀರ್ಮಾನವಾಗಿರುತ್ತದೋ, ಅದು ಫೈನಲ್ ಅಂದಾಗಲೂ ಸಹ ಇವತ್ತು ಸಾವಿರಾರು ಕೇಸ್‌ಗಳು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಹೈಕೋರ್ಟ್‌ನವರು ಏನು ಮಾಡುತ್ತಾರೆಂದರೆ, ತಮಗೆ ಅಧಿಕಾರವಿಲ್ಲವೆಂಬುದು ಅವರಿಗೆ ಗೊತ್ತಿದೆ. Land Tribunal's order is final.

Sri K.R. RAMESH KUMAR :- An appeal is entertained by was of a writ of Mandamus in High Court against the decision of the Land Tribunal not on the merits, on other issues. The decision of the Land Tribunal is final and it is unique. Through out the country Land Tribunals, 1972 ರಲ್ಲಿ ನಾವು Land Tribunal ಏನು ಮಾಡಿದ್ದೇವೆ, it is unique. That was the first time.

ಶ್ರೀ ಜಗದೀಶ್ ಶೆಟ್ಟರ್ :- ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅಲ್ಲಿ ಕೊಟ್ಟಿದ್ದೇ ಸರಿ ಎಂದಾಗ ಮಾತ್ರ ಅದು ಫೈನಲ್ ಆಗುತ್ತದೆ. ಇಲ್ಲದಿದ್ದರೆ it is remanded back to.....

ಶ್ರೀ ಶಿವಾನಂದ ಎಸ್. ಪಾಟೀಲ್ :- ಅಲ್ಲಿಯಾದರೆ, second time, third time remand ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಕೇಸ್‌ಗಳು 4-4 ಸಲ, 5-5 ಸಲ remind ಆಗಿವೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮೊದಲನೇ ಟ್ರಿಬ್ಯೂನಲ್‌ನವರು ಏನು ಆರ್ಡರ್ ಮಾಡಿದ್ದರು, ಅದನ್ನೇ ಎರಡನೇ ಟ್ರಿಬ್ಯೂನಲ್‌ರವರು ರೀವರ್ಸ್ ಮಾಡುತ್ತಾರೆ!

ಶ್ರೀ ಜಗದೀಶ್ ಶೆಟ್ಟರ್ :- 4 ಸಲ, 5 ಸಲ remind ಆಗಿವೆ. ಏಕೆ remind ಆದವು? High Court ನಲ್ಲಿರುವವರಿಗೆ ಅದನ್ನು merit ಮೇಲೆ decide ಮಾಡುವುದಕ್ಕಾಗುವುದಿಲ್ಲ. Statement ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, hearing ಮಾಡುವುದಕ್ಕಾಗುವುದಿಲ್ಲ, ಸಾಕ್ಷಿ-ಪುರಾವೆ ಸರಿ ಇದೆಯೋ, ಇಲ್ಲವೋ, hearing opportunity ಕೊಟ್ಟಿದ್ದಾರೆಯೇ ಇಲ್ಲವೇ? remind ಆಗಿರುವ ಬಹಳಷ್ಟು ಕೇಸ್‌ನಲ್ಲಿ ನಾನು ನೋಡಿದ್ದೇನೆ. Otherside ನಲ್ಲಿ hearing ಗೆ opportunity ಕೊಟ್ಟಿಲ್ಲ. speaking order ಸಹ ಇಲ್ಲ. ಈ ಕಾರಣಗಳೆಲ್ಲವನ್ನು ಕೊಟ್ಟು remand ಮಾಡಿದ್ದಾರೆ. ಹೀಗಾಗಿ ನಾವು Land Reforms Act ಪ್ರಕಾರ Land Tribunal Order is Final ಎಂದು ಹೈಕೋರ್ಟ್ ಗೆ ಕೇಸ್ ಹೋಗುತ್ತದೆ, remind ಆಗುತ್ತದೆ, ಪರ್ಸೆಂಟೇಜ್

ನೋಡಿ. ಇವತ್ತಿಗೂ ಲಕ್ಷಾಂತರ ಕೇಸ್‌ಗಳಿವೆ. ಬಹಳಷ್ಟು ಕೇಸ್‌ಗಳು ಇನ್ನೂ ಪೆಂಡಿಂಗ್ ಇವೆ. remand ಆಗುವುದಿಲ್ಲ. ಹೀಗಾಗಿ, ವ್ಯವಸ್ಥೆ ಹೀಗಿದೆ. Regional Commissioner ಹುದ್ದೆ ಬಗ್ಗೆ ಫೈನಲ್ ಎಂದು ನಾವು ಅವರಿಗೆ power ಕೊಡೋಣ. ನಿಮ್ಮ ಕಡೆ ಏನು revision pettion file ಆಗುತ್ತವೆ, appeal file ಆಗುತ್ತವೆ, ನೀವು ಏನು ತೀರ್ಮ ಕೊಡುತ್ತೀರಿ, that is final ಎಂದರು. ಮತ್ತೆ writ petition ನಲ್ಲಿ scope ಇದೆ. ಹೈಕೋರ್ಟ್‌ಗೆ ಅಪೀಲು ಹೋಗಬಹುದು. ಇದು ಎಲ್ಲದಕ್ಕೂ CPC 151 ಅನ್ನು apply ಮಾಡಿದ ಹಾಗೆ. ಆ ರೀತಿಯಲ್ಲಿ ಹೈಕೋರ್ಟ್‌ಗೆ ಇವತ್ತು power ಇದ್ದೇ ಇದೆ. ಹೀಗಾಗಿ ನಾನು ಹೇಳುತ್ತಿದ್ದೇನೆ. ಹಿಂದಿನ ಸರ್ಕಾರದಲ್ಲಿದ್ದಂತಹ ಅನುಭವಿ ಮಂತ್ರಿಗಳೆಲ್ಲರೂ ವಿಚಾರ ಮಾಡಿ, ಇದು ಅವಶ್ಯಕತೆ ಇದೆ ಎನ್ನುವಂಥದ್ದನ್ನು ಆಲೋಚಿಸಿ ಮಾಡಿದ್ದಾರೆ. ಇದು ನಾವೂ ವಿಚಾರ ಮಾಡಿದ್ದೇವೆ. ಇಲ್ಲ, ಹಿಂದಿನ ಸರ್ಕಾರ ಏನೋ ಮಾಡಿದೆ, ನಾವು ತಪ್ಪು ಮಾಡಿದ್ದರೆ, ನೀವು ಅದನ್ನೇ ಮುಂದುವರಿಸಬೇಕೇ ಎನ್ನುವಂತಹ ಪ್ರಶ್ನೆ ಕೇಳುತ್ತಾರೆ. ಇದು ಯಾವಾಗಲೂ ನಡೆಯುಂಥದ್ದು. ನಾವು ತಪ್ಪು ಮಾಡಿದ್ದೇವೆಂದು ಈಗ ಅವರು ಒಪ್ಪಿಕೊಳ್ಳುತ್ತಾರೆ. ಅವತ್ತು ತಪ್ಪು ಮಾಡಿದೆವು ಎಂದು ಅವರಿಗೆ ಅನಿಸಿರಲಿಲ್ಲ. ಅದಕ್ಕೆ ನೀವೇನೂ ತಪ್ಪು ಮಾಡಿಲ್ಲ, ನೀವು ಸರಿಯಾಗಿಯೇ ಮಾಡಿದ್ದೀರಿ. ಶ್ರೀನಿವಾಸಗೌಡರವರೆ, ನೀವು ತಪ್ಪು ಮಾಡಿದ್ದೀರೆಂದು ನಾವು ಹೇಳುವುದೇ ಇಲ್ಲ. ನೀವು ಸರಿಯಾದ ನಿರ್ಣಯವನ್ನೇ ಕೈಗೊಂಡಿದ್ದೀರಿ. ನಿಮ್ಮ administration convenience ಸಲುವಾಗಿ ಮಾಡಿದ್ದೀರಿ. ಇದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಅದಕ್ಕೋಸ್ಕರ, ಇವತ್ತು ನಾವು....

ಶ್ರೀ ಎಸ್.ಎಸ್. ಪಾಟೀಲ್ :- ನಾವು ಮಾತನಾಡುವಾಗ Law Minister ಇರಲಿಲ್ಲ. ಹಿಂದೆ ಅವರೇ ಮಾಡಿದ್ದರು. Law Minister ರವರೇ ಇದನ್ನು ರದ್ದುಗೊಳಿಸಿದ್ದರು. ಹಿಂದಿನ ಸರ್ಕಾರದವರೇ ರದ್ದುಗೊಳಿಸಿದ್ದು. Cabinet Sub-Committee ಯಲ್ಲಿ ಅವರೇ ಇದ್ದರು.

ಶ್ರೀ ಜಗದೀಶ್ ಶೆಟ್ಟರ್ :- ಅದರ ಸಲುವಾಗಿಯೇ ನಾನು ಹೇಳುತ್ತಿರುವುದು. ಇವತ್ತಿನ ಪರಿಸ್ಥಿತಿ ನೋಡಿಕೊಂಡು, ಇವತ್ತಿನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೂ ವಿಚಾರ ಮಾಡಿಕೊಂಡು, ಅವಶ್ಯಕತೆ ಇದೆಯೆಂದು ತಿಳಿದುಕೊಂಡು, ನಾವು ಈ ಬಿಲ್ ಅನ್ನು ತೆಗೆದುಕೊಂಡು ಬಂದಿದ್ದೇವೆ. ಇಲ್ಲ, ಹಿಂದಿನ ಸರ್ಕಾರದಲ್ಲಿ ಆಗಿದೆಯೆಂದು ನಾವು ಈ ಬಿಲ್ ಅನ್ನು ತಂದಿಲ್ಲ. ಹಿಂದಿನ ಸರ್ಕಾರದವರು ಮಾಡಿದ್ದಾರೆ. ಅದು ಇವತ್ತಿನ ವ್ಯವಸ್ಥೆಗೆ ಸರಿಯಾಗಿದೆಯೆಂದು ಅನಿಸಿದ್ದರಿಂದ ಅದನ್ನು ನಾವು ತಂದಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಜಗದೀಶ್ ಶೆಟ್ಟರ್‌ರವರೆ, ತಾವು ಸಾಕಷ್ಟು ಪರಿಣಿತಿಯಿಂದ ಮಾತನಾಡುತ್ತಿದ್ದೀರಿ. ಸುಮಾರು ಹೊತ್ತು ಚರ್ಚೆ ಮಾಡಿದ್ದೇವೆ. ಇದು ಅನಿವಾರ್ಯವೇ? ಜನರ ದಿನನಿತ್ಯದ ಬದುಕಿಗೆ ಸಂಬಂಧಿಸಿದಂತೆ ಇದು ಆಗದೇ ಹೋದರೆ, ಎಲ್ಲವೂ cripple ಆಗಿಬಿಡುತ್ತದೆ ಎನ್ನುವಂಥಾದ್ದೇ? ಇದನ್ನು ಮಾಡುವುದರಿಂದ ಬಹಳ ದೊಡ್ಡ ಸುಧಾರಣೆಯಾಗುತ್ತದೆಯೇ? For argument sake, " ನಾವು ಮಾಡುತ್ತೇವೆ. We will carry, we have the majority" ಎನ್ನುವುದಾದರೆ, We have the satisfaction of leaving our impressions for entry into record. ನಾನು ತಮಗೆ ಏನು ಅಪೀಲು ಮಾಡಿದೆ ಎಂದರೆ, rise above these considerations. ಎಲ್ಲರೂ ತಪ್ಪು ಮಾಡಿರಬಹುದು. you please put yourself in our position. ಹೊರಗಡೆ ಇರುವ ಜನರು ಯಾರಿದ್ದಾರೆ, ಅವರ representatives ಆಗಿ ನಾವು ಇಲ್ಲಿಗೆ ಬಂದಿದ್ದೇವೆ. ಅವರ trust ಗೆ ನಾವು custodians ಆಗಿದ್ದೇವೆ. ಈ wasteful expenditure ಅನ್ನು avoid ಮಾಡೋಣ. It is not necessary. ಇದೇನೂ ಅನಿವಾರ್ಯವಲ್ಲ ಎನ್ನತಕ್ಕಂಥ ಮಾತನ್ನು ಹೇಳಿದೆವು. ಯಾವಾಗಲೂ ಕೂಡ ಈ advisory slips ಬರುತ್ತದಲ್ಲ, ತಮಗೊಂದು ಉದಾಹರಣೆ ಹೇಳುತ್ತೇನೆ ಕೇಳಿ. ಯಡಿಯೂರಪ್ಪನವರೆ, ಗುಂಡೂರಾಯರು ಅಲ್ಲಿ ಕುಳಿತಿದ್ದರು. ರಾಜ್ಯದಲ್ಲಿ ಎಲ್ಲಾ ಕಡೆಗೂ Law and Order problem start ಆಯಿತು. ಗೋಲಿಬಾರ್ ಆಗಿ ದಿನ ಜನ ಸಾಯುವುದನ್ನು ನೋಡಿ ಗುಂಡೂರಾಯರಿಗೆ ಸ್ವಲ್ಪ ಇರಿಸು-ಮುರಿಸಾಯಿತು. ಅವರಿಗೆ ಹಿತೈಷಿಗಳೊಬ್ಬರು ಚೀಟಿಯೊಂದನ್ನು ಕಳುಹಿಸಿದರು. ತಮಿಳುನಾಡಿನಲ್ಲಿ ಎಂ.ಜಿ. ರಾಮಚಂದ್ರನ್‌ರವರು ಗೋಲಿಬಾರ್ ಮಾಡಿ 12 ಜನ ಸತ್ತು ಹೋದರು. ಅದಾದ ಮೇಲೆ ಚುನಾವಣೆಯಾಯಿತು. ಎಂ.ಜಿ. ರಾಮಚಂದ್ರನ್‌ರವರಿಗೆ 24 ಸೀಟುಗಳು ಹೆಚ್ಚಿಗೆ ಬಂತೆಂದು ಚೀಟಿಯೊಂದನ್ನು ಸ್ನೇಹಿತರು ಬರೆದು ಕಳುಹಿಸಿದರು. poor ma, Gundu Rao was mislead at that minute. ಅದನ್ನು ಹೇಳಿಬಿಟ್ಟರು. ಈ advise ಗಳು ಯಾವ್ಯಾವ ತರಹ ಬರುತ್ತವೆಂದು ಹೇಳುವುದಕ್ಕಾಗುವುದಿಲ್ಲ. ವಿಚಿತ್ರ ಮನುಷ್ಯರೆಲ್ಲರೂ ಇರುತ್ತಾರೆ. ತಮಗೆ ಏನು ಹೇಳುತ್ತೇನೆಂದರೆ, ಜನ ಪ್ರತಿನಿಧಿಗಳಾದ ನಾವು ಶಾಸನ ಮಾಡುತ್ತಿದ್ದೇವೆ. ಇದು ಅಗತ್ಯವಿದೆಯೇ? ಇಲ್ಲವೇ? ಇದು ಅನಿವಾರ್ಯವೇ? ಇದು ಆಗದೇ ಹೋದರೆ, ಏನಪ್ಪ, ನಾಳೆ ಜನರು ಹೇಗೆ ಬದುಕುವುದು? ಎನ್ನುವಂಥಾದ್ದೇನಾದರೂ ಆಗಿದ್ದರೆ, ಸಂತೋಷವಾಗಿ ಮಾಡಿ. ಇಲ್ಲ, ಚೀಟಿ ಬಂದಿದೆ, ನಾವು ಮಾಡಲೇಬೇಕು ಎಂದಿದ್ದರೆ, ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಆ ರೀತಿ ಇಲ್ಲ. ಇವತ್ತು ಯಾರೋ direction ಕೊಡುತ್ತಾರೆ, ಯಾರೋ ಹೇಳುತ್ತಾರೆಂದು ಹೇಳಿ ನಾವು ಇದನ್ನು ತರುತ್ತಿಲ್ಲ. ಇವತ್ತು

public convenience ಸಲುವಾಗಿಯೇ ನಾವು ಇದನ್ನು ತರುತ್ತಿದ್ದೇವೆ. ಇದರ ಅವಶ್ಯಕತೆ ಇದೆಯೆಂದೇ ಇದನ್ನು ನಾವು ತೆಗೆದುಕೊಂಡು ಬರುತ್ತಿದ್ದೇವೆ. ಹೀಗಾಗಿ, ಸನ್ಮಾನ್ಯ ಶಾಸಕರು ಏನು ಹೇಳಿದ್ದಾರೆ ಮತ್ತು ಉಳಿದ ಆಡಳಿತ ವ್ಯವಸ್ಥೆ ಬಗ್ಗೆ ಹಲವಾರು ಸಲಹೆ ಸೂಚನೆಗಳನ್ನು ಏನು ಕೊಟ್ಟಿದ್ದಾರೆ, ಅದನ್ನು ಸರ್ಕಾರದವರಾದ ನಾವು ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ. ಅದಕ್ಕಾಗಿ, ಈ ಬಿಲ್ ಅನ್ನು ನಾನು ಮಂಡನೆ ಮಾಡಿದ್ದೇನೆ. ಇದನ್ನು ನಾವು public convenience ಸಲುವಾಗಿಯೇ ಮಾಡುತ್ತಿದ್ದೇವೆ. ಅದಕ್ಕಾಗಿ ಈ ಬಿಲ್ ಅನ್ನು ಏನು ನಾವು ಮಂಡನೆ ಮಾಡಿದ್ದೇವೆ, ಅದನ್ನು ದಯವಿಟ್ಟು ಸದನ ಒಪ್ಪಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ಬಿಲ್ಲ ಅನ್ನು pilot ಮಾಡಿಬಿಟ್ಟೆ, ಅದು ಫೈನಲ್ ಎಂದು ಮಂತ್ರಿಗಳ ಭಾವನೆಗೆ ಹೋಗುವುದು ನಿಜವಾಗಿಯೂ ದುರದೃಷ್ಟಕರ. ಶಾಸನ ಸಭೆಯಲ್ಲಿ ಬಿಲ್ ಏಕೆ ಮಂಡಿಸುತ್ತೇವೆಂದರೆ, ಎಲ್ಲಾ ಭಾಗಗಳಿಂದ ಏನು ಮಾತನಾಡುತ್ತಾರೆ, ಅದರಿಂದ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ಮಂತ್ರಿಗಳು ಅರ್ಧಗಂಟೆ ಯೋಚನೆ ಮಾಡುವಷ್ಟು ಕೃಪೆಯನ್ನೂ, ರಾಜ್ಯದ ಹಿತದೃಷ್ಟಿಯನ್ನೂ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ, ಈ ಶಾಸನ ಸಭೆಗೆ ಏನು ಗೌರವ ಉಳಿಯುತ್ತದೆ? ನಾವೆಲ್ಲರೂ ಏಕೆ ಮಾತನಾಡಬೇಕು? ನಮಗೇನೂ ಅರ್ಥವಾಗುವುದಿಲ್ಲ. ಇದರಲ್ಲಿ ನಮ್ಮ ಸ್ವಂತದ್ದೇನೂ ಇಲ್ಲ. ಬಿಲ್ ಮಂಡಿಸುವುದರಲ್ಲೂ ನಿಮ್ಮ ಸ್ವಂತದ್ದೇನೂ ಇರುವುದಿಲ್ಲ. ನಿಮ್ಮ ಪಾರ್ಟಿಯವರೂ ಈ ಬಿಲ್ ತರುವ ಹಾಗಿಲ್ಲ, ವಿರೋಧ ಪಕ್ಷದವರೂ ನಿಮ್ಮ ಪರವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಏನು inconvenience ಆಗುತ್ತದೆ ಎನ್ನುವುದನ್ನು adopt ಮಾಡಿಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಈ ಬಿಲ್ಲ ಅನ್ನು pilot ಮಾಡುವುದಷ್ಟೇ. ಬಿಲ್ ಪಾಸ್ ಮಾಡುವುದು ನಾವು, ನೀವಲ್ಲ. Minister is not passing here the Bills. ನೀವು Bill ಅನ್ನು House ಗೆ introduce ಮಾಡುತ್ತೀರಿ. ಸ್ವಲ್ಪ ಅರ್ಥ ಮಾಡಿಕೊಳ್ಳಿ. ಎಲ್ಲಾ ಆಯಾಮದಿಂದಲೂ, ಎಲ್ಲಾ ಸ್ತರದಿಂದಲೂ ಅನುಭವಸ್ಥರು ಇಲ್ಲಿಗೆ ಬಂದಿರುತ್ತಾರೆ, ಅವರ ಅಭಿಪ್ರಾಯಗಳನ್ನು ಕೇಳಿ final ಮಾಡಬೇಕೆಂದು ಹೇಳುವುದಕ್ಕೆ Bill ಎಂದು ಕರೆಯುವುದು. ನಾವು ತೀರ್ಮಾನ ಮಾಡಿಕೊಂಡು ಬಂದಿದ್ದೇವೆ, ಯಾರೋ ಅಧಿಕಾರಿಗಳು ಚೀಟಿ ಕಳುಹಿಸುತ್ತಾರೆ, ನಾಳೆ office ಗೆ ಹೋದರೆ, "ಏನ್ ಸಾರ್, ನಿಮ್ಮ ಕೈಯಲ್ಲಿ Bill pass ಮಾಡಲಿಕ್ಕಾಗಲಿಲ್ಲ" ವೆಂದು ನನ್ನನ್ನು ವ್ಯಂಗ ಮಾಡುತ್ತಾರೆನ್ನುವ ದೃಷ್ಟಿಯಷ್ಟಕ್ಕೇ ಮಂತ್ರಿಗಿರಿ ಮಾಡುವುದಾದರೆ, very good.

ಶ್ರೀ ಜಗದೀಶ್ ಶೆಟ್ಟರ್ :– ಆ ರೀತಿ ಅರ್ಥ ಮಾಡಿಕೊಳ್ಳಬೇಡಿ. ನೀವು first day ಹೇಳಿದ್ದೀರಿ. ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– You are a Minister. ನಾನು yield ಆಗಿಲ್ಲ. ನೀವು ಅವರಿಗೆ ಹೇಳಿದ ಮಾತನ್ನು....

ಶ್ರೀ ಜಗದೀಶ್ ಶೆಟ್ಟರ್ :– ಯಾರೋ ಚೀಟಿ ಕಳುಹಿಸಿದ್ದಾರೆ, ಅವರು ಹೇಳಿದ್ದು ಕೇಳುತ್ತೀರೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ನಮಗೆ ಯಾವುದು ಸರಿ ಎನಿಸುತ್ತದೆಯೋ, ಅದನ್ನು ಮಾಡುತ್ತೇವೆ. ಅದಕ್ಕೋಸ್ಕರ, ಇದು ನಮಗೆ ಸರಿ ಎನಿಸಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು yield ಆಗಿಲ್ಲ. ನೀವು ಆಮೇಲೆ ಮಾತನಾಡಿ. ನಾನು ಕುಳಿತುಕೊಂಡ ಮೇಲೆ....

ಶ್ರೀ ಜಗದೀಶ್ ಶೆಟ್ಟರ್ :– ಈ ಬಿಲ್ ತಂದಿರುವುದು ನಮಗೆ ಸರಿ ಎನಿಸಿದೆ. I am a Revenue Minister.... ಸುಮ್ಮನೆ ಹಾಗೆ ಯಾರೋ ಚೀಟಿ ಕಳುಹಿಸುತ್ತಾರೆ.... ಎಂದು ಈ ರೀತಿ ಮಾತನಾಡುವುದು ಪದ್ಧತಿಯಲ್ಲ, ಸರಿಯಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ನಿಮ್ಮ ಅಭಿಪ್ರಾಯ ಏನೆಂಬುದನ್ನು ಚರ್ಚೆ ಮಾಡುವಾಗ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ನಮಗೆ ಅನಿಸಿದ್ದನ್ನು ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :– ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಎಲ್ಲ ಸೇರಿ ಒಟ್ಟಿಗೆ ಉತ್ತರ ಕೊಡಿ. ಮಾನ್ಯ ಅಧ್ಯಕ್ಷರೆ, ಬಹಳ ಕೆಟ್ಟ ಪ್ರಜಾಸತ್ತಾತ್ಮಕ ಕಾಲದಲ್ಲಿ ನಾವು ಬಂದು ನಿಂತಿದ್ದೇವೆ. ನಾವು reforms ಮಾಡುತ್ತೇವೆಂದು ರಾಜ್ಯದ ಮುಂದೆ ಹೇಳುತ್ತೇವೆ. ಅದಕ್ಕೆ Committee ಗಳನ್ನು ರಚಿಸುತ್ತೇವೆ. Committee ಗಳ ವರದಿಗಳನ್ನು ಶಾಸನಸಭೆಯಲ್ಲಿ ಮಂಡಿಸುವುದಿಲ್ಲ. Committee ಆಧಾರದ ಮೇಲೆ decisions ತೆಗೆದುಕೊಳ್ಳುತ್ತೇವೆ. ಡಾ॥ ನಂಜುಂಡಪ್ಪನವರ ವರದಿ ಹೇಳುತ್ತೇವೆ, ಡಿಸಿಷನ್ ತೆಗೆದುಕೊಳ್ಳುತ್ತೇವೆ. ನಂಜುಂಡಪ್ಪನವರು ಏನು ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ಮಾನ್ಯ ರಾಮಸ್ವಾಮಿಯವರ ವರದಿ ಬಗ್ಗೆ ಚರ್ಚೆ ಮಾಡಿದ್ದೀರಿ, ಡಿವಿಷನಲ್ ಕಮಿಷನರ್ ರದ್ದು ಮಾಡಿದ್ದೀರಿ. ಏನು ಚರ್ಚೆ ನಡೆದಿದೆ, ಅವರು ಏನು ಹೇಳಿದ್ದರು,

ಇವರು ಏನು ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಎರಡೆರಡೇ ವರ್ಷಕ್ಕೆ ರಿವರ್ಸ್ ಆಗುತ್ತಾ ಹೋಗುತ್ತದೆ ಇದು. ಒಂದು Reforms Committee ನೇಮಿಸಿದ್ದು ಏಕೆ, ಆ ಕಮಿಟಿ ಶಿಫಾರಸ್ಸುಗಳಲ್ಲಿ ಇದ್ದ ಸರಿ ತಪ್ಪು ಯಾರು ಚರ್ಚೆ ಮಾಡಿದಿರಿ, ಹಾಗಾದರೆ ಅವತ್ತು ಸರಿ ಎಂದು ಹೇಳಿದವರು, ಇವತ್ತು ಏಕೆ ತಪ್ಪು ಎಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಏನಾದರೂ ಮಾಹಿತಿ ಕೊಡಿ ದಯವಿಟ್ಟು. ಈ ಶಾಸನ ಸಭೆಯ ಸದಸ್ಯರಾದ ನಮಗೆ ಮಾಹಿತಿ ಕೊಡಿ. ನಾವು ಕೇಳುತ್ತಿದ್ದೇವೆ, Divisinal Commissioner ಹುದ್ದೆಯನ್ನು ನೀವು ಸೃಷ್ಟಿ ಮಾಡಬೇಕಾದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿದರು, ನಾನು ಕೇಳಿದೆ. Give some statistics. ನಿಮ್ಮ DC ಯಿಂದ ಅಪೀಲ್ಸ್ ಎಷ್ಟು ಬಂದಿತ್ತು? ಯಾವ ಯಾವ ರೀತಿಯ ಅಪೀಲ್ಸ್‌ನ್ನು DC dispose ಮಾಡುವುದಕ್ಕಾಗಲಿಲ್ಲ? ಮುನಿಸಿಪಾಲಿಟಿ ಅಪೀಲ್ಸ್ ಯಾವ್ಯಾವುವು ನಿಮ್ಮ ಮುಂದೆ ಬಂದಿದ್ದವು dispose ಮಾಡುವುದಕ್ಕಾಗಲಿಲ್ಲ? ಏನೇನು ತಾಪತ್ರಯಗಳು ಸರ್ಕಾರದ ಮುಂದೆ ಇದ್ದವು ಅವುಗಳನ್ನು ಶಾಸನಸಭೆ ಮುಂದೆ ಹೇಳುವಷ್ಟು ಕೃಪೆ ಮಾಡಿ. If you are justified in convincing us, ನಮ್ಮದೇನು ತಕರಾರು ಇಲ್ಲ. ನಮಗೆ ನೀವೇ ಹೇಳಿರುವುದು. ನಾವು ಹೇಳಲಿಲ್ಲ. DC ಹುದ್ದೆಗಳನ್ನು ರದ್ದು ಮಾಡಿ ಎಂದು ಯಾರೂ ವಿಧಾನಸಭೆಯಲ್ಲಿ ಎದ್ದು ಹೇಳಿರಲಿಲ್ಲ. ಅವತ್ತೂ ಒಂದು ಸರ್ಕಾರ ತೀರ್ಮಾನ ಮಾಡಿತ್ತು. ಈ ಹುದ್ದೆಗಳೆಲ್ಲಾ ರದ್ದು ಮಾಡಬೇಕು. ಇವೆಲ್ಲಾ reforms ಬಗ್ಗೆ ಒಂದು ಕಮಿಟಿ ನೇಮಕವಾಗಬೇಕು. ಅವು ಶಿಫಾರಸ್ಸು ಆಗಬೇಕು. ಅವರನ್ನು ಅಪಾಯಿಂಟ್ ಮಾಡಿ ಅಷ್ಟೆಲ್ಲಾ ಖರ್ಚು ಮಾಡಿ, ಅಷ್ಟೆಲ್ಲಾ ಮಾಡಿ, ನೀವು ಮಾಡಿದರೋ, ಮಾನ್ಯ ಧರ್ಮಸಿಂಗ್‌ರವರು ಮಾಡಿದರೋ, ಆ ಸರ್ಕಾರ ಮಾಡಿತೋ, ಈ ಸರ್ಕಾರ ಮಾಡುವುದಕ್ಕೆ ನಾವು ಈ ಶಾಸನಸಭೆಯಲ್ಲಿಲ್ಲ. We have to be convinced. ಈ ಸಭೆಯಲ್ಲಿ ಕುಳಿತಿರುವ ನಮಗೆ ದಯಮಾಡಿ ಈ ಹುದ್ದೆ ಏಕೆ ಬೇಕು, ಒಂದು ಹುದ್ದೆ ಅಲ್ಲ, ಒಂದೊಂದು ಆಫೀಸ್. 56, 60, 100 ಹುದ್ದೆಗಳನ್ನು ಸೃಷ್ಟಿ ಮಾಡಿ, ರಾಜ್ಯದ exchequer ನ್ನು ಬರ್ಡನ್ ಮಾಡುತ್ತಿದ್ದೀರಿ. ರಾಜ್ಯದ ಅಭಿವೃದ್ಧಿಯನ್ನು ಕ್ಷೀಣಿಸುತ್ತಿದ್ದೀರಿ. ರಾಜ್ಯದ ಅಭಿವೃದ್ಧಿಗೆ ಖರ್ಚು ಮಾಡಬೇಕಾಗಿದ್ದ ಹಣವನ್ನು ನೌಕರರಿಗೆ ಸಂಬಳ ಕೊಟ್ಟು ನೀಗುತ್ತಿದ್ದೀರಿ ಎನ್ನುವುದು ನಮ್ಮ ತಕರಾರು. ಈ ಕೆಲಸವನ್ನು ಒಬ್ಬ DC ಕೈಯಲ್ಲೋ, ಒಬ್ಬ ಕಾರ್ಯದರ್ಶಿ ಕೈಯಲ್ಲೋ ಅಧಿಕಾರ ಕೊಟ್ಟು ಅಲ್ಲಿಯೇ dispose ಮಾಡಿಸಿ ಎಂದು ನಮ್ಮ ತಕರಾರು.

ಉಪಾಧ್ಯಕ್ಷರು :- ನೀವು ಚರ್ಚೆ ಮಾಡಬೇಕಾದರೆ ಅದನ್ನೆಲ್ಲಾ ಅವರು ಕೇಳಿಸಿಕೊಂಡಿದ್ದಾರೆ. ಅವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಪ್ರತಿಷ್ಠೆ ಮಾಡುವುದಕ್ಕೆ ಹೋಗಬೇಡಿ. In the interest of the State. Report ತೆಗೆದು ನೋಡಿ. ಏನು ಹೇಳಿದ್ದಾರೆಂದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಇದರಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ. ನೀವು ಮಾಡಿದ್ದೇ ಇದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಕಾರ್ಯದರ್ಶಿಯವರು ರೆವಿನ್ಯೂ ಕಮಿಷನರ್ ಕೆಳಗೆ ಹುದ್ದೆ ಜಾಸ್ತಿ ಮಾಡಬೇಕಾದರೆ, ಡಿವಿಷನಲ್ ಕಮಿಷನರ್ ಹುದ್ದೆ ಜಾಸ್ತಿ ಇಲ್ಲವೆಂದು ಮಾಡಿರುವುದು ಅವತ್ತು. ಅಲ್ಲಿಯ ಕೆಲವು ಕಾರ್ಯಕ್ರಮಗಳನ್ನು ಅಲ್ಲಿಯ ಕಾರ್ಯದರ್ಶಿಗಳಿಗೆ ಹಸ್ತಾಂತರಿಸಿರುವುದು. ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಸೃಷ್ಟಿ ಮಾಡಿರುವುದು. ಹಾಗಾದರೆ ಈ ಹಣಕಾಸಿನ ಬಗ್ಗೆ ನಾವು ಈ ಸಭೆಯಲ್ಲಿ ಕೇಳುವ ಹಾಗೆಯೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರ ಮೂಲ ಪಾಯಿಂಟ್ ಏನಿತ್ತು, ಮೊದಲು 2-2 ವರ್ಷದಲ್ಲಿ ಏಕೆ ಬದಲಾವಣೆ ಮಾಡಿದಿರಿ, ಅಥವಾ ಒಂದು ವರದಿಗೆ ಏನು ಪ್ರಾಮುಖ್ಯತೆ ಇದೆ? ಇಂತಹ ವಿಚಾರಗಳನ್ನು ಅವರು ಕೇಳಿದರು. ತಮಗೆಲ್ಲರಿಗೂ ಕೂಡ ಗೊತ್ತಿದೆ, ಈ ಆಡಳಿತ ಸುಧಾರಣಾ ಆಯೋಗ ದಿ. ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ನೇಮಕಾತಿ ಆಗಿ, ಅವರ ಅಧ್ಯಕ್ಷತೆಯಲ್ಲಿತ್ತು. ಅದಾದ ಮೇಲೆ, ಬದಲಾವಣೆಗಳಾಗಿ ಕೇಂದ್ರದಲ್ಲಿ ಈಗ ಮಾನ್ಯ ವೀರಪ್ಪಮೊಯಿಲಿಯವರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣೆಗಾಗಿ ಏರ್ಪಾಡು ಮಾಡಿದ್ದಾರೆ. ಇಲ್ಲಿಯೂ ಕೂಡ ನಾವು ಹಾರ್ನಳ್ಳಿ ರಾಮಸ್ವಾಮಿಯವರ ಆಯೋಗದಲ್ಲಿ ಮಾಡಿಕೊಂಡಿರುವಂಥ ಕೆಲವು ಬದಲಾವಣೆಗಳನ್ನು ಮತ್ತೆ ಅದನ್ನು ಅನುಭವದ ಹಿನ್ನೆಲೆಯಲ್ಲಿ ಈ ಕಾಲದಲ್ಲಿ ನಾವೂ ಕೂಡ ಮಾಡನಾಡಿದ್ದೆವು. ಉಪ ಆಯುಕ್ತರು ಎನ್ನುವುದು ಒಂದು post office . AC ತೆಗೆದು ಹಾಕಿಬಿಡಿ, Divisional commissioner ಎನ್ನತಕ್ಕಂಥದ್ದು ಅದು ಒಂದು ಪೋಸ್ಟ್ ಆಫೀಸ್ ಅದರ ಅಗತ್ಯವಿಲ್ಲ. ಯಾವುದು ಅನುಪಯುಕ್ತವಾದ ಸ್ಥಾನಗಳಿವೆ, ಆ ಅನುಪಯುಕ್ತವಾದ ಸ್ಥಾನಗಳನ್ನು ತೆಗೆದುಹಾಕಬೇಕು ಎನ್ನುವಂಥದ್ದು ಕೂಡ ಎಲ್ಲರೂ ಮಾತನಾಡಿದ್ದೇವೆ. ಆದರೆ ಅನುಭವದ ಹಿನ್ನೆಲೆಯಲ್ಲಿ ಗೊತ್ತಾಯಿತು, ಸಚಿವಾಲಯದ ಕಾರ್ಯದರ್ಶಿ ಮೇಲೆ ಸಂಪೂರ್ಣವಾದ ಒತ್ತಡ ಬರಲಿಕ್ಕೆ ಪ್ರಾರಂಭವಾಯಿತು. ಅದೇ ರೀತಿಯಾದಂತಹ ಎಲ್ಲ ವಿಚಾರಗಳಲ್ಲಿ ಆಡಳಿತದ ಬಿಗಿ ಪದೇ ಪದೇ ಹೋಗಿ ಅವರ ಮೇಲೆ ವಿಚಾರಣೆ ಮಾಡುವಂಥದ್ದು ನಿಯಂತ್ರಣ ಇಡತಕ್ಕಂಥದ್ದು, ಆ ಕೆಲಸ ಅನುಷ್ಠಾನಗೊಳಿಸಿದ್ದಾರೆಯೋ, ಇಲ್ಲವೋ ಎನ್ನತಕ್ಕಂತಹ ವಿಚಾರವನ್ನು

ನೋಡಬೇಕಾದಂತಹ ವ್ಯವಸ್ಥೆ ಬಂದಂತಹ ಸಂದರ್ಭದಲ್ಲಿ ನಾವು ತಮಿಳುನಾಡು ಮತ್ತು ಆಂಧ್ರಪ್ರದೇಶಗಳ ಉದಾಹರಣೆ ಇಟ್ಟುಕೊಂಡು ಕಮಿಷನರೇಟ್ ಮಾಡಬೇಕೆಂದು ಇದ್ದೆವು. ಆ ಸಂದರ್ಭದಲ್ಲಿ ಈ ಎಲ್ಲ ವಿವರಗಳನ್ನು ಸಚಿವಸಂಪುಟ ಸಭೆಯ ಮುಂದೆ ತಂದಂತಹ ಕಾಲದಲ್ಲಿ ಮಾನ್ಯ ಎಸ್.ಎಸ್. ಪಾಟೀಲರು ಹೇಳಿದಂತೆ, ಮಾನ್ಯ ಸಿದ್ಧರಾಮಯ್ಯನವರು ಕೂಡ ಇದ್ದರು. ಅವತ್ತು ಯಾರ್ಯಾರಿದ್ದರು, ಯಾರ್ಯಾರಿಲ್ಲ, ಏನು ಮಾತನಾಡಿದರು, ಎನ್ನುವುದಕ್ಕಿಂತ ಹೆಚ್ಚಾಗಿ, ಒಂದೇ ಒಂದು ಕಮಿಷನರೇಟ್ ಮಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೆವು. ಆ ಸಂದರ್ಭದಲ್ಲಿ ಹೇಳಿದರು, ಒಂದೇ ಒಂದು ಕಮಿಷನರೇಟ್ ಇಡತಕ್ಕಂಥದ್ದು ಏನಿದೆ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಭಾಗ ಇಟ್ಟುಕೊಂಡು ಬೆಳಗಾವಿಯಲ್ಲಿ ಒಂದು, ಬೆಂಗಳೂರಿನಲ್ಲಿ ಒಂದು ಎನ್ನತಕ್ಕಂಥಾದ್ದು ಆಗಬೇಕೆಂದು ನಿರ್ಧಾರವಾಯಿತು. ಆ ನಿರ್ಧಾರ ಮಾಡಿಕೊಂಡು ಸಚಿವಸಂಪುಟ ಸಭೆಯಲ್ಲಿ ವಿಷಯ ಬಂದಾಗ ಆಗ ಏನು ಹೇಳಿದರು, ಎರಡನ್ನು ಏಕೆ ಮಾಡುತ್ತೀರಿ? ಗುಲ್ಬರ್ಗಾಕ್ಕೆ ಏಕೆ ಆಗಬಾರದು? ಆಗ ಮಾನ್ಯ ಧರ್ಮಸಿಂಗ್‌ರವರೇ ಮುಖ್ಯಮಂತ್ರಿಗಳಾಗಿದ್ದರು, ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಚಿವರಾಗಿದ್ದರು. ಆ ಸಂದರ್ಭ ಬಂದಾಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ನೀವು ಗುಲ್ಬರ್ಗಾದಲ್ಲಿ ಮಾಡುತ್ತೀರಿ, ಬೆಳಗಾವಿಯಲ್ಲಿ ಮಾಡುತ್ತೀರಿ, ಬೆಂಗಳೂರಿನಲ್ಲಿಯೂ ಮಾಡುತ್ತೀರಿ ಎಂದೆ, ಮೈಸೂರಿನಲ್ಲಿಯೂ ಮಾಡಿಬಿಡಿ ಎಂದು ಹೇಳಿದರು.

ಶ್ರೀ ಸಿದ್ಧರಾಮಯ್ಯ :- ನಾನು ಹಾಗೆ ಹೇಳಲಿಲ್ಲ. ಇವತ್ತು ಕ್ಯಾಬಿನೆಟ್‌ನಲ್ಲಿ ಏನು ಚರ್ಚೆಯಾಯಿತು ಎಂದು ಹೇಳಬಾರದು ಎಂದು ನಾನು ಹೇಳುವುದಕ್ಕೆ ಹೋಗಲಿಲ್ಲ. even today, ಅವತ್ತು ವಿರೋಧ ಮಾಡಿದ್ದೆ, ಇವತ್ತೂ ವಿರೋಧ ಮಾಡುತ್ತೇನೆ. Divisional Commissioner Post ಗಳಿಗೆ ಕ್ಯಾಬಿನೆಟ್‌ನಲ್ಲಿ ವಿರೋಧ ಮಾಡಿದ್ದೆ, ನನ್ನ ವೈಯಕ್ತಿಕವಾದ ಅಭಿಪ್ರಾಯ. ಇವತ್ತೂ ವಿರೋಧ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ತಾವು ಸ್ವಲ್ಪ ಲೇಟಾಗಿ ಬಂದು ಜಾಯಿನ್ ಆದಿರಿ. ನಾವು ಇದರ necessity, inevitability, ಮತ್ತು wasteful expenditure ಇವುಗಳ ಬಗ್ಗೆ ಅಷ್ಟೆ ಮಾತನಾಡಿದ್ದು. ನನಗೆ year, date ನೆನಪು ಇಲ್ಲ. 1958 ಲೋಕಸಭೆಯಲ್ಲಿ ಆಚಾರ್ಯ ಕೃಪಲಾನಿಯವರಿರುತ್ತಾರೆ. ದಿವಂಗತ ಎಮ್. ಚಲಪತ್‌ರಾವ್‌ರವರು National Herald ನಲ್ಲಿ ಒಂದು ಆರ್ಟಿಕಲ್ ಬರೆದಿದ್ದಾರೆ, about certain purchases to Defence. ಅದರಲ್ಲಿ ಚಲಪತ್‌ರಾವ್‌ರವರು ಸ್ವಲ್ಪ ಅನುಮಾನ ವ್ಯಕ್ತಪಡಿಸುತ್ತಾರೆ. Allegations ಮಾಡುವುದಿಲ್ಲ. ಇಂತಿಂಥದ್ದು, They are not up to the mark ಎಂದು ಹೇಳಿ, information ಇದೆ ಎಂದು ಹೇಳಿದರು. ಈ ವಿಚಾರವನ್ನು

ಆಚಾರ್ಯ ಕೃಪಲಾನಿಯವರು, he makes a feeble attempt to raise this issue on the floor of the House. ಪಂಡಿತ್ ನೆಹರುರವರು ಏನು ಹೇಳುತ್ತಾರೆ ಗೊತ್ತಾ " ಆಚಾರ್ಯಜಿ ಈ ದೇಶದ ಸ್ವಾತಂತ್ರ್ಯಕ್ಕೆ ನನ್ನಷ್ಟೇ ನೀವು ದುಡಿದಿದ್ದೀರಿ. ವಿಧಿನೋ, ಪರಿಸ್ಥಿತಿನೋ ನಾನು ಇಲ್ಲಿದ್ದೇನೆ, ತಾವು ಅಲ್ಲಿದ್ದೀರಿ. ದೇಶದ ರಕ್ಷಣೆಗಾಗಿ ಕೊಳ್ಳತಕ್ಕಂತಹ ವಿಚಾರದಲ್ಲಿ ಅನುಮಾನ ಇದೆ ಎನ್ನತಕ್ಕಂತ ಭಾವನೆ ನಿಮಗೆ ಬಂದರೆ, ನೀವು ನನ್ನಷ್ಟೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಅದನ್ನು ಈ ಕ್ಷಣದಲ್ಲಿಯೇ ನಾನು ಕ್ಯಾನ್ಸಲ್ ಮಾಡುತ್ತಿದ್ದೇನೆ" ಎಂದು ಹೇಳಿ ಒಂದು gesture ತೋರಿಸುತ್ತಾರೆ. ನಾನು ತಮಗೆ ಏನು ಹೇಳುತ್ತೇನೆಂದರೆ, ಪಾರ್ಲಿಮೆಂಟರಿ democracy ಒಳಗೆ.....

ಶ್ರೀ ಎಂ.ಪಿ. ಪ್ರಕಾಶ್ :– ಅವರ ಆಪ್ತನಾಗಿರತಕ್ಕಂತಹ ಕೃಷ್ಣಮೆನನ್‌ರವರು ಸುಮಾರು ಜೀಪುಗಳನ್ನು Defence ಗೆ ಖರೀದಿ ಮಾಡಿಕೊಂಡಂತಹ ಸಂದರ್ಭದಲ್ಲಿ ಕೃಷ್ಣಮೆನನ್‌ರವರಿಗೆ Defend ಮಾಡಿಕೊಂಡಿರತಕ್ಕಂಥದ್ದು, ಮಾನ್ಯ ಆಚಾರ್ಯ ಕೃಪಲಾನಿಯವರ ವಿರುದ್ಧವಾಗಿ ಕೃಷ್ಣಮೆನನ್‌ರವರನ್ನು ಬಾಂಬೆಯಲ್ಲಿ ಚುನಾವಣೆಗೆ ನಿಲ್ಲಿಸಿರತಕ್ಕಂತಹ ಘಟನೆಯನ್ನು ಕೂಡ ತಾವು ನೆನಪು ಮಾಡಿಕೊಳ್ಳಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾನು ನೆನಪು ಮಾಡಿಕೊಳ್ಳುತ್ತೇನೆ. ನಿಮಗೆ ಅದೇ ಚೆನ್ನಾಗಿರುವುದಾದರೆ, ಅದೇ ಮಾಡೆಲ್ ಕಾಪಿ ಮಾಡುತ್ತೀನಿ ಎನ್ನುವುದಾದರೆ, ದಯಮಾಡಿ ಅದನ್ನೇ ಮಾಡಿ. ನಾನು ತಮಗೆ ಏನು ಹೇಳುತ್ತೇನೆಂದರೆ, I always try to take the best out of....

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ಹೇಳಿದ್ದಕ್ಕೆ ಒಂದು ರಿಲವೆಂಟ್ ಪ್ರಶ್ನೆ ನಾವು ಕೇಳಿದ್ದು. ನಿಮ್ಮ ರೆವಿನ್ಯೂ ಕಮಿಷನರ್‌ಗೆ ಇರುವ ಯಾವುದಾದರೂ ಅಧಿಕಾರವನ್ನು Divisional Commissioner ಗೆ delegate ಮಾಡಿದ್ದೀರಾ? ಅದರಿಂದ ಮುಂದಕ್ಕೆ ಹೋಗುವ ಅಪೀಲ್ ಏನಾದರೂ stop ಅಲ್ಲಿ ಮಾಡಿದ್ದೀರಾ? again ಅಲ್ಲಿಗೆ ಹೋಗಬೇಕಾದರೆ, ಈ ಪೋಸ್ಟ್ ಆಫೀಸ್‌ನ್ನು ಏಕೆ ಸೃಷ್ಟಿ ಮಾಡುತ್ತೀರಿ ಎಂತಲೇ ನಾವು ಮಾತನಾಡುವಾಗ ಕೇಳಿದ್ದು. again an appeal goes to Revenue Commissioner. ಏತಕ್ಕೆ ಸೃಷ್ಟಿ ಮಾಡುತ್ತಿದ್ದೀರಿ ಎಂದೇ ಕೇಳಿದೆವು ನಾವು. ನೀವು ಹೇಳಿದ ಹಾಗೆ, If the load on a Revenue Commissioner reduces, We happily welcome this bill. Development ಗೆ ಕೊಡಿ ನಮ್ಮ ವಿರೋಧ ಇಲ್ಲ. ಅವರ ಲೋಡ್ ಕಡಿಮೆ ಮಾಡುವುದಿಲ್ಲ. ಅವರ ವರ್ಕ್ ಕಡಿಮೆ ಮಾಡುವುದಿಲ್ಲ. ಅವರ ಯಾವುದನ್ನೂ ಇವರಿಗೆ ಡೆಲಿಗೇಟ್ ಮಾಡುವುದನ್ನು ನೀವು ಬಿಲ್‌ನಲ್ಲಿ ತೋರಿಸಿಲ್ಲ. DC ಆದ ಮೇಲೆ ನಿಮಗೆ ಅಪೀಲ್ ಬರಬೇಕು. DC ಆದ ಮೇಲೆ ನಿಮಗೆ ಅಪೀಲ್

ಬರಬೇಕೆಂದರೆ, again an appeal lies with Revenue Commissioner ಎಂದರೆ ಈ ಆಫೀಸ್ ಏಕೆ? ನಿಮ್ಮ Secretariat ಮೇಲಿರುವ ವರ್ಕ್ reduce ಆಗುತ್ತದೆ ಎಂದಿದ್ದರೆ, ಬಿಲ್‌ನಲ್ಲಿ ತಾವು ಆ point refer ಮಾಡಿದ್ದರೆ, ನಮ್ಮ ತಕರಾರು ಇರಲಿಲ್ಲ. ಆ ಸ್ಥಿತಿ ನಿಮ್ಮ Regional Commissioner Office ನಿಂದ ನಿರ್ಮಾಣವಾಗುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಹಣದ ವಿಷಯದಲ್ಲಿ ಮಾನ್ಯ ಯಡಿಯೂರಪ್ಪನವರೇ ಸರ್ಕಾರ ಹೇಗೆ ನಡೆದುಕೊಳ್ಳುತ್ತದೆ ಎಂದರೆ, ಹೋದ ವರ್ಷ ಇಷ್ಟೇ ತೀವ್ರವಾದ ಬರಗಾಲ ಇತ್ತು. ನಮ್ಮಲ್ಲಿ ಮೊದಲು ಬೋರ್‌ವೆಲ್ಸ್ 350 ರಿಂದ 400 ಅಡಿ ಕೊರೆದರೆ, ನೀರು ಸಿಗುತ್ತಿತ್ತು ಹ್ಯಾಂಡ್‌ಪಂಪ್ ಹಾಕಬಹುದಾಗಿತ್ತು. ಈಗ ಅದು 500 ಅಡಿ ದಾಟಿ ಹೊರಟು ಹೋಗಿದೆ. ಹ್ಯಾಂಡ್‌ಪಂಪ್ ಹಾಕಿದರೆ ನೀರು ಬರುವುದಿಲ್ಲ. Invariably, ಪ್ರತಿ ಬೋರ್‌ವೆಲ್‌ಗೂ ನಾವು ಈಗ ಪಂಪ್ ಮೋಟರ್ ಹಾಕಬೇಕು. ಈ ಅಧಿಕಾರಿಗಳಿಗೆ ಒಪ್ಪಿಸಬೇಕಾದರೆ ನಮ್ಮ ಪ್ರಾಣ ಹೊರಟು ಹೋಯಿತು. ದುಡ್ಡು ಖರ್ಚಾಗುತ್ತದೆ. ಎಲ್ಲಿಂದ ತರುತ್ತೀರಿ ಇಷ್ಟೊಂದು ದುಡ್ಡು ಎಂದು ಹೇಳುತ್ತಾರೆ. ನಾನು ಏಕೆ ನಿಮಗೆ ಹೇಳಿದೆ ಎಂದರೆ ಸರ್ಕಾರದಲ್ಲಿ ದುಡ್ಡು ಬಹಳ ಕಡಿಮೆ ಇದೆ ನಿಮ್ಮ ಡಿಮ್ಯಾಂಡ್ ಬಹಳ ಜಾಸ್ತಿ ಇವೆ. ಜನರ ಆಕಾಂಕ್ಷೆಗಳು ಜಾಸ್ತಿ ಇವೆ. ಅವರ ಕನಸುಗಳು ಬಹಳ ಇವೆ. ಒಂದೊಂದು ರೂಪಾಯಿಯನ್ನು ಕೂಡಿಸಿ ಇಡಿ. ಅದು ಪವಿತ್ರವಾದ ಹಣ ಎಂದು ಭಾವನೆ ಮಾಡಿಕೊಳ್ಳಿ, ಅದು ಒಳ್ಳೆಯದಕ್ಕೆ ಉಪಯೋಗಿಸಿ. ಏಕೆ ಇವನಿಗೆ ಯಾವನಿಗೋ ಸಾಕುವುದಕ್ಕೆ ತೆಗೆದುಕೊಂಡು ಬಂದು ಈ ದುಡ್ಡು ಹಾಕುತ್ತೀರಿ? ನಿಮ್ಮ ಖುಷಿ, ನೀವು ಮಾಡಲೇಬೇಕೆಂದು ಹೇಳಿದರೆ, ನಾವು ಇನ್ನೊಂದು ಎರಡು ನಿಮಿಷ ಹೇಳುತ್ತೇವೆ, ತೆಪ್ಪಗೆ ಕುಳಿತುಕೊಳ್ಳುತ್ತೇವೆ, ಅವರು ಮತ ಹಾಕುತ್ತಾರೆ ಹೌದು ಎನ್ನುವವರು ಹೌದು ಎನ್ನಬೇಕು ಇಲ್ಲ ಎನ್ನುವವರು ಇಲ್ಲವೆಂದು ಹೇಳಬೇಕು. Bill carried ಎಂದು ನೀವು ಹೋಗುತ್ತೀರಿ. If that is to be the consequences of the whole discussion, why should this House be in existence? We are here at together to represent certain values which a section of people can never understand all their life.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಪ್ರಕಾಶ್‌ರವರೆ, ತಾವೂ ಕೂಡ Revenue Minister ಆಗಿದ್ದಿರಿ. ಇವತ್ತಿನವರೆಗೂ ನೀವು ಒಂದು ತಾಲ್ಲೂಕು ಆಫೀಸ್‌ನ್ನು strengthen ಮಾಡಲಿಕ್ಕಾಗಿಲ್ಲ. ಇವತ್ತಿನವರೆಗೂ ಎಲ್ಲಾ ತಾಲ್ಲೂಕುಗಳಲ್ಲಿ village Accountants ಗಳಿಲ್ಲ. ಇವತ್ತಿನವರೆಗೂ ಶಿರಸ್ತೇದಾರ್ ಆಗಿ continue ಆಗಿರುವವರನ್ನು ತಹಶೀಲ್ದಾರ್‌ಗಳಾಗಿ ರೆಗ್ಯೂಲರೈಜ್ ಮಾಡಲಿಕ್ಕೆ ನಿಮಗೆ ಆಗಲಿಲ್ಲ. They are retiring as Sheristedars,

even doing the jobs of Tahasildars for 7-8 years. ಆ ಕಡೆಗೆ ನಿಮ್ಮ ಆಲೋಚನೆಯೇ ಇಲ್ಲವಲ್ಲಾ?

ಶ್ರೀ ಎಂ.ಪಿ. ಪ್ರಕಾಶ್ :- ದಯಮಾಡಿ ನಾನು ಹೇಳುವುದನ್ನು ಕೇಳಿ. ಏನೆಲ್ಲಾ ಘಟನೆಗಳಾದವು ಎಂಬ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು. 1998 ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದವರು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರತಕ್ಕಂಥ ತಹಶೀಲ್ದಾರ್ ಹುದ್ದೆಗಳ ಪ್ರಕ್ರಿಯೆಯಲ್ಲಿ ತಪ್ಪಾಯಿತು ಎಂಬ ವಿಚಾರದ ಮೇಲೆ ಕೆಲವು ಆಯ್ಕೆಯಾಗದ ಅಭ್ಯರ್ಥಿಗಳು ಸುಪ್ರೀಕೋರ್ಟ್‌ನವರೆಗೂ ಪ್ರಕರಣವನ್ನು ತೆಗೆದುಕೊಂಡು ಹೋದರು. ಅಲ್ಲಿಂದ ಅವರು ನೇಮಕಾತಿಗೆ ತಡೆಯಾಜ್ಞೆ ತಂದಿದ್ದರಿಂದ ತಹಶೀಲ್ದಾರ್‌ಗಳ ನೇರನೇಮಕಾತಿ ಆಗಲೇ ಇಲ್ಲ. ಆ ನೇರ ನೇಮಕಾತಿ ಆಗದಿದ್ದುದರಿಂದ, ಇದೇ ಸದನದಲ್ಲಿ ಒಪ್ಪಿಗೆ ಕೊಟ್ಟಿದ್ದೇವೆ. ಕನಿಷ್ಟ ಪದೋನ್ನತಿ ಪಡೆಯಬೇಕಾಗಿದ್ದರೆ ಒಬ್ಬ ಅಧಿಕಾರಿ ತನ್ನ ಸ್ಥಾನದಲ್ಲಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು, ಆ ಮೂರು ವರ್ಷಗಳ ಸೇವಾವಧಿಯನ್ನು ಒಂದೂವರೆ ವರ್ಷಕ್ಕೆ ಇಳಿಸಲಾಯಿತು. ಆ ರೀತಿ ಒಂದೂವರೆ ವರ್ಷಕ್ಕೆ ಇಳಿಸಿದ ಕಾರಣವೇನೆಂದರೆ, ಅಲ್ಲಿ stay order vacate ಆಗಲಿಲ್ಲ. ಅದಕ್ಕೆ ಯಾರು ಕಾರಣರು? ಯಾರು ಪ್ರಯತ್ನ ಮಾಡಿಲ್ಲ? ಈ ಸಂದರ್ಭದಲ್ಲಿ ಅದರ ಬಗ್ಗೆ ಮಾತನಾಡುವುದು ಅಪ್ರಸ್ತುತವಾಗುತ್ತದೆ. ಆದರೆ ಅದು ಸತ್ಯಸಂಗತಿಯಾಗಿದೆ. ನಾನು ಹಿಂದೆ Revenue Minister ಆಗಿದ್ದಂತಹ ಸಂದರ್ಭದಲ್ಲಿ ನಾವೇ ನೇರ ನೇಮಕಾತಿಯನ್ನು ಮಾಡುತ್ತೇವೆ ಎಂದು ಹೇಳಿದ್ದೆವು. ನೀವು 1999 ನೇ ಸಾಲಿನಲ್ಲಿ ನೇಮಕಾತಿ ಮಾಡಿಕೊಂಡಿದ್ದೀರಿ. ಆದರೆ 1998 ನೇ ಸಾಲಿನ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡದಿದ್ದರೆ, 1999 ರ ಪಟ್ಟಿ ಪ್ರಶ್ನೆ ಬರುವುದಿಲ್ಲ. ಈ ಸನ್ನಿವೇಶ ಬಂದಾಗ, ಅಲ್ಲೊಂದು constitutional crisis ಆಗುವಂತಹ ಪರಿಸ್ಥಿತಿ ಬಂತು. ತಾವು ಆ ಬಗ್ಗೆ ಪ್ರಶ್ನೆ ಮಾಡಿದ್ದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಆಗ ಸುಮಾರು ಜನ ತಹಶೀಲ್ದಾರ್ ಆಗಿದ್ದವರು ನಿವೃತ್ತಿಯಾಗುವಂತಹ ಪರಿಸ್ಥಿತಿಯಲ್ಲಿದ್ದರು. ಆಗ ನಮಗೆ ತಹಶೀಲ್ದಾರ್‌ಗಳು ಇಲ್ಲದಿದ್ದರೆ, ಯಾರನ್ನು ಮಾಡಬೇಕು ಎನ್ನುವಂತಹ ಒಂದು ಪರಿಸ್ಥಿತಿ ಬಂತು. ಆ ಸನ್ನಿವೇಶದಲ್ಲಿ ಲೋಕಸೇವಾ ಆಯೋಗದವರ ಜೊತೆಗೆ 2-3 ಬಾರಿ ಚರ್ಚೆ ಮಾಡಿದೆವು. ಕೊನೆಗೆ, ನೀವು recruitment ಮಾಡುವಾಗ ಭ್ರಷ್ಟಾಚಾರ ಇತ್ಯಾದಿಯೆಲ್ಲಾ ಆಗುತ್ತದೆ ಎಂದು ಪ್ರಸ್ತಾಪ ಮಾಡಿದೆವು. ಅಂತಿಮವಾಗಿ 1998 ನೇ ಸಾಲಿನ ಆಯ್ಕೆಪಟ್ಟಿಗೆ ನೀಡಲಾಗಿದ್ದ ತಡೆಯಾಜ್ಞೆಯನ್ನು ವಾಪಸ್ ತೆಗೆದುಕೊಳ್ಳಲಾಯಿತು. ಪ್ರಶ್ನೆ ಕೇಳಿದ ತಾವು, ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದರೆ, ನಾನು ಯಾರಿಗಾಗಿ ಉತ್ತರ ಕೊಡಬೇಕು? ತಾವು ತಮ್ಮ ತಮ್ಮಲ್ಲೇ ಮಾತನಾಡಿಕೊಂಡರೆ, ನಾನು ಕೊಡುವ ಉತ್ತರದಿಂದ ಏನು ಪ್ರಯೋಜನವಾಗುತ್ತದೆ? ಆದ್ದರಿಂದ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಉತ್ತರವನ್ನು ನಾವು ಈಗಾಗಲೇ ಎರಡು ಸಲ ಇಲ್ಲಿ ಕೇಳಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ :– ನಿಮ್ಮ ಪ್ರಶ್ನೆಯನ್ನೂ ಸಹ ನಾವು ಬಹಳ ಸಲ ಕೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ತಾವು solve ಮಾಡಲಿಕ್ಕೆ ಮಾಡಿದ ಪ್ರಯತ್ನವೇನು? ಎಂದು ನಾವು ಚರ್ಚೆ ಮಾಡುತ್ತಿದ್ದೆವು.

ಶ್ರೀ ಎಂ.ಪಿ. ಪ್ರಕಾಶ್ :– ಅದನ್ನೇ ನಾನು ಇಲ್ಲಿ ಹೇಳುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಉತ್ತರವನ್ನು ಮೂರನೇ ಸಲ ನಾವು ಅಸೆಂಬ್ಲಿಯಲ್ಲಿ ಕೇಳುತ್ತಿದ್ದೇವೆ. ಇದು ಈಗಾಗಲೇ ರೆಕಾರ್ಡ್‌ನಲ್ಲಿದೆ.

ಶ್ರೀ ಎಂ.ಪಿ. ಪ್ರಕಾಶ್ :– ನೀವೇನು ಬದಲಾವಣೆಗಳನ್ನು ತಂದಿರಿ? ಎಂದು ನೀವು ಕೇಳಿದ ಮೇಲೆ ಅದಕ್ಕೆ ನಾವು ಉತ್ತರಿಸಬೇಕಲ್ಲವೇ? ನಾವು ಅಂದು ಆ ಚಿಂತನೆಯನ್ನು ಮಾಡಿದಂತಹ ಕಾರಣಕ್ಕಾಗಿಯೇ recruitment ಆಗಿ ಇವತ್ತು ತಹಶೀಲ್ದಾರ್‌ಗಳು ನೇಮಕಾತಿಯಾಗಿ ಇಲಾಖೆಗೆ ಬಂದಿದ್ದಾರೆ. ನಾವು ಆ ಚಿಂತನೆಯನ್ನು ಮಾಡದಿದ್ದರೆ, ಇಲಾಖೆಯಲ್ಲಿ ಹೊಸ ರಕ್ತ ಚಾಲನೆ ಆಗುತ್ತಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇನ್ನೂ ಅವರು ಬಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– 150 ಮಂದಿ recruitment ಆಗಿ ಬಂದಿದ್ದಾರೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಹೊಸದಾಗಿ ನೇಮಕಾತಿಯಾಗಿ ಇಲಾಖೆಗೆ ಬಂದಿದ್ದಾರೆ. ಅವರು ಟ್ರೇನಿಂಗ್‌ಗೆಂದು ಹೋಗಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :– ನೀವು ಪ್ರಶ್ನೆ ಕೇಳುತ್ತೀರಿ. ಆದರೆ ಅದಕ್ಕೆ ನಮ್ಮ ಉತ್ತರವನ್ನು ಕೇಳುವಂತಹ ಸೌಜನ್ಯವನ್ನು ತವು ದಯವಿಟ್ಟು ತೋರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಉತ್ತರವನ್ನು ಕೇಳಬೇಕೆಂದೇ ನಾವು ಇಲ್ಲಿ ಕುಳಿತಿದ್ದೇವೆ. ಆದರೆ ಉತ್ತರ ನಮಗೆ ಗೊತ್ತಿರುವಾಗ, ಮತ್ತೆ ಅದನ್ನೇನು ಹೇಳುವುದು?

ಶ್ರೀ ಎಂ.ಪಿ. ಪ್ರಕಾಶ್ :– ನಿಮಗೆ ಉತ್ತರ ಗೊತ್ತಿದ್ದರೆ, ಆ ಬಗ್ಗೆ ನೀವು ಪ್ರಸ್ತಾಪ ಮಾಡುವಂತಹ ಅಗತ್ಯವೇ ಇರುತ್ತಿರಲಿಲ್ಲ. ನೀವು ಈಗಾಗಲೇ ಆ ಉತ್ತರವನ್ನು ಎರಡು

ಸಲ ಕೇಳಿದ ಮೇಲೆ ಮತ್ತೆ ಕೇಳಬೇಕಾಗಿರಲಿಲ್ಲ. ನೀವೇನು reforms ಮಾಡಿದ್ದೀರಿ ಎಂದು ಕೇಳಿದ ಮೇಲೆ, 'ನೋಡಿ, ನಾವು ಈ ತರಹ reforms ಮಾಡಿದ್ದೇವೆ' ಎಂದು ಉತ್ತರ ಹೇಳಲೇಬೇಕಾಗುತ್ತದೆ. 1998 ನೇ ಸಾಲಿನಿಂದ ಹಿಡಿದು 2004-05 ನೇ ಸಾಲಿನವರೆಗೆ recruit ಮಾಡಿದಿರತಕ್ಕಂಥ ಪರಿಸ್ಥಿತಿ ಬಂದಾಗ, ನಾವು recruit ಮಾಡಿದ್ದೇವೆ. 150 ಜನ recruits ಆಗಿ ಬಂದಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅರ್ಹರಿಗೆ promotion ಕೊಡಬೇಕಾಗಿತ್ತು. ಈಗಾಗಲೇ ಇರುವವರಿಗೆ reguiarize ಮಾಡಬೇಕಾಗಿತ್ತು.

ಶ್ರೀ ಎಂ.ಪಿ. ಪ್ರಕಾಶ್ :- ಈ ಕಡೆಗೆ ಗಮನ ಕೊಡಬೇಕೆಂದು ತಾವು ಹೇಳಿದಿರಿ. 'ನಾವು ಗಮನ ಕೊಟ್ಟಿದ್ದೇವೆ' ಎಂದು ನಾವು ಉತ್ತರ ಕೊಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಆ ಕಡೆಗೆ ತಾವು ಗಮನ ಕೊಟ್ಟಿದ್ದೀರಿ. ಇಲ್ಲವೆಂದು ನಾವು ಹೇಳುತ್ತಿಲ್ಲ. 150 ಜನ ತಹಶೀಲ್ದಾರ್‌ಗಳು ನೇಮಕಾತಿಯಾಗಿ ಬಂದು ಅವರು ಟ್ರೇನಿಂಗ್‌ಗೆ ಹೋಗಿದ್ದಾರೆ. ಇದೆಲ್ಲಾ ಸರಿ. ಈ ಹುದ್ದೆಗಳು ಬೇಕೋ ಬೇಡವೋ? ಎಂಬುದು ಇಲ್ಲಿರುವ ಪ್ರಶ್ನೆಯಾಗಿದೆ....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- .....Revenue Commissioner ರವರಿಗೆ ಅಪೀಲು ತೆಗೆದುಕೊಳ್ಳತಕ್ಕಂಥ, revisin ಮಾಡಿಕೊಳ್ಳತಕ್ಕಂಥ, review ಮಾಡುವಂತಹ ಅಧಿಕಾರ ಇದೆಯೇ? ಎಂದು ತಾವು ಕೇಳಿದಿರಿ. Karnataka Land Reforms Act ನಲ್ಲಿ ಅವರಿಗೆ ಅಧಿಕಾರವಿಲ್ಲ. ಅದಕ್ಕೆ ಬೇರೆ ರೀತಿಯ ಚಿಂತನೆ ಬಂದಾಗ ಅದನ್ನು ಮಾಡಬಹುದು. ಅದೇ ರೀತಿಯಲ್ಲಿ Constitution Schedule VII ಕೆಳಗೆ courts are barred. ನಮ್ಮಲ್ಲಿ PTCL Case ನಲ್ಲಿ even ಅಂಥದ್ದನ್ನೂ ಕೂಡ ಮಾಡಿರತಕ್ಕಂಥದ್ದು ಇದೆ. ಕೋರ್ಟ್‌ನವರು entertain ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ legislation ಅನ್ನೂ ಕೂಡ ನಾವು ಮಾಡಿದ್ದೇವೆ. ತಮ್ಮೆಲ್ಲರ ಸಲಹೆ ಮೇರೆಗೆ ಹೊಸ legislation ತರೋಣ. ಎಲ್ಲಾ ಕಾಲದಲ್ಲಿಯೂ ಬದಲಾವಣೆಗಳು ಆಗಿಯೇ ಆಗುತ್ತವೆ. ಎಲ್ಲಾ ವರದಿಗಳ ಮೇಲೂ ವರದಿಗಳು ಆಗುತ್ತವೆ. ಧರ್ಮವೀರರವರ....

ಶ್ರೀ ಸಿದ್ಧರಾಮಯ್ಯ :- ..... Appeal ಗಳು Divisional Commissioner ಗೆ ಹೋಗಬೇಕಾಗುತ್ತದೆ, So many acts will have to be amended ಎನ್ನುವ ಕಾರಣಕ್ಕೋಸ್ಕರವಾಗಿ ಆ ತರಹ ಯೋಚನೆ ಮಾಡಲಾಗಿತ್ತು. ಆಗಲೂ ನಾವು ಅದಕ್ಕೆ

ವಿರೋಧ ಮಾಡಿದ್ದೆವು. ನಾನೇನು ಹೇಳುತ್ತೇನೆ ಎಂದರೆ, ಕೆಲವೊಂದು ಆ್ಯಕ್ಟ್‌ಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ ಎನ್ನುವುದಾದರೆ, ಅವುಗಳನ್ನು ತೆಗೆದುಕೊಂಡು ಬನ್ನಿ. secretary ಗಳಿಗೆ ಲೋಡ್ ಕಡಿಮೆ ಮಾಡಬೇಕೆಂದರೆ DC ಗಳಿಗೆ ಹೆಚ್ಚು ಪವರ್ಸ್ ಕೊಡಿ. ಆಗ Divisional Commissioners posts ಅಗತ್ಯವೇ ಇರುವುದಿಲ್ಲ. ಇದೊಂದು ಹೋಗಲಿ. ಇವರಲ್ಲದೆ Joint Directors ಗಳೆಂದು ಇದ್ದಾರೆ. ಅವರಿಗೆ supervision ಕೆಲಸವೆಂದು ಕೊಟ್ಟಿರುತ್ತೀರಿ. ಅವರೇನು supervision ಕೆಲಸ ಮಾಡುತ್ತಾರೆ? ಅವರು efficience ಏನಾದರೂ improve ಮಾಡುತ್ತಾರಾ? ಅವರಿಂದ supervision ಆಗುತ್ತಿದೆಯೇ? ಇದರಿಂದ ಭ್ರಷ್ಟಾಚಾರ ಕಡಿಮೆಯಾಗುತ್ತಿದೆಯೇ? ಏನೂ ಆಗುತ್ತಿಲ್ಲ, ಇನ್ನೂ ಜಾಸ್ತಿಯಾಗುತ್ತಿದೆ. ಅದೇ ತರಹ ಇದೂ ಕೂಡ ಆಗುತ್ತದೆ. ಆದ್ದರಿಂದ ನಾವೇನು ಹೇಳುತ್ತೇವೆ ಎಂದರೆ, ಅನುಪಯುಕ್ತವಾಗಿರತಕ್ಕಂಥ ಹುದ್ದೆಗಳನ್ನು ರದ್ದು ಮಾಡುವುದು, watseful expenditure ಅನ್ನು cut down ಮಾಡುವುದು, ಈ ಕಾರಣದಿಂದ ನಾವು ಹೇಳಿದ್ದೇವೆಯೇ ಹೊರತು ಇದರಲ್ಲಿ ಪ್ರತಿಷ್ಠೆ ಇಲ್ಲ, ಎಂಥಾದ್ದೂ ಇಲ್ಲ. ನೀವು ಇದನ್ನು consider ಮಾಡಿ. ನಾವು ಪಾಸ್ ಮಾಡಿಕೊಳ್ಳುತ್ತೇವೆ ಎಂದರೆ ಪಾಸ್ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಈ ಸರ್ಕಾರ ಈ ಬಿಲ್ ಅನ್ನು ಪಾಸ್ ಮಾಡಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದೆ. ಇವರಿಗೆ ಜನರ ಭಾವನೆಗಳಿಗೆ ಸ್ಪಂದಿಸತಕ್ಕಂಥ ಮನಸ್ಸು ಅಥವಾ ಆಲೋಚನೆಗಳಿಲ್ಲ. ಇವರು ತಮ್ಮ ವಿವೇಚನೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಇದು ಜನರ ಹಿತಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಿಸಿಲ್ಲ. ಇದನ್ನು ತಪ್ಪಿಸಿ, ಈ ಹಣವನ್ನು ಉಳಿಸಿ, ಅದನ್ನು ಯೋಗ್ಯ ಕೆಲಸಗಳಿಗೆ ಬಳಕೆ ಮಾಡಿ ಕೊಳ್ಳಬಹುದಾಗಿತ್ತು. ನಮ್ಮ ಯಾವುದೇ ಭಾವನೆಗಳನ್ನು ಈ ಸರ್ಕಾರ ಗೌರವಿಸ ದಿರುವುದರಿಂದ, ಸರ್ಕಾರದ ಈ ಮೊಂಡುತನದ ವಿರುದ್ಧ ಪ್ರತಿಭಟಿಸಿ ನಾವು ಹೊರಗೆ ಹೋಗುತ್ತೇವೆ.

[ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು]

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಶಾಸನ ಸಭೆಯ ಯಾವುದೇ ಮಾತಿಗೂ ಮಾನ್ಯತೆ ನೀಡದ ರೀತಿಯಲ್ಲಿ ಮಂತ್ರಿಗಳು ವರ್ತಿಸುವುದು, ಯಾರೋ ಕುಳಿತುಕೊಂಡು ಹೇಳಿದ್ದನ್ನು ಇಲ್ಲಿ ನಾವು ಪಾಸ್ ಮಾಡಿಕೊಂಡು ಹೋಗುತ್ತೇವೆ ಎನ್ನುವುದು

ಸರಿಯಲ್ಲ. ನಿಮ್ಮ ಪಾರ್ಟಿ ಎಂ.ಎಲ್.ಎ.ಗಳೇ ಇದಕ್ಕೆ ಇಲ್ಲಿ ವಿರೋಧ ಮಾಡಿದ್ದಾರೆ. ಅದಕ್ಕೂ ನೀವು ಬೆಲೆ ಕೊಡುವುದಿಲ್ಲ ಎನ್ನುವಂತಹ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ನಮಗೂ ಇಚ್ಛೆಯಿಲ್ಲ. ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೆ.ಸಿ.ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು]

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗ್ಡೆ :– ಆಡಳಿತ ಪಕ್ಷದ ಎಂ.ಎಲ್.ಎ.ಗಳೇ ವಿರೋಧ ಮಾಡಿದರೂ, ಅದನ್ನಾದರೂ ಸರ್ಕಾರ ಗಣನೆಗೆ ತೆಗೆದುಕೊಳ್ಳದಿರುವುದನ್ನು ಪ್ರತಿಭಟಿಸಿ ನಾನೂ ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು]

(ಗೊಂದಲ)

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

" 2007 ರ ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 24 ರವರೆಗೆ

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

'ಖಂಡ 2 ರಿಂದ 24 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

[ಖಂಡ 2 ರಿಂದ 24 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ]

ಖಂಡ 1 ಇತ್ಯಾದಿ

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

[ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರುತ್ತದೆ]

ಪ್ರಸ್ತಾವದ ಅಂಗೀಕಾರ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, " 2007 ರ ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ" ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2007 ರ ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

[ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು]

ಅನುಬಂಧ –1

ಉಪಾಧ್ಯಕ್ಷರು :– ಈಗ ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿಕೆಯನ್ನು ನೀಡುತ್ತಾರೆ.